# ಕಮಲ ಪಥ

RNI No.:KARKAN/2023/84034 | ಸಂಪುಟ : 02 | ಸಂಚಿಕೆ : 01 | ಏಪ್ರಿಲ್ 2024 | ಬೆಂಗಳೂರು | ₹ 10/-



# ಎನ್‌ಡಿಎ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ



ಶ್ರೀ ಕೋಟಾ ಶ್ರೀನಿವಾಸ್ ಪೂಜಾರಿ, ಉಡುಪಿ-ಚಿಕ್ಕಮಗಳೂರು




ಶ್ರೀ ಪ್ರಜ್ವಲ್ ರೇವಣ್ಣ, ಹಾಸನ




ಕ್ಯಾ. ಬ್ರಿಜೇಶ್ ಚೌಟ, ದಕ್ಷಿಣಕನ್ನಡ




ಶ್ರೀ ಗೋವಿಂದ ಕಾರಜೋಳ, ಚಿತ್ರದುರ್ಗ (ಎಸ್.ಸಿ.)




ಶ್ರೀ ವಿ. ಸೋಮಣ್ಣ, ತುಮಕೂರು



ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಮಂಡ್ಯ



ಶ್ರೀ ಯದುವೀರ್ ಕೃಷ್ಣರಾಜದತ್ತ ಒಡೆಯರ್, ಮೈಸೂರು



ಶ್ರೀ ಎಸ್. ಬಾಲರಾಜ್,ಚಾಮರಾಜನಗರ (ಎಸ್.ಸಿ.)

# ಮತ್ತೊಮ್ಮೆ ಮೋದಿ ಸರ್ಕಾರ, ನಮ್ಮ ಜವಾಬ್ದಾರಿ

**ಲೋ**ಕಸಭೆ ಚುನಾವಣೆಯ ಹೊಸ್ತಿಲಿನಲ್ಲಿ ನಿಂತಿದ್ದೇವೆ. ನಮಗೆ ಸಕಾರಾತ್ಮಕ ವಾತಾವರಣವಿರುವ ಇಂತಹ ಸನ್ನಿವೇಶದಲ್ಲಿ ನಿರಾಸಕ್ತಿ ತೋರುವಂತಿಲ್ಲ ಹಾಗೂ ಜವಾಬ್ದಾರಿ ಮರೆಯುವಂತಿಲ್ಲ. ನಮ್ಮ ಜೊತೆಗೆ ದೊಡ್ಡ ಕಾರ್ಯಕರ್ತರ ಪಡೆಯಿದೆ. ಈ ಪಡೆಯನ್ನು ಯುದ್ಧಕ್ಕೆ ಸನ್ನದ್ಧಗೊಳಿಸುವ ಮಹತ್ತರ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಇದಕ್ಕೆಲ್ಲಾ ಸಮರ್ಪಕ ಕಾರ್ಯ ಯೋಜನೆಯನ್ನು ರೂಪಿಸಿ ಕಾರ್ಯಕರ್ತರ ಪಡೆಯನ್ನು ಕಾರ್ಯಸಿದ್ಧವಾಗಿಸುವ ಯೋಜನೆ ಕಾರ್ಯರೂಪಕ್ಕೆ ತರಬೇಕಿದೆ. '**ಯುದ್ಧಕ್ಕೂ ಮೊದಲು ಹರಿಯುವ ಬೆವರು, ಯುದ್ಧದಲ್ಲಿ ಹರಿಸುವ ರಕ್ತದ ಪ್ರಮಾಣವನ್ನು ಕಡಿಮೆಗೊಳಿಸುತ್ತದೆ**' ಎಂಬ ಮಾತಿನಂತೆ ಚುನಾವಣೆಯ ಮೊದಲ ತಯಾರಿಗಳು ಅತ್ಯಂತ ಮಹತ್ವ ಪಡೆದುಕೊಳ್ಳುತ್ತವೆ. ಈ ನಿಟ್ಟಿನಲ್ಲಿ ಬಿಜೆಪಿಯಲ್ಲಿ ವ್ಯವಸ್ಥಿತವಾದ ಕಾರ್ಯ ಯೋಜನೆಯೊಂದಿಗೆ ಚುನಾವಣಾ ಕಾರ್ಯಚಟುವಟಿಕೆಗಳು ಈಗಾಗಲೇ ಪ್ರಾರಂಭವಾಗಿದೆ. ರಾಜ್ಯ ಕಾರ್ಯಾಲಯದಿಂದ ಹಿಡಿದು ಬೂತ್ ಮಟ್ಟದವರೆಗೆ ಒಂದಲ್ಲಾ ಒಂದು ಕಾರ್ಯಚಟುವಟಿಕೆ ಕೇಂದ್ರದ ಮಾರ್ಗದರ್ಶನದಂತೆ ನಡೆಯುತ್ತಿದೆ. ಪ್ರಮುಖರು, ಕಾರ್ಯಕರ್ತರು, ಅಭ್ಯರ್ಥಿಗಳು ಮತದಾರರ ನಡುವೆ ಇದ್ದು ಚಟುವಟಿಕೆ ಮಾಡುತ್ತಿದ್ದರೆ, ಅವರಿಗೆ ಬೇಕಾಗುವ ಪೂರಕ ಕಾರ್ಯವನ್ನು ರಾಜ್ಯ ಕಾರ್ಯಾಲಯದ ಚುನಾವಣಾ ವಿಭಾಗಗಳು ನಿರ್ವಹಿಸುತ್ತಿವೆ. ಈಗಾಗಲೇ ಆರಂಭವಾದ ಸಮಾವೇಶ, ಸಭೆ, ಅಭಿಯಾನ ಜೊತೆಗೆ ಮೋದಿಯಂತಹ ಸಮರ್ಥ ನಾಯಕತ್ವದ ಬದ್ಧತೆ, ಕಾರ್ಯಶೈಲಿ, ದೃಢ ನಿರ್ಧಾರಗಳು ನಮ್ಮ ಪರವಾದ ಒಂದು ಗೆಲುವಿನ ಅಲೆಯನ್ನು ಸೃಷ್ಟಿಸಿದೆ. ಇದರಲ್ಲಿ ಯಾವುದೇ ಅನುಮಾನವಿಲ್ಲ.

ವಾತಾವರಣದಲ್ಲಿ ಇರುವ ಗಾಳಿಯನ್ನು ಟೈಯರಿನ ಒಳಗೆ ತುಂಬಿಸಿದಾಗ ಮಾತ್ರ ಟೈರಿಗೆ ಗಾಡಿಯನ್ನು ಎಳೆಯುವ ಸಾಮರ್ಥ್ಯ ಬರುತ್ತದೆ. ವಾತಾವರಣದಲ್ಲಿರುವ ಗಾಳಿಯನ್ನು ನಾವು ದೇಹದೊಳಗೆ ತೆಗೆದುಕೊಂಡಾಗ ಮಾತ್ರ ನಮ್ಮ ಉಸಿರಾಟ ಸಾಧ್ಯ. ಆಗ ಗಾಳಿಯು ಉಪಯೋಗಕ್ಕೆ ಬಂದಂತಾಗುತ್ತದೆ, ನಮಗೂ ಅಸ್ತಿತ್ವ ಇರುತ್ತದೆ. ನಮ್ಮ ಪರವಾದ ಅಲೆ ಇದೆ. ಇದು ನಮಗೆ ಮತಗಟ್ಟೆಯೊಳಗೆ ಬೀಳುವ ಮತವಾಗಿ ಪರಿವರ್ತನೆಯಾಗಬೇಕು. ಅದಕ್ಕೆ ಬೂತ್ ಮಟ್ಟದಲ್ಲಿ ಹೆಚ್ಚಿನ ಕ್ರಿಯಾಶೀಲವಾಗಿ ಜನರನ್ನು ತಲುಪಬೇಕು. ಮೇಲ್ಮಟ್ಟದಲ್ಲಿ ಆದ ತಯಾರಿ, ಯೋಜನೆ ಯಶಸ್ವಿಯಾಗುವುದು ಬೂತ್ ಮಟ್ಟದಲ್ಲಿ ಅಧ್ಯಕ್ಷರು, ಪೇಜ್ ಪ್ರಮುಖರು, ಬೂತ್ ಪದಾಧಿಕಾರಿಗಳು ಮಾಡುವ ಕೆಲಸದ ಕಾರ್ಯವೈಖರಿಯ ಮೇಲೆ ಅವಲಂಬಿತವಾಗಿರುತ್ತದೆ. ಅದಕ್ಕೆ ಬೂತ್ ಮಟ್ಟದ ಕಾರ್ಯಕರ್ತರು ತಮ್ಮ ವ್ಯಾಪ್ತಿಯಲ್ಲಿ ನಮ್ಮ ಸರ್ಕಾರದ ಯೋಜನೆಗಳ ಫಲಾನುಭವಿಗಳನ್ನು, ಮತದಾರರನ್ನು ಭೇಟಿಯಾಗಿ ಮತ್ತೊಮ್ಮೆ ಮೋದಿ ಸರ್ಕಾರ ಬರುವ ಅವಶ್ಯಕತೆಗಳನ್ನು ಮನದಟ್ಟು ಮಾಡಬೇಕಿದೆ.

ಸಂಪಾದಕೀಯ

ಮೋದಿ ಸರ್ಕಾರದ ಕಾರ್ಯಶೈಲಿಯನ್ನು ಮೆಚ್ಚಿ ನಮ್ಮ ಜೊತೆಯಾಗಲು ನವ ಮತದಾರರು ಸಿದ್ದರಾಗಿದ್ದಾರೆ. ಈ ಮತದಾರರನ್ನು ಚುನಾವಣೆ ದಿನಾಂಕದವರೆಗೆ ಕನಿಷ್ಠ ಮೂರು ಬಾರಿಯಾದರೂ ಭೇಟಿಯಾಗಿ ಅವರು ಸದಾ ನಮ್ಮೊಂದಿಗೆ ಇರುವಂತೆ, ನಮಗೇ ಮತದಾನ ಮಾಡುವಂತೆ ನೋಡಿಕೊಳ್ಳುವ ಜವಾಬ್ದಾರಿಯೂ ನಮ್ಮ ಮೇಲಿದೆ.

ದೇಶದ ಹಿತದೃಷ್ಟಿಯಿಂದ ಈ ಬಾರಿ 400 ಕ್ಕೂ ಹೆಚ್ಚು ಸ್ಥಾನಗಳಿಂದ ಮತ್ತೊಮ್ಮೆ ಮೋದಿ ಸರ್ಕಾರವನ್ನು ಗೆಲ್ಲಿಸಲು ನಮ್ಮದು ಅಮೂಲ್ಯವಾದ ಕೊಡುಗೆ ಸಲ್ಲಿಸಬೇಕಿದೆ. ಅದಕ್ಕೆ ನಮ್ಮ ಕ್ಷೇತ್ರದ ಅಭ್ಯರ್ಥಿಯನ್ನು ಅತೀ ಹೆಚ್ಚು ಮತಗಳಿಂದ ಗೆಲ್ಲಿಸುವ ಗುರುತರವಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ವಿಕಸಿತ ಭಾರತಕ್ಕಾಗಿ ಮತ್ತೊಮ್ಮೆ ಮೋದಿ ಸರ್ಕಾರವನ್ನು ಗೆಲ್ಲಿಸುವ ಬದ್ಧತೆ ನಮ್ಮದಾಗಬೇಕು.

ಎಷ್ಟೇ ತಯಾರಿ ನಡೆಸಿದರೂ ಕೊನೆಯ ಕ್ಷಣದ ತಂತ್ರಗಾರಿಕೆ ಮತ್ತು ಚಟುವಟಿಕೆಗಳು ಮುಖ್ಯವಾಗುತ್ತದೆ. '**ನನ್ನ ಬೂತ್, ನನ್ನ ಕಾರ್ಯಕ್ಷೇತ್ರವಾಗಲಿ, ನನ್ನ ಬೂತ್‌ನಲ್ಲಿ ಮತದಾನದ ಪ್ರಮಾಣ ಹೆಚ್ಚಾಗಲಿ, ನನ್ನ ಬೂತ್‌ನಲ್ಲಿ ನನ್ನ ಪಕ್ಷಕ್ಕೆ ಹೆಚ್ಚಿನ ಮತ ಬರಲಿ**'. ಈ ಚಿಂತನೆ, ಅದಕ್ಕೆ ತಕ್ಕುದಾದ ಯೋಜನೆ, ಅಗತ್ಯ ತಂತ್ರಗಾರಿಕೆಯೊಂದಿಗೆ ಹೆಚ್ಚು ಹೆಚ್ಚು ಕ್ರಿಯಾಶೀಲರಾಗೋಣ. ಮತ್ತೊಮ್ಮೆ ಕೇಂದ್ರದಲ್ಲಿ ಮೋದಿ ಸರ್ಕಾರ ಬರಲು ನಮ್ಮ ಯೋಗದಾನ ಮಾಡೋಣ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಶ್ರೀ ಹೆಚ್.ಎಸ್. ಗೋಪಿನಾಥ್
ಮೊ : 9341231253

**ಸಂಪಾದಕರು**
ಶ್ರೀ ಬಿದರೆ ಪ್ರಕಾಶ್
ಮೊ : 9513447961


## ಸುಭಾಷಿತ



**ಜೀವನ ಎಂಬುದು ಕಠಿಣ ಸತ್ಯ ಅದನ್ನು ಎದುರಿಸಿ, ನಿಮ್ಮ ಮಾರ್ಗದಲ್ಲಿ ಮುಂದುವರೆಯಿರಿ. ಅದು ಅಭೇದ್ಯವಾಗಿರಬಹುದು. ಆದರೆ ಆತ್ಮ ಅದಕ್ಕಿಂತ ಬಲಯುತವಾದುದು.**
**- ಸ್ವಾಮಿ ವಿವೇಕಾನಂದ**





**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com
#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005




## ಈ ಸಂಚಿಕೆಯಲ್ಲಿ





06 10 ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಕಳೆದ ವರ್ಷದ ಸಾಧನೆ





13 ಎನ್‌ಡಿಎ ಗೆಲುವಿನ ಗುರಿ

- **ದೀವಟಿಗೆ :** ರಾಮಚಂದ್ರ ಪಾಂಡುರಂಗ ಟೋಪೆ................................ 05
- ಎನ್‌ಡಿಎ ಅಭ್ಯರ್ಥಿಗಳ ವಿವರ..................................................16
- ಕಾವೇರಿದ ಲೋಕಸಭಾ ಚುನಾವಣೆ ..........................................18
- ಬಿಜೆಪಿ ರಾಜ್ಯಾಧ್ಯಕ್ಷರ ಪ್ರವಾಸ ...................................................25
- ಬಿಜೆಪಿಯ ಜನ ಕಲ್ಯಾಣ ಯೋಜನೆಗಳಿಗೆ ತಿಲಾಂಜಲಿ ಇತ್ತ ಕೈ ಸರ್ಕಾರ............30




ದೀವಟಿಗೆ



# ರಾಮಚಂದ್ರ ಪಾಂಡುರಂಗ ಟೋಪೆ

**(1814 – 18 ಏಪ್ರಿಲ್ 1859)**

**ತಾತ್ಯಾ ಟೋಪೆ ಎಂಬ ಹೆಸರಿನಿಂದ ಪ್ರಖ್ಯಾತರಾಗಿದ್ದವರು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷ್ ಸೇನೆಯ ವಿರುದ್ಧ ಹೋರಾಡಿದ ಮಹಾನ್ ಸೇನಾನಿ ರಾಮಚಂದ್ರ ಪಾಂಡುರಂಗ ಟೋಪೆ.**


ಹರೀಶ್ ಆತ್ರೇಯ
ಬಿಜೆಪಿ ಕಾರ್ಯಕರ್ತರು


**ಪ್ರಾರಂಭಿಕ ಜೀವನ :** ತಾತ್ಯಾ ಟೋಪೆ ಅವರು ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಯೆವೋಲಾ ಗ್ರಾಮದಲ್ಲಿ 1814ರ ವರ್ಷದಲ್ಲಿ ಜನಿಸಿದರು. ಅವರ ತಂದೆ ಪಾಂಡುರಂಗ ರಾವ್ ಜವಳೇಕರ್ ಮತ್ತು ತಾಯಿ ರುಕ್ಮಾಬಾಯಿ. ತಾತ್ಯಾ ಟೋಪೆ ಪ್ರಾರಂಭದಲ್ಲಿ ಬಿಥುರ್ ಪ್ರಾಂತ್ಯದ ನಾನಾ ಸಾಹೇಬನ ಸೇನಾನಿಯಾಗಿದ್ದರು. ಕಾಲಕ್ರಮೇಣದಲ್ಲಿ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಅವರು ಝಾನ್ಸಿ ರಾಣಿ ಲಕ್ಷ್ಮೀ ಬಾಯಿ ಅವರ ನೆರವಿಗೆ ಬಂದು ಹೋರಾಡಿದರು.

**ಮಹಾನ್ ಸಂಘಟನಾ ಚತುರ :** ಸಿಪಾಯಿ ದಂಗೆ ಎಂದು ಬಣ್ಣಿತವಾದ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾನ್ಪುರ, ಕಲ್ಪಿ, ಜಾನ್ಸಿಗಳಲ್ಲಿ ಯುದ್ಧ ಸಂಘಟನೆಗಳನ್ನು ನಡೆಸಿದ ತಾತ್ಯಾ ಟೋಪೆ ಬ್ರಿಟಿಷ್ ಸೇನೆಯನ್ನು ಮಣ್ಣು ಮುಕ್ಕುವಂತೆ ಮಾಡಿದ್ದರು. ಈ ಪ್ರದೇಶಗಳನ್ನು ಬ್ರಿಟಿಷ್ ಸೇನೆ ಪುನಃ ವಶಪಡಿಸಿಕೊಂಡಿತಾದರೂ, ತಾತ್ಯಾ ಅವರು ದೇಶದ ಇತರೆಡೆಗಳಾದ ಬಂದೇಲ್ಖಾಂಡ್ ಮಧ್ಯಭಾರತ, ರಾಜಾಸ್ಥಾನದ ಭರತ್ಪುರ, ಬಿತುಹರ್ ಮುಂತಾದ ಬಹುತೇಕ ಕಡೆಗಳಲ್ಲಿ ಸೇನೆಯನ್ನು ನಿರಂತರವಾಗಿ ಸಂಘಟಿಸುತ್ತಲೇ ಇದ್ದರು.

ನರ್ಮದಾ, ಬೆಟ್ವಾ ನದಿ ತೀರಗಳಿಂದ ಮೊದಲ್ಗೊಂಡು ದಕ್ಷಿಣದ ಖಾಂಡೇಶ್ ವರೆಗೆ ಅವರು ಕ್ರಾಂತಿಯ ಕಿಡಿಯನ್ನು ಜ್ವಾಜ್ವಲ್ಯಮಾನವಾಗಿ ಉರಿಸಿದ್ದರು. ಅವರ ಸಂಘಟನಾ ಶಕ್ತಿ ಅತ್ಯದ್ಭುತವಾದುದೆಂದು ಚರಿತ್ರೆ ದಾಖಲಿಸಿದೆ. ಈ ಎಲ್ಲಾ ಪ್ರದೇಶದ ಜನರಲ್ಲಿ ಅವರು ಬಹಾದ್ದೂರ್ ತಾತ್ಯಾ ಟೋಪೆ ಎಂದು ಪ್ರಸಿದ್ಧರಾಗಿದ್ದರು.

**ನಂಬಿಕೆ ದ್ರೋಹ :** ಎಲ್ಲ ರೀತಿಯಲ್ಲೂ ಬ್ರಿಟಿಷ್ ಸಿಂಹಾಸನಕ್ಕೆ ಸಿಂಹಸ್ವಪ್ನರಾಗಿದ್ದ ತಾತ್ಯಾ ಟೋಪೆ ಅದ್ಭುತವಾದದ್ದನ್ನು ಸಾಧಿಸುವುದರತ್ತ ಮುನ್ನುಗ್ಗಿದ್ದರು. ಆದರೆ ಮಾನಸಿಂಗನೆಂಬ ಒಬ್ಬ ನಂಬಿಕೆಯ ಗೆಳೆಯ ತಾತ್ಯಾ ಟೋಪೆಯವರಿಗೆ ಮಿತ್ರದ್ರೋಹಿಯಾಗಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಅವರ ಸುಳಿವನ್ನು ಕೊಟ್ಟು ಅವರ ಬಂಧನಕ್ಕೆ ಕಾರಣನಾದ. ಗ್ವಾಲಿಯರಿನ ದೊರೆಯಾಗಿ ಜಿವಾಜಿ ರಾವ್ ಸಿಂಧಿಯಾ ಕೂಡಾ ಬ್ರಿಟಿಷರಿಗೆ ತನ್ನ ಸೇನೆಯನ್ನು ನೆರವು ನೀಡಿದ. ಬಹುಶಃ ಅದಿಲ್ಲದಿದ್ದರೆ ಝಾನ್ಸಿ ರಾಣಿ ಲಕ್ಷ್ಮೀಬಾಯಿ ಮತ್ತು ತಾತ್ಯಾ ಟೋಪೆಯಂತಹವರ ಸಾಹಸವನ್ನು ಬ್ರಿಟಿಷ್ ಸೇನೆ ತಡೆದುಕೊಳ್ಳಲು ಸಾಧ್ಯವಿರುತ್ತಿರಲಿಲ್ಲ.

ತಾತ್ಯಾ ಟೋಪಿ ತನ್ನ ಗೆರಿಲ್ಲಾ ಯುದ್ಧದಿಂದ ಬ್ರಿಟಿಷರಿಗೆ ಭೀತಿ ಹುಟ್ಟಿಸಿದ್ದರು. ಹಾಗಾಗಿ ಬ್ರಿಟಿಷರು ನಮ್ಮ ಭಾರತೀಯ ಒಡಕುತನವನ್ನೇ ಬಂಡವಾಳವಾಗಿಸಿಕೊಂಡು ತಾತ್ಯಾ ಟೋಪೆಯವರನ್ನು ಮೋಸದ ಸುಳಿಗೆ ಸಿಲುಕಿಸಿ ತನ್ನ ಚಕ್ರಾಧಿಪತ್ಯವನ್ನು ಮುಂದುವರೆಸಿತು. ತಾತ್ಯಾ ಟೋಪೆಯಂತಹ ಮಹಾವೀರ ಬ್ರಿಟಿಷ್ ಸಾಮ್ರಾಜ್ಯವನ್ನು ಇನ್ನಿಲ್ಲದಂತೆ ಅಲುಗಿಸಿದ್ದರು ಮತ್ತು ಅದಕ್ಕೆ ಈ ನೆಲ ಶಾಶ್ವತವಾಗಿ ದಕ್ಕುವಂತದಲ್ಲ ಎಂಬುದನ್ನು ಮನಮುಟ್ಟುವಂತೆ ಲಿಖಿಸಿದ್ದರು ಎಂಬುದು ಮಾತ್ರ ಅಲ್ಲಗಳೆಯಲಾರದ ಸತ್ಯ.

ಏಪ್ರಿಲ್ 18, ಭಾರತ ಸ್ವಾತಂತ್ರ್ಯಸಂಗ್ರಾಮದ ಮಹಾನ್ ಹೋರಾಟಗಾರರಾದ ತಾತ್ಯಾ ಟೋಪೆ ಅವರು ದೇಶಕ್ಕಾಗಿ ಪ್ರಾಣತೆತ್ತ ದಿನ. ಏಪ್ರಿಲ್ 18, 1859ರ ವರ್ಷದಲ್ಲಿ ಬೃಹತ್ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಅವಿಸ್ಮರಣೀಯವಾಗಿ ಹೋರಾಡಿದ ಈತ ಕೊನೆಗೆ ತಮ್ಮ ಮಿತ್ರದ್ರೋಹಿಯೊಬ್ಬನಿಂದ ಬ್ರಿಟಿಷ್ ಸೇನೆಗೆ ಸೆರೆಸಿಕ್ಕಿ ಮರಣದಂಡನೆಗೆ ಗುರಿಯಾಗಿ ಕೇವಲ ತಮ್ಮ 45ನೆಯ ವಯಸ್ಸಿನಲ್ಲಿ ದೇಶದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಾಣತೆತ್ತರು. ಅವರೊಡನೆ ಗಲ್ಲಿಗೇರಿಸಲ್ಪಟ್ಟ ಇತರ ನಾಯಕರುಗಳೆಂದರೆ ನಾನಾ ಸಾಹಿಬ್, ಅಜಿಮುಲ್ಲಾ ಖಾನ್, ಅಹಮದುಲ್ಲಾಹ್ ಶಾ, ಕುನ್ವರ್ ಸಿಂಗ್, ಜನರಲ್ ಬಕ್ತ್ ಖಾನ್, ಅಜೀಜನ್, ಬೇಗಂ ಹಜರತ್ ಮಹಲ್ ಮುಂತಾದವರು.




# 10 ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಕಳೆದ 10 ವರ್ಷದ ಸಾಧನೆ



## ಬಡವರು ಮತ್ತು ಹಿಂದುಳಿದ ವರ್ಗಗಳಿಗೆ ಆದ್ಯತೆ

- ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ ದೇಶದ 80 ಕೋಟಿಗೂ ಅಧಿಕ ಮಂದಿಗೆ ಉಚಿತ ಅಹಾರ ಧಾನ್ಯ ವಿತರಣೆ.
- ಹರ್ ಘರ್ ಜಲ್ ಯೋಜನೆ: 11.88 ಕೋಟಿ ಬಡ ಕುಟುಂಬಗಳಿಗೆ ನಲ್ಲಿ ಮೂಲಕ ಶುದ್ಧ ಕುಡಿಯುವ ನೀರು.
- ಪ್ರಧಾನ ಮಂತ್ರಿ ಆವಾಸ್ ಯೋಜೆಯಡಿ 3 ಕೋಟಿಗೂ ಹೆಚ್ಚು ಮನೆಗಳ ನಿರ್ಮಾಣ.
- ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ 11.72 ಕೋಟಿಗೂ ಹೆಚ್ಚು ಶೌಚಾಲಯಗಳ ನಿರ್ಮಾಣ.
- ಪ್ರಧಾನ ಮಂತ್ರಿ ಸ್ವ-ನಿಧಿ ಯೋಜನೆಯಡಿ 34.45 ಲಕ್ಷ ಬೀದಿ ಬದಿ ವ್ಯಾಪಾರಿಗಳಿಗೆ ಜಾಮೀನು ರಹಿತ ಸಾಲ.
- ಮುದ್ರಾ ಯೋಜನೆಯಡಿ 39.65 ಕೋಟಿ ಉದ್ಯಮಿಗಳಿಗೆ ಸಾಲ.
- ಹಿಂದುಳಿದ ವರ್ಗಗಳ ಆಯೋಗಕ್ಕೆ ಸಾಂವಿಧಾನಿಕ ಸ್ಥಾನಮಾನ.
- ಕೋವಿಡ್ ಸಂದರ್ಭದಲ್ಲೂ 20 ಕೋಟಿ ಮಹಿಳೆಯರಿಗೆ ನೇರ ನಗದು ವರ್ಗಾವಣೆ ಮೂಲಕ ಸಹಾಯ ಧನ.
- ಸ್ಟ್ಯಾಂಡಪ್ ಇಂಡಿಯಾ ಯೋಜನೆಯಡಿಯಲ್ಲಿ ಪ. ಜಾ ಮತ್ತು ಪ.ಪಂ ದ ಫಲಾನುಭವಿಗಳಿಗೆ 7,351 ಕೋ.ರೂ ಸಾಲ.
- ಪ್ರಸ್ತುತ ಕೇಂದ್ರದ ಸಚಿವರಲ್ಲಿ ಶೇ 60 ಪ.ಜಾ, ಪ ಪಂ,ಒಬಿಸಿ ವರ್ಗಕ್ಕೆ ಸೇರಿದವರು.
- 2014 ರ ನಂತರ ದೇಶದಾದ್ಯಂತ ಏಕಲವ್ಯ ವಸತಿ ಶಾಲೆಗ ಸಂಖ್ಯೆ ಐದು ಪಟ್ಟು ಹೆಚ್ಚಳ.



## ಪ್ರಮುಖ ಸಾಧನೆಗಳು

- 48.27 ಕೋಟಿಗೂ ಹೆಚ್ಚು ಜನ ಧನ್ ಖಾತೆ ಮೂಲಕ ಬಡವರನ್ನು ಬ್ಯಾಂಕಿಂಗ್ ವ್ಯವಸ್ಥೆಯೊಳಗೆ ಜೋಡಣೆ.
- 29.75 ಕೋಟಿ ಪ್ರಧಾನ ಮಂತ್ರಿ ಜೀವನ್ ಸುರಕ್ಷಾ ವಿಮಾ ಯೋಜನೆಯ ಫಲಾನುಭವಿಗಳು.
- 13.53 ಕೋಟಿ ಜನ ಪ್ರಧಾನ ಮಂತ್ರಿ ಜಿವನ ಜ್ಯೋತಿ ವಿಮಾ ಯೋಜನೆಯ ಫಲಾನುಭವಿಗಳು.
- 37 ಕೋಟಿಗೂ ಹೆಚ್ಚು ಜನರಿಗೆ ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ ಕಾರ್ಡ್ ಮೂಲಕ ಬಡ ಮತ್ತು ಮಧ್ಯಮ ವರ್ಗದವರಿಗೆ ಉಚಿತ ಚಿಕಿತ್ಸೆ.

- ವಿವಿಧ ಯೋಜನೆಗಳಲ್ಲಿ ನೇರ ನಗದು ವರ್ಗಾವಣೆ(ಡಿಬಿಟಿ) ಮೂಲಕ 25 ಲಕ್ಷ ಕೋಟಿಗೂ ಹೆಚ್ಚು ಮೊತ್ತವನ್ನು ಫಲಾನುಭವಿಗಳ ಖಾತೆಗೆ ವರ್ಗಾವಣೆ.
- ಸೌಭಾಗ್ಯ ಯೋಜನೆಯಡಿ ವಿದ್ಯುತ್ ಸಂಪರ್ಕ ಇಲ್ಲದ ಮತ್ತು ದುರ್ಗಮ ಪ್ರದೇಶಗಳಲ್ಲಿರುವ ದೇಶದ 2.86 ಕೋಟಿ ಮನೆಗಳಿಗೆ ವಿದ್ಯುತ್ ಸಂಪರ್ಕ.
- ಹೊಗೆ ಮುಕ್ತ- ಆರೋಗ್ಯಯುಕ್ತ ಜೀವನಕ್ಕಾಗಿ ಉಜ್ವಲ ಯೋಜನೆಯಡಿ 9.6 ಕೋಟಿ ಉಚಿತ ಅಡುಗೆ ಅನಿಲ ವಿತರಣೆ.
- ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಫಲಾನುಭವಿ ರೈತರಲ್ಲಿ ಶೇ 71 ರಷ್ಟು ಮಂದಿ ಪ.ಜಾ, ಪ ಪಂ ಮತ್ತು ಒಬಿಸಿಗೆ ಸೇರಿದವರು.
- ಬೆಂಬಲ ಬೆಲೆಯ ಲಾಭ ಪಡೆದವರಲ್ಲಿ ಸಣ್ಣ ಹಾಗೂ ಅತಿ ಸಣ್ಣ ರೈತರಲ್ಲಿ ಶೇ.80 ಕ್ಕೂ ಅಧಿಕ ಪ.ಜಾ, ಪ ಪಂ ಮತ್ತು ಒಬಿಸಿಗೆ ಸೇರಿದವರು.
- ಪ್ರಧಾನಮಂತ್ರಿ ವಸತಿ ಯೋಜನೆಯಡಿ ಗ್ರಾಮೀಣ ಭಾಗದಲ್ಲಿ ಶೇ 45 ಮಂದಿ ಫಲಾನುಭವಿಗಳು ಪ.ಜಾ, ಪ ಪಂ ಮತ್ತು ಒಬಿಸಿಗೆ ಸೇರಿದವರು.
- ಮುದ್ರಾ ಯೋಜನೆ ಫಲಾನುಭವಿಗಳಲ್ಲಿ ಶೇ 50ಕ್ಕೂ ಅಧಿಕ ಮಂದಿ ಪ.ಜಾ, ಪ ಪಂ ಮತ್ತು ಒಬಿಸಿಗೆ ಸೇರಿದವರು.
- ದೇಶಾದ್ಯಂತ ಸಿಎಎ ಜಾರಿ. ಪಾಕಿಸ್ಥಾನ, ಅಫಘ್ಾನಿಸ್ಥಾನ, ಬಾಂಗ್ಲಾದೇಶದಲ್ಲಿನ ಧಾರ್ಮಿಕ ಅಲ್ಪಸಂಖ್ಯಾತರಿಗೆ ಭಾರತದಲ್ಲಿ ಪೌರತ್ವ ನೀಡುವ ಕಾನೂನು.



## ಎಲ್ಲರನ್ನೊಳಗೊಂಡ ಆಡಳಿತ

- ಶಿಕ್ಷಣ ಕ್ಷೇತ್ರದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ(EWS) ಶೇ.10 ರಷ್ಟು ಮೀಸಲಾತಿ.
- ವೈದ್ಯಕೀಯ ಶಿಕ್ಷಣದಲ್ಲಿ ಅಖಿಲ ಭಾರತದ ಕೋಟಾದಲ್ಲಿ ಒಬಿಸಿ ಮತ್ತು ಆರ್ಥಿಕ ದುರ್ಬಲ ವರ್ಗಗಳಿಗೆ ಮೀಸಲಾತಿ.
- ತೃತೀಯ ಲಿಂಗಿಗಳ ಹಕ್ಕು ರಕ್ಷಣ ಕಾಯಿದೆ ಜಾರಿ.
- ಮಾದಕ ವಸ್ತುಗಳಿಂದ ಯುವಕರನ್ನು ದೂರವಿಡಲು ನಶ ಮುಕ್ತ ಭಾರತ ಅಭಿಯಾನ.
- ಅಲೆಮಾರಿಗಳ ಅಭಿವೃದ್ಧಿಗೆ ಅರೆ ಅಲೆಮಾರಿ ಬಡಕಟ್ಟು ರಾಷ್ಟ್ರೀಯ ಆಯೋಗ ಸ್ಥಾಪನೆ.
- ಮಾನ್ಯತೆ ಪಡೆದ ದಿವ್ಯಾಂಗದವರ ಸಂಖ್ಯೆಯನ್ನು 7 ರಿಂದ 21 ಕ್ಕೆ ಪರಿಷ್ಕರಣೆ.
- ಸಾಮಾಜಿಕ ಸಬಲೀಕರಣ ಸಚಿವಾಲಯವು ದಿವ್ಯಾಂಗರಿಗೆ ಸಹಾಯಕ ಸಲಕರಣೆಗಳನ್ನು ವಿತರಿಸಲು 2014 ತನಕ ಕೇವಲ 56 ಶಿಬಿರಗಳನ್ನು ಮಾತ್ರ ಮಾಡಿತ್ತು. 2014 ನಂತರ 13,528 ಶಿಬಿರಗಳನ್ನು ನಡೆಸಿದ್ದು 24.45 ಲಕ್ಷ ದಿವ್ಯಾಂಗರಿಗೆ ಲಾಭ.



## ಸಾಮಾಜಿಕ ಭದ್ರತೆ ಮತ್ತು ಕಾರ್ಮಿಕರ ಸಬಲೀಕರಣ

- ಕಾರ್ಮಿಕರ ಸಬಲೀಕರಣಕ್ಕಾಗಿ ಇ-ಶ್ರಮ, 28.85 ಕೋಟಿ ಅಸಂಘಟಿತ ಕಾರ್ಮಿಕರು ಇ-ಪೋರ್ಟನಲ್ಲಿ ನೋಂದಾವಣೆ.
- ಅಸಂಘಟಿತ ಕ್ಷೇತ್ರದ 49.29 ಕಾರ್ಮಿಕರಿಗೆ ಪ್ರಧಾನಮಂತ್ರಿ ಶ್ರಮಯೋಗಿ ಮಾನ್ ಧನ್ ಪಿಂಚಣಿ 60 ವರ್ಷದ ನಂತರ 3,000 ರೂ. ಪಡೆಯುವ ಯೋಜನೆ.
- ನೌಕರರ ರಾಜ್ಯ ವಿಮಾ ಪಾಲುದಾರಿಕೆಯನ್ನು ಉದ್ಯೋಗದಾತರು ಮತ್ತು ಉದ್ಯೋಗಿಗಳಿಂದ ಕಡಿತ.
- ಉದ್ಯೋಗದಾತರ ಕೊಡುಗೆ ಶೇ 4.75 ರಿಂದ ಶೇ 3.25 ಕ್ಕೆ ಉದ್ಯೋಗಿಗಳ ಕೊಡುಗೆಯನ್ನು ಶೇ 1.75 ರಿಂದ ಶೇ 0.75 ಕ್ಕೆ ಇಳಿಕೆ.
- ಕೋವಿಡ್ ಪರಿಹಾರವಾಗಿ ತಿಂಗಳಿಗೆ 15,000 ರೂ ಗಿಂತ ಕಡಿಮೆ ವೇತನ ಪಡೆಯುವ ಕಾರ್ಮಿಕರಿಗೆ ಅವರ ವೇತನದ ಶೇ 24 ರಷ್ಟು ಅವರ ಪಿಎಫ್ ಖಾತೆಗೆ ವರ್ಗ. 91.69 ಲಕ್ಷ ಕಾರ್ಮಿಕರು ಇದರ ಫಲಾನುಭವಿಗಳು



## ರೈತರ ಕಲ್ಯಾಣ

### ರೈತನ ಆದಾಯ ಹೆಚ್ಚಿಸುವಲ್ಲಿ ಕ್ರಮ

- 2013-14 ಕ್ಕಿಂತ 2022-23 ರಲ್ಲಿ ಕೃಷಿ ಬಜೆಟ್‌ನಲ್ಲಿ 5.7 ಪಟ್ಟು ಹೆಚ್ಚಳ.
- ಕೃಷಿ ಮೂಲಸೌಕರ್ಯ ನಿಧಿಯಡಿ 1 ಲಕ್ಷ ಕೋ.ರೂ. ಮೀಸಲು.
- ರೈತರಿಗೆ ವರ್ಷಕ್ಕೆ 6 ಸಾವಿರ ನೀಡುವ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ. 11 ಕೋಟಿಗೂ ಹೆಚ್ಚು ಫಲಾನುಭವಿಗಳು.
- ಮಣ್ಣಿನ ಗುಣಮಟ್ಟ ಮತ್ತು ಅದಕ್ಕನುಸಾರವಾಗಿ ಬೆಳೆ ಬೆಳೆಯುವ ಸಲುವಾಗಿ ಸುಮಾರು 23 ಕೋಟಿ ಮಣ್ಣಿನ ಆರೋಗ್ಯ ಕಾರ್ಡ್ ವಿತರಣೆ.
- 2013-14 ರ ನಂತರ ಬಾಸ್ಮತಿಯೇತರ ಅಕ್ಕಿಯ ರಫ್ತಿನ ಪ್ರಮಾಣ ಶೇ.109.7 ರಷ್ಟು ಹೆಚ್ಚಳ.
- ಕನಿಷ್ಠ ಬೆಂಬಲ ಬೆಲೆಯಲ್ಲಿ ಐತಿಹಾಸಿಕ ಏರಿಕೆ ಹಾಗೂ ಬೆಂಬಲ ಬೆಲೆಯ ಬೆಳೆಗಳ ವಿಸ್ತರಣೆ.
- ಎಣ್ಣೆಕಾಳುಗಳ ಖರೀದಿಯಲ್ಲಿ ಶೇ 1,500 ಹೆಚ್ಚಳ, ಬೇಳೆ ಕಾಳುಗಳ ಖರೀದಿಯಲ್ಲಿ ಶೇ 7,350 ಹೆಚ್ಚಳ.
- 2022-23 ನಡುವೆ ರಸಗೊಬ್ಬರಕ್ಕೆ ನೀಡುತ್ತಿದ್ದ ಸಬ್ಸಿಡಿಯಲ್ಲಿ ಶೇ 500 ರಷ್ಟು ಹೆಚ್ಚಳ.
- 2023-24 ರಲ್ಲಿ 20 ಲಕ್ಷ ಕೋ.ರೂ. ಕೃಷಿ ಸಾಲ ವಿತರಣೆ.
- ಪ್ರಕೃತಿ ವಿಕೋಪದಿಂದ ಉಂಟಾಗುವ ಬೆಳೆ ಹಾನಿಗೆ ನೀಡುವ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ 1.33 ಲಕ್ಷ ಕ್ಲೈಮ್.

- ಕೃಷಿಯಲ್ಲಿ ನೀರಿನ ವೈಜ್ಞಾನಿಕ ಬಳಕೆಗೆ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಜಾರಿ. 2021-26 ರಕ್ಕೆ ಈ ಯೋಜನೆಗೆ 93,068 ಕೋ.ರೂ. ಹಂಚಿಕೆ.
- 77,595 ಕೋ.ರೂಗಳಲ್ಲಿ 99 ನೀರಾವರಿ ಯೋಜನೆಗಳ ಕಾಮಗಾರಿ.
- ಬೆಳೆ ನಷ್ಟ ಪರಿಹಾರ ಹಿಂದಿನ ಶೇ 33 ರಿಂದ ಶೇ 50 ಕ್ಕೆ ಏರಿಕೆ.
- ಕೃಷಿ ಬಜೆಟ್ ಹಂಚಿಕೆಯಲ್ಲಿ 5.7 ಪಟ್ಟು ಹೆಚ್ಚಳ. 2013-14 ರಲ್ಲಿ 21,933 ಕೋಟಿ ರೂ, 2023-24 ರಲ್ಲಿ 1,25,036 ಕೋ.ರೂ.
- ಅಹಾರ ಉತ್ಪಾದನೆಯಲ್ಲಿ ಸಾರ್ವಕಾಲಿಕ ದಾಖಲೆ 2013-14 ರಲ್ಲಿ 165.05 MMT, ಇದ್ದಿದ್ದು 2022-23 ರಲ್ಲಿ 232.5 MMT ಕ್ಕೆ ಏರಿಕೆಯಾಗಿದೆ.
- ಗೋಧಿಗೆ ಬೆಂಬಲ ಬೆಲೆ ಪಾವತಿ 2006-14 ರಲ್ಲಿ 2.39 ಲಕ್ಷ ಕೋಟಿ ಇದ್ದರೆ ಮೋದಿ ಅವರ ಆಡಳಿತವಧಿಯಲ್ಲಿ (2014-22) 4.52 ಲಕ್ಷ ಕೋ.ರೂ.ಗೆ ಏರಿದೆ. ಗೋಧಿ ಎಂಎಸ್‌ಪಿಯಲ್ಲಿ 2013-14 ರಲ್ಲಿ ರೂ.1400 ಪ್ರತೀ ಕ್ವಿಂಟಾಲ್‌ಗೆ ಇದ್ದರೆ ಅದು 2021-22 ರಲ್ಲಿ ರೂ.2125 ಗೆ ಏರಿಕೆಯಾಗಿದೆ.
- ಭತ್ತಕ್ಕೆ ಬೆಂಬಲ ಬೆಲೆ ಪಾವತಿ 2006-14 ರಲ್ಲಿ ರೂ 3.09 ಲಕ್ಷ ಕೋ.ರೂ. ಇದ್ದರೆ ಮೋದಿ ಅವಧಿ 2014-22 ರಲ್ಲಿ 10.64 ಲಕ್ಷ ಕೋ.ರೂ. ಭತ್ತದ ಎಂಎಸ್‌ಪಿಯಲ್ಲಿ 2013-14 ರಲ್ಲಿ 1,310 ರೂ. ಪ್ರತೀ ಕ್ವಿಂಟಲ್ ಗೆ ಇದ್ದು, ಅದು 2021-22 ರಲ್ಲಿ ರೂ 2,040 ಗೆ ಏರಿಕೆಯಾಗಿದೆ.
- ರೈತರ ಬಂಜರು ಭೂಮಿ ನೀರಾವರಿಗೆ ಸೌರ ಫಲಕಗಳಿಗೆ ಉತ್ತೇಜನ.
- ಹಾಲಿನ ಉತ್ಪಾದನೆಯಲ್ಲಿ ಏರಿಕೆ. 2014-15 ರಿಂದ 2021-22 ರವರೆಗೆ ವಾರ್ಷಿಕ ಹಾಲಿನ ಉತ್ಪಾದನೆ ಶೇ 51.05 ರಷ್ಟು ಏರಿಕೆ.
- ಮೀನುಗಾರಿಕೆಯ ಉತ್ತೇಜನೆಗಾಗಿ ಪ್ರತ್ಯೇಕ ಇಲಾಖೆ.
- ಕಳೆದ 9 ವರ್ಷದಲ್ಲಿ ಜೇನು ತುಪ್ಪದ ರಫ್ತು ದ್ವಿಗುಣ.
- ಎಥೆನಾಲ್ ಖರೀದಿ 2013-14 ರಲ್ಲಿ 38 ಕೋಟಿ ಲೀ. 2021-22 ರಲ್ಲಿ 434 ಕೋಟಿ ಲೀ ಗೆ ಏರಿಕೆ.



## ನಾರಿ ಶಕ್ತಿಗೆ ಹೊಸ ವೇಗ

- ಪ್ರತೀ ಸಾವಿರ ಪುರುಷರಿಗೆ ಮಹಿಳೆಯರ ಸಂಖ್ಯೆ 1,020 ಕ್ಕೆ ಏರಿಕೆ.
- ವೇತನ ಸಹಿತ ಹೆರಿಗೆ ರಜೆಯ ಅವಧಿ 12 ವಾರಗಳಿಂದ 26 ವಾರಗಳಿಗೆ ಹೆಚ್ಚಳ.
- ಪ್ರಧಾನಮಂತ್ರಿ ಮಾತೃತ್ವ ಅಭಿಯಾನದಡಿ 3.94 ಕೋಟಿ ಗರ್ಭಿಣಿಯರ ಉಚಿತ ಪ್ರಸವಪೂರ್ವ ತಪಾಸಣೆ.
- 3.03 ಕೋಟಿಗೂ ಅಧಿಕ ಮಹಿಳೆಯರಿಗೆ ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಯ ಲಾಭ .
- 27 ಕೋಟಿಗೂ ಅಧಿಕ ಸ್ಯಾನಟರೀ ಪ್ಯಾಡ್ ಜನೌಷಧಿ ಕೇಂದ್ರಗಳಲ್ಲಿ 1 ರೂ. ಗೆ ಮಾರಟ.
- 3.18 ಕೋಟಿಗೂ ಅಧಿಕ ಸುಕನ್ಯಾ ಸಮೃದ್ಧಿ ಯೋಜನೆಯ ಖಾತೆಗಳನ್ನು ತೆರೆಯಲಾಗಿದೆ.
- 9.6 ಕೋಟಿ ಮನೆಗಳಿಗೆ ಉಚಿತ ಅಡುಗೆ ಅನಿಲ ಪೂರೈಕೆ, ಹೊಗೆಯಿಂದ ಮುಕ್ತ.
- 2.5 ಕೋಟಿ ಪ್ರಧಾನಮಂತ್ರಿ ಆವಾಸ್ ಯೋಜನೆ ಫಲಾನುಭವಿಗಳಲ್ಲಿ ಶೇ 70 ರಷ್ಟು ಮಹಿಳೆಯರು.
- ಮಹಿಳಾ ಫಲಾನುಭವಿಗಳಿಗೆ 27 ಕೋಟಿಗೂ ಹೆಚ್ಚು ಮುದ್ರಾ ಸಾಲ.
- ಸಶಸ್ತ್ರ ಪಡೆಗಳಲ್ಲಿ ಮಹಿಳೆಯರಿಗೆ ಕಾಯಂ ನೇಮಕಾತಿ.
- ತಾಯಂದಿರ ಮರಣ ಪ್ರಮಾಣ ಶೇ 97 ಕ್ಕೆ ಇಳಿಕೆ.
- ಹೆಣ್ಣು ಮಕ್ಕಳ ಮದುವೆ ವಯಸ್ಸು 18 ರಿಂದ 20 ಕ್ಕೆ ಏರಿಸುವ ಪ್ರಸ್ತಾಪ. ಇದರಿಂದ ಅವರ ಆರೋಗ್ಯ ಮತ್ತು ಶಿಕ್ಷಣಕ್ಕೆ ಅನುಕೂಲ.
- ತ್ರಿವಳಿ ತಾಲಾಕ್ ನಿಷೇಧ, ಮುಸ್ಲಿಂ ಮಹಿಳೆಯರ ಶೋಣೆಗೆ ತಡೆ.
- ಆರ್ಟಿಕಲ್ 35 ಎ ರದ್ದು: ಜಮ್ಮು ಮತ್ತು ಕಾಶ್ಮೀರದ ಹೆಣ್ಣುಮಕ್ಕಳಿಂದ ಕಿತ್ತುಕೊಳ್ಳಲಾಗಿದ್ದ ಹಕ್ಕುಗಳನ್ನು ಅವರಿಗೆ ಮರಳಿ ಕೊಡಿಸಿದೆ.
- 11.72 ಕೋಟಿ ಶೌಚಾಲಯಗಳನ್ನು ನಿರ್ಮಿಸುವ ಮೂಲಕ ಹೆಣ್ಣುಮಕ್ಕಳಿಗೆ ಗೌರವಯುತ ಹಾಗೂ ಸುರಕ್ಷಿತ ಬದುಕು ಕಟ್ಟಿಕೊಟ್ಟ ಸರಕಾರ.
- 2.86 ಕೋಟಿ ಮನೆಗಳಿಗೆ ಸ್ವಾತಂತ್ರ್ಯ ನಂತರ ಮೊದಲ ಭಾರಿಗೆ ವಿದ್ಯುತ್ ಸಂಪರ್ಕ ನೀಡುವ ಮೂಲಕ ಜೀವನವನ್ನು ಅಂಧಕಾರದಿಂದ ಮುಕ್ತ.
- ಶಾಲೆ-ಕಾಲೇಜುಗಳಲ್ಲಿ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳ ನಿರ್ಮಾಣ. ಪರಿಣಾಮ ಶಾಲೆ ಮತ್ತು ಉನ್ನತ ಶಿಕ್ಷಣದಲ್ಲಿ ಹೆಣ್ಣು ಮಕ್ಕಳ ಡ್ರಾಪ್ ಔಟ್ ಗಣನೀಯ ಪ್ರಮಾಣದಲ್ಲಿ ಇಳಿಕೆ.



## ಭಾರತದ ಅಮೃತ ಪೀಳಿಗೆಯ ಸಬಲೀಕರಣ

- ನಾಲ್ಕು ದಶಕಗಳ ನಂತರ ರಾಷ್ಟ್ರೀಯ ಶಿಕ್ಷಣ ನೀತಿ.
- 2016 ರಿಂದ ಮಾನ್ಯತೆ ಪಡೆದ ಸ್ಟಾರ್ಟ್‌ಅಪ್ ಗಳ ಸಂಖ್ಯೆ 100 ಪಟ್ಟು ಹೆಚ್ಚಳ.
- ಕ್ರೀಡಾ ಕ್ಷೇತ್ರದಲ್ಲಿ ಸಿಕ್ಕ ಉತ್ತೇಜನ: 98 ಕ್ರೀಡಾಪಟುಗಳು, ಹಾಗೂ 182 ಅಥ್ಲಿಟುಗಳಿಗೆ ದೇಶದ ಅತ್ಯುನ್ನತ ತರಬೇತಿ ಸಂಸ್ಥೆಗಳಲ್ಲಿ ತರಬೇತಿ.
- ಟೋಕಿಯೋ ಒಲಂಪಿಕ್ಸನಲ್ಲಿ 7 ಪದಕ, ಪ್ಯಾರಾ ಒಲಂಪಿಕ್‌ನಲ್ಲಿ 19 ಪದಕ. ಇದುವರೆಗಿನ ಹೆಚ್ಚು ಪದಕಗಳ ಗೆಲುವು.
- ಪ್ರಧಾಮಂತ್ರಿ ಕೌಶಲ ವಿಕಾಸ ಯೋಜನೆಯಡಿ 1.37 ಕೋಟಿ ಜನರಿಗೆ ತರಬೇತಿ.

- ದೇಶದಲ್ಲಿ 7 ಹೊಸ ಐಐಟಿಗಳ ಸ್ಥಾಪನೆ.
- ಐಐಎಂಗಳ ಸಂಖ್ಯೆಯಲ್ಲಿ ಮೂರು ಪಟ್ಟು ಹೆಚ್ಚಳ.
- ದೇಶಾದ್ಯಂತ ಹೊಸ 7 ಐಐಎಂಗಳ ಸ್ಥಾಪನೆ.
- 2022 ನ ಕಾಮನ್ ವೆಲ್ತ್ ಕ್ರೀಡಾ ಕೂಟದಲ್ಲಿ 61 ಪದಕ. ಇಲ್ಲಿಯ ತನಕದ ಅತಿ ಹೆಚ್ಚಿನ ಪದಕದ ಗೆಲುವು.
- 390 ಹೊಸ ವಿಶ್ವವಿದ್ಯಾಯಲಗಳ ಸ್ಥಾಪನೆ.
- ದೇಶದಲ್ಲಿ 2014 ರ ತನಕ ಇದ್ದದ್ದು ಕೇವಲ 641 ವೈದ್ಯಕೀಯ ಕಾಲೇಜು. ಕಳೆದ 9 ವರ್ಷದಲ್ಲಿ ಸ್ಥಾಪನೆ ಆಗಿದ್ದು 700 ವೈದ್ಯಕೀಯ ಕಾಲೇಜು.
- ಕಳೆದ 7 ದಶಕಗಳ ಕಾಲ ದೇಶದಲ್ಲಿ ಇದ್ದ ಒಟ್ಟು ವೈದ್ಯಕೀಯ ಸೀಟುಗಳು 82,466.ಕಳೆದ ವರ್ಷ ಒಂದರಲ್ಲೇ ಏರಿಕೆಯಾದ ಸೀಟುಗಳು 69,663.



## ಅಮೃತ ಕಾಲದ ಐದು ಪ್ರತಿಜ್ಞೆಗಳು

- ವಿಕಸಿತ ಭಾರತದ ಗುರಿ.
- ವಸಹತುಶಾಹಿ ಮಾನಸಿಕತೆಯ ಎಲ್ಲಾ ಕುರುಹುಗಳನ್ನು ಅಳಿಸಿ ಹಾಕುವುದು.
- ನಮ್ಮ ಸಾಂಸ್ಕೃತಿಕ ಬೇರುಗಳ ಬಗ್ಗೆ ಹೆಮ್ಮೆ ಪಡುವುದು.
- ಎಲ್ಲಾ ಭಾರತೀಯರಲ್ಲಿ ಏಕತೆಯ ಭಾವ.
- ನಾಗರೀಕರಲ್ಲಿ ಕರ್ತವ್ಯ ಪ್ರಜ್ಞೆ.



## ಭಾತೀಯರ ಮಧ್ಯಮ ವರ್ಗದವರ ಜೀವನ ಮಟ್ಟದಲ್ಲಿ ಸುಧಾರಣೆ

- ವಾರ್ಷಿಕ 7 ಲಕ್ಷದ ಒಳಗೆ ಆದಾಯ ಇರುವವರಿಗೆ ಸಂಪೂರ್ಣ ಆದಾಯ ತೆರಿಗೆ ರೀಯಾಯಿತಿ.
- ತೆರಿಗೆ ದರದಲ್ಲಿ ಪರಿಣಾಮಕಾರಿ ಇಳಿಕೆ, 2013 ರಲ್ಲಿ ಶೇ 19.22ರಷ್ಟಿದ್ದ ತೆರಿಗೆ 2022ರ ಹೊತ್ತಿಗೆ ಶೇ 10.4ಕ್ಕೆ ಇಳಿಕೆ.
- ಉಮಂಗ್ ತಂತ್ರಜ್ಞಾನದ ಮೂಲಕ 21,801 ಕ್ಕೂ ಹೆಚ್ಚು ಸರಕಾರಿ ಸೇವೆಗಳು ಲಭ್ಯ.
- ದೇಶದಾದ್ಯಂತ 1 ಲಕ್ಷಕ್ಕೂ ಹೆಚ್ಚು ಪ್ರಕರಣಗಳು ರೇರಾ ಮೂಲಕ ವಿಲೇವಾರಿ.
- ಮಧ್ಯಮ ವರ್ಗದ ಗೃಹ ಸಾಲಕ್ಕೆ ಸಬ್ಸಿಡಿ– 59,048 ಕೋಟಿ ರೂಗು ಹೆಚ್ಚು ಸಾಲದ ಹೊರೆಯಲ್ಲಿ ಇಳಿಕೆ.
- ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಮೂಲಕ 3 ಕೋಟಿಗೂ ಅಧಿಕ ಮನೆ ನಿರ್ಮಾಣ.
- 2014 ರಲ್ಲಿ ಕೇವಲ 5 ನಗರಗಳಿಗೆ ಇದ್ದ ಮೆಟ್ರೋ ಸೇವೆ 2023ರ ಹೊತ್ತಿಗೆ 20 ನಗರಗಳಿಗೆ ವಿಸ್ತರಣೆ.
- ಉಡಾನ್ ಯೋಜನೆಯಡಿ ಸುಮಾರು 1.16 ಕೋಟಿ ಜನರಿಗೆ ಕೈಗೆಟಕುವ ದರದಲ್ಲಿ ವಿಮಾನ ಯಾನ ಸೌಲಭ್ಯ.
- ಇಂಟರ್ ನೆಟ್ ಡಾಟದ ಬೆಲೆ ಶೇ 97 ರಷ್ಟು ಇಳಿಕೆ.
- ದೇಶದಾದ್ಯಂತ 2435 ಎಲೆಕ್ಟ್ರಿಕ್ ಬಸ್ಸುಗಳ ನಿಯೋಜನೆ.
- 2014 ರಲ್ಲಿ ಇಡೀ ದೇಶದಲ್ಲಿ ಇದ್ದ ವಿಮಾನ ನಿಲ್ದಾಣಗಳ ಸಂಖ್ಯೆ 74, 2023 ರ ಹೊತ್ತಿಗೆ 148 ಕ್ಕೆ ಏರಿಕೆ.
- ಡಿಜಿಟಲ್ ಅರ್ಥ ವ್ಯವಸ್ಥೆಗೆ ಉತ್ತೇಜನ: ಮಧ್ಯಮ ಹಾಗೂ ಬಡವರ ದೈನಂದಿನ ಆರ್ಥಿಕ ವ್ಯವಹಾರಗಳು ಯುಪಿಐ ಮೂಲಕ ಸುಲಭ .
- ತೆರಿಗೆಗಳ ಇ ಫೈಲಿಂಗ್ ವ್ಯವಸ್ಥೆಯಲ್ಲಿ ಸರಳೀಕರಣ.
- ಜನೌಷಧಿ ಕೇಂದ್ರಗಳ ಮೂಲಕ ಪ್ರತಿನಿನಿತ್ಯ ಬಳಸುವ ಅತಿ ದುಬಾರಿ ಔಷಧಿಗಳು ಕಡಿಮೆ ಬೆಲೆಗೆ ಪೂರೈಕೆ.



## ಆರೋಗ್ಯ

- ಆಯುಷ್ಮಾನ್ ಭಾರತ ಯೋಜನೆ ಲಾಭವನ್ನು 4.54 ಕೋಟಿಗೂ ಹೆಚ್ಚು ಭಾರತೀಯರು ಪಡೆದಿದ್ದಾರೆ.
- ಉಚಿತ ಆರೋಗ್ಯ ಸೇವೆ : ಭಾರತದಾದ್ಯಂತ 1.59 ಲಕ್ಷಕ್ಕೂ ಹೆಚ್ಚಿನ ಆಯುಷ್ಮಾನ್ ಭಾರತ್, ಆರೊಗ್ಯ ಮತ್ತು ಸ್ವಾಸ್ಥ ಕೇಂದ್ರಗಳ ಸ್ಥಾಪನೆ.
- ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ಕೈಗೆಟಗುವ ದರದಲ್ಲಿ 11 ಸಾವಿರಕ್ಕೂ ಜನೌಷಧಿ ಕೇಂದ್ರಗಳ ಮೂಲಕ ಔಷಧಿಗಳ ಪೂರೈಕೆ
- ಉಚಿತವಾಗಿ 240 ಕೋಟಿ ಕೋವಿಡ್ ಲಸಿಕೆ ವಿತರಣೆ.
- ಕೇಂದ್ರ ಸರ್ಕಾರ ಜನೌಷಧಿ ಕೇಂದ್ರಗಳ ಮೂಲಕ ಕಡಿಮೆ ಬೆಲೆಯಲ್ಲಿ ಗುಣಮಟ್ಟದ ಔಷಧಿಗಳನ್ನು ವಿತರಿಸುವ ಮೂಲಕ ದೇಶದ ಬಡ ಮತ್ತು ಮಧ್ಯಮ ವರ್ಗದದವರ 23 ಸಾವಿರ ಕೋಟಿ ರೂ ಉಳಿಸಿದೆ.
- ಕಳೆದ 10 ವರ್ಷದಲ್ಲಿ ದೇಶದಾದ್ಯಂತ 69,663 ವೈದ್ಯಕೀಯ ಸೀಟ್‌ಗಳ ಹೆಚ್ಚಳ.
- ಕೋವಿಡ್ ಪರಿಸ್ಥಿತಿಯನ್ನು ಭಾರತ ವಿಶ್ವದಲ್ಲಿಯೇ ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿತು.
- ಮಾರ್ಚ್–2020 ಕ್ಕಿಂತ ಹಿಂದೆ ದೇಶದಾದ್ಯಂತ ಕೇವಲ 14 ಪ್ರಯೋಗಾಲಯಗಳು ಮಾತ್ರ ಇದ್ದವು. ಈಗ 4 ಸಾವಿ ಪ್ರಯೋಗಾಲಯಗಳು ಭಾರತದಲ್ಲಿದೆ.
- 2020 ಕ್ಕೂ ಮುಂಚೆ ದೇಶದಲ್ಲಿ ಒಂದೇ ಒಂದು ಪಿಪಿಇ ಕಿಟ್ ಉತ್ಪಾದನೆ ಆಗುತ್ತಿರಲಿಲ್ಲಾ. ಆದರೆ ಈಗ ಪ್ರತಿ ನಿತ್ಯ 20 ಲಕ್ಷ ಪಿಪಿಇ ಕಿಟ್ ಉತ್ಪಾದನೆ ಮಾಡಲಾಗುತ್ತಿದೆ.
- ದೇಶದಲ್ಲಿ 2020 ಕ್ಕೂ ಮುಂಚೆ 2,168 ಐಸಿಯು ಬೆಡ್‌ಗಳಿದ್ದವು ಆದರೆ ಈಗ 1.44 ಲಕ್ಷ ಐಸಿಯು ಬೆಡ್‌ಗಳಿವೆ.
- ದೇಶದಲ್ಲಿ 2020 ಕ್ಕೂ ಮುಂಚೆ 50583 ವೆಂಟಿಲೇಟರ್ ಬೆಡ್ ಇದ್ದವು. ಈಗ 1.14 ಲಕ್ಷ ವೆಂಟಿಲೇಟರ್ ಬೆಡ್‌ಗಳಿವೆ.

- ಜನರಿಕ್ ಔಷಧಿಗಳ ಮೂಲಕ 72 ಲಕ್ಷದ ಕಾನ್ಸರ್ ಔಷಧಿಯನ್ನು ಈಗ 3 ಲಕ್ಷಕ್ಕೆ ಮಾರಟ ಮಾಡಲು ಸರ್ಕಾರ ನಿರ್ಧರಿಸಿದೆ. ಇದು ಬಡ ಮತ್ತು ಮಧ್ಯಮ ವರ್ಗದವರಿಗೆ ದೊಡ್ಡಮಟ್ಟದಲ್ಲಿ ಪ್ರಯೋಜನವಾಗಲಿದೆ.



## ರಾಷ್ಟ್ರ ರಕ್ಷಣೆ/ ವಿದೇಶಾಂಗ ನೀತಿ

- ರಾಷ್ಟ್ರ ಮೊದಲೆಂಬ ವಿದೇಶಾಂಗ ನೀತಿ.
- ಸಂಘರ್ಷ ಪೀಡಿತ ಸುಡಾನ್ ನಿಂದ ಆಪರೇಷನ್ ಕಾವೇರಿ ಮೂಲಕ 3 ಸಾವಿರಕ್ಕೂ ಅಧಿಕ ಭಾರತೀಯರ ರಕ್ಷಣೆ. 2021 ರಲ್ಲಿ ಅಫ್ಘಾನಿಸ್ಥಾನವನ್ನು ತಾಲಿಬಾನ್ ವಶಪಡಿಸಿಕೊಂಡಾಗ 550 ಕ್ಕೂ ಹೆಚ್ಚು ಜನರ ಸ್ಥಳಾಂತರ. 2020 ರಲ್ಲಿ ಕೋವಿಡ್ ಬಂದಾಗ ಚೀನಾದಿಂದ 637 ಭಾರತೀಯರನ್ನು ಮರಳಿ ಕರೆತರಲಾಯಿತು. ಕೋವಿಡ್ ಸಮಯದಲ್ಲಿ ವಂದೇ ಭಾರತ್ ಮಿಷನ್‌ಮೂಲಕ ಬೇರೆ ಬೇರೆ ದೇಶಗಳಲ್ಲಿದ್ದ 2.97 ಕೋಟಿ ಭಾರತೀಯರನ್ನು ಪುನಃ ಭಾರತಕ್ಕೆ ಕರೆತರಲಾಯಿತು.2015 ರಲ್ಲಿ ನೇಪಾಳದಲ್ಲಿ ಭೂಕಂಪವಾದಾಗ ಆಪರೇಷನ್ ಮೈತ್ರಿ ಮೂಲಕ 5,188 ಭಾರತೀಯರು ಮತ್ತು ವಿದೇಶಿಗರ ರಕ್ಷಣೆ. ಯುದ್ದಗ್ರಸ್ಥ ಉಕ್ರೇನ್ ನಿಂದ ಆಪರೇಷನ್ ಗಂಗಾ ಮೂಲಕ 23 ಸಾವಿರ ಭಾರತೀಯರ ರಕ್ಷಣೆ
- ಆಪರೇಷನ್ ದೋಸ್ತ್ ಮೂಲಕ 5.945 ಟನ್ ತುರ್ತು ಪರಿಹಾರವನ್ನು ಭೂಕಂಪ ಪೀಡಿತ ಸಿರಿಯಾ ಮತ್ತು ಟರ್ಕಿಗೆ ರವಾನೆ.
- ಆರ್ಟಿಕಲ್ 370, 35ಎ ತೆಗೆದು ಹಾಕಿ ಕಾಶ್ಮೀರದಲ್ಲಿ ದಶಕಗಳಿಂದ ಇದ್ದ ಉಗ್ರವಾದಕ್ಕೆ ಅಂತ್ಯ.
- ಕಳೆದ 5 ವರ್ಷಗಳಲ್ಲಿ ರಕ್ಷಣಾ ಉತ್ಪನ್ನಗಳ ರಫ್ತಿನ ಪ್ರಮಾಣದಲ್ಲಿ ಶೇ.334 ರಷ್ಟು ಹೆಚ್ಚಳ
- ಇಂಡೋನೇಷ್ಯಾ, ಮಾಲ್ದಿವ್ಸ್, ಭೂತಾನ್, ಶ್ರೀಲಂಕಾ ಮುಂತಾದ ನೆರೆ ರಾಷ್ಟ್ರಗಳಲ್ಲಿ ಸಂಕಷ್ಟಕ್ಕಿಡಾದಾಗ ಮೊದಲು ಧಾವಿಸಿದ್ದು ಭಾರತ.
- ಭಯೋತ್ಪಾದಕ ಚಟುವಟಿಕೆಯಲ್ಲಿ ಗಣನೀಯ ಇಳಿಕೆ.
- ಎನ್‌ಐಎ ಕೈಗೊಂಡ ತನಿಕೆಯಲ್ಲಿ ಶೆ.84 ರಷ್ಟು ಶಿಕ್ಷೆಯಾಗಿದೆ.



## ಆರ್ಥಿಕ ಶಕ್ತಿ

- 2014 ರ ಸಮಯದಲ್ಲಿ ವಿಶ್ವದ 5 ದುರ್ಬಲ ಆರ್ಥಿಕ ದೇಶಗಳಲ್ಲಿ ಒಂದಾಗಿದ್ದ ಭಾರತ 2023-24 ರ ಸಮಯದಲ್ಲಿ 5 ಶಕ್ತಿಶಾಲಿ ಆರ್ಥಿಕ ದೇಶಗಳ ಪಟ್ಟಿಯಲ್ಲಿ ಒಂದಾಗಿದೆ.
- ಜಗತ್ತಿನ ಒಟ್ಟು ಡಿಜಿಟಲ್ ಪಾವತಿಯ ಶೇ.45 ರಷ್ಟು ಭಾರತದಲ್ಲಿ ಆಗುತ್ತಿದೆ.
- ಭಾರತ ಕೋವಿಡ್ ಸಂದರ್ಭದಲ್ಲಿ 27.1 ಲಕ್ಷ ಕೋಟಿ ಆತ್ಮನಿರ್ಭರ ಪ್ಯಾಕೇಜ್ ಘೋಷಣೆ ಮಾಡಿತ್ತು.
- 2020-23 ರಲ್ಲಿ ದಾಖಲೆ ಪ್ರಮಾಣದಲ್ಲಿ 770.18 ಶತ ಕೋಟಿ ಡಾಲ್ ಮೌಲ್ಯದ ರಫ್ತಾಗಿದೆ.
- 2020-23 ರಲ್ಲಿ ಎಲೆಕ್ಟ್ರಾನಿಕ್ ವಸ್ತುಗಳ ರಫ್ತಿನಲ್ಲಿ ಶೆ.50 ರಷ್ಟು ಹೆಚ್ಚಾಗಿದೆ. (23.57 ಶತ ಕೋಟಿ ಡಾಲರ್) ಸುಮಾರು 6.60 ಲಕ್ಷ ಕೋಟಿ ರೂಗಳು ವಸೂಲಿ ಆಗದೆ ಇದ್ದ ಸಾಲವನ್ನು ವಸೂಲು ಮಾಡಲಾಗಿದೆ.
- 2021-22 ರಲ್ಲಿ ಭಾರತದ ಇತಿಹಾಸದಲ್ಲೇ ಅತೀ ಹೆಚ್ಚು ವಿದೇಶಿ ಬಂಡವಾಳ ಹೂಡಿಕೆಯಾಗಿದೆ. (84.8 ಶತ ಕೋಟಿ ಡಾಲರ್) ಇಂದು ಭಾರತ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ವಿಶ್ವದ ಆರ್ಥಿಕ ಶಕ್ತಿಯಾಗಿದೆ.
- ತೆರಿಗೆ ಸಂಗ್ರಹ ಪ್ರಮಾಣದಲ್ಲಿ ಗಣನೀಯ ಏರಿಕೆ ಕಂಡಿದೆ.
- ನಿರುದ್ಯೋಗ ಮತ್ತು ಸಂಕ್ರಾಮಿಕ ರೋಗಗಳ ಪ್ರಮಾಣದಲ್ಲಿ ಗಣನೀಯ ಇಳಿಕೆ ಕಂಡಿದೆ.



## ಉದ್ಯೋಗ/ವ್ಯಾಪಾರ ಸ್ನೇಹಿ ಭಾರತ

- ಜಾಗತಿಕ ವ್ಯವಹಾರಾನುಕೂಲಕರ ದೇಶಗಳ ಪಟ್ಟಿಯಲ್ಲಿ 2014 ರಲ್ಲಿ 142 ನೇ ಸ್ಥಾನದಲ್ಲಿದ್ದ ಭಾರತ 2019 ರ ಹೊತ್ತಿಗೆ 63 ಕ್ಕೆ ಏರಿತು.
- ಒಂದೇ ಹಣಕಾಸು ವರ್ಷದಲ್ಲಿ 1.67 ಲಕ್ಷ ಹೊಸ ಕಂಪನಿಗಳ ನೋಂದಾವಣೆ..
- ಕಾರ್ಮಿಕರ ಹಿತಕ್ಕಾಗಿ ಹೊಸ ಕಾರ್ಮಿಕ ಸಂಹಿತೆಗಳ ಜಾರಿ.
- ಹಳೆಯ ಜಟಿಲ ತೆರಿಗೆ ಪದ್ದತಿಯ ರದ್ದತಿ
- ದೇಶಿಯ ಉತ್ಪಾದನೆಯನ್ನು ಉತ್ತೇಜಿಸಲು ಕಾರ್ಪೋರೆಟ್ ತೆರಿಗೆಯನ್ನು ಶೇ.25 ರಿಂದ ಶೇ.15 ಕ್ಕೆ ಇಳಿಸಲಾಗಿದೆ.
- ವ್ಯವಹಾರಕ್ಕೆ ಅನಾನುಕೂಲವಾದ ಮತ್ತು ಬೇಡವಾದ ನಿಯಮಗಳ ರದ್ದತಿ
- 1500 ಕ್ಕೂ ಅಧಿಕ ಪುರಾತನ ಕಾನೂನುಗಳ ರದ್ದತಿ.
- ಹೊಸ ಉದ್ಯಮಗಳನ್ನು ಪ್ರಾರಂಭಿಸಲು ಇರುವ ಪ್ರಕ್ರಿಯೆಯನ್ನು ಸರಳೀಕೃತ ಗೊಳಿಸಲಾಗಿದೆ.
- ಪೇಟೆಂಟ್ ನೋಂದವಣಿಯಲ್ಲಿ ಶೇ.50 ರಷ್ಟು ಹೆಚ್ಚಳ.
- ಉತ್ಪಾದನಾ ಆಧಾರಿತ ಇನ್ಸೆಂಟಿವ್ ಕೊಡುವ ಮೂಲಕ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಉತ್ತೇಜನ.
- ಬೌದ್ಧಿಕ ಆಸ್ತಿಯನ್ನು ಸಂರಕ್ಷಿಸಲು ಹೊಸ ನೀತಿಗಳ ಜಾರಿ.
- ಮೊಬೈಲ್ ಉತ್ಪಾದನೆಯಲ್ಲಿ ಭಾರತ ವಿಶ್ವದಲ್ಲೇ ಮೊದಲ ಸ್ಥಾನವನ್ನು ಪಡೆದಿದೆ.



## ಮೂಲಭೂತ ಸೌಕರ್ಯಕ್ಕೆ ವೇಗ

- 2014 ರ ನಂತರ ಕಳೆದ 10 ವರ್ಷದಲ್ಲಿ ರಸ್ತೆ ಸಾರಿಗೆ ಮತ್ತು ಹೆದ್ದಾರಿ ನಿರ್ಮಾಣ ಮತ್ತು ಅಭಿವೃದ್ಧಿಗೆ ಸಂಪನ್ಮೂಲಗಳ ಹಂಚಿಕೆಯಲ್ಲಿ ಶೇ.500 ರಷ್ಟು ಹೆಚ್ಚಳ.
- ವಿಶ್ವ ದರ್ಜೆಯ 40 ವಂದೇ ಭಾರತ್ ರೈಲುಗಳ ನಿರ್ಮಾಣ ಮಾಡಲಾಗುವುದು. ಇಲ್ಲಿಯ ವರೆಗೆ 51 ವಂದೇ ಭಾರತ್ ರೈಲುಗಳು ಕಾರ್ಯಾರಂಭವಾಗಿದೆ.
- ಪ್ರತೀ ದಿನಕ್ಕೆ 37 ಕಿ.ಮೀ ನಂತೆ ದೇಶದಲ್ಲಿ ಹೆದ್ದಾರಿ ನಿರ್ಮಾಣ ಆಗುತ್ತಿದೆ.
- 2014 ರಲ್ಲಿ ಕೇವಲ 258 ಕಿ.ಮೀ ಇದ್ದ ಮೆಟ್ರೋ ರೈಲು 2023 ರ ಹೊತ್ತಿಗೆ 860 ಕಿ.ಮೀ ಗೆ ಹೆಚ್ಚಿದೆ.
- 2014 ರ ನಂತರ 74 ಕ್ಕೂ ಹೆಚ್ಚು ಹೊಸ ವಿಮಾನ ನಿಲ್ದಾಣಗಳ ಕಾರ್ಯಾರಂಭ.
- 2014 ರ ನಂತರ 3.28 ಲಕ್ಷ ಕಿ.ಮೀ ಗ್ರಾಮೀಣ ರಸ್ತೆಗಳ ನಿರ್ಮಾಣ.
- 2016 ರ ನಂತರ 111 ಜಲ ಮಾರ್ಗಗಳನ್ನು ಗುರುತಿಸಿ ಅವುಗಳನ್ನು ರಾಷ್ಟ್ರೀಯ ಜಲ ಮಾರ್ಗಗಳೆಂದು ಗುರುತಿಸಿ ಅಭಿವೃದ್ಧಿ ಮಾಡಲಾಗಿದೆ.
- ಉತ್ತರ ಪ್ರದೇಶದಲ್ಲಿ ಸರಯು, ನಾಹರ್ ನೀರಾವರಿ ಕಾಲುವೆ- ಅನುಮೋದನೆ ವರ್ಷ:1978 4 ದಶಕಗಳ ಕಾಲ ವಿಳಂಬ. ನರೇಂದ್ರ ಮೋದಿ ಅವರ ಯುಗದಲ್ಲಿ ಪೂರ್ಣ.
- ಬಿಹಾರದ ಕೋಸಿ ರೈಲು ಮಹಾಸೇತು: ಅನುಮೋದನೆ ವರ್ಷ-2003-04, 2 ದಶಕಗಳ ಕಾಲ ವಿಳಂಬ. ನರೇಂದ್ರ ಮೋದಿ ಅವರ ಯುಗದಲ್ಲಿ ಪೂರ್ಣ.
- ಕೇರಳದ ಕೊಲ್ಲಂ ಬೈಪಾಸ್ ಯೋಜನೆ: ಅನುಮೊದನೆ ನೀಡಿದ ವರ್ಷ-1975, ಬಹುತೇಕ 50 ವರ್ಷ ವಿಳಂಬ.ನರೇಂದ್ರ ಮೋದಿ ಅವರ ಯುಗದಲ್ಲಿ ಪೂರ್ಣ.
- ಬ್ರಹ್ಮಪುತ್ರ ನದಿ ಮೇಲೆ ಬೋಗಿ ಬಿಲ್ ರೈಲ್ ಮತ್ತು ರಸ್ತೆ ಸೇತುವೆ: ಅನುಮೊದನೆ ವರ್ಷ-1997, 2 ದಶಕಗಳ ಕಾಲ ವಿಳಂಬ.ನರೇಂದ್ರ ಮೋದಿ ಅವರ ಯುಗದಲ್ಲಿ ಪೂರ್ಣ.
- ಅಟಲ್ ಸುರಂಗ ಮಾರ್ಗ-10 ಸಾವಿರ ಅಡಿ ಉದ್ದನೆಯ ಸುರಂಗ ಮಾರ್ಗ: ಅನುಮೋದನೆ ವರ್ಷ-2000, 2 ದಶಕಗಳ ಕಾಲ ವಿಳಂಬ.ನರೇಂದ್ರ ಮೋದಿ ಅವರ ಯುಗದಲ್ಲಿ ಪೂರ್ಣ.
- ದೆಹಲಿ ಸುತ್ತಲಿನ ಪೂರ್ವ ಮತ್ತು ಪಶ್ಚಿಮ ಪೆರಿ ಫೆರಲ್ ಎಕ್ಸ್ ಪ್ರೆಸ್ ವೇ: ಅನುಮೋದನೆ ವರ್ಷ-2006, ಒಂದು ದಶಕಗಳ ಕಾಲ ವಿಳಂಬ.ನರೇಂದ್ರ ಮೋದಿ ಅವರ ಯುಗದಲ್ಲಿ ಪೂರ್ಣ.
- 2014 ರ ಹೊತ್ತಿಗೆ ಭಾರತದಲ್ಲಿದ್ದ ಒಟ್ಟು ರಾಷ್ಟ್ರೀಯ ಹೆದ್ದಾರಿ 91,287 ಕಿ.ಮೀ ಈಗ ಅದು 1,45,155 ಕಿ.ಮೀ ಗೆ ಏರಿದೆ.



## ತಂತ್ರಜ್ಞಾನದಲ್ಲಿ ಕ್ರಾಂತಿ

- ಭಾರತದಲ್ಲಿ 121 ಕೋಟಿ ಮೊಬೈಲ್ ಚಂದಾದಾರರಿದ್ದು ಅದರಲ್ಲಿ ಸುಮಾರು 80 ಕೋಟಿ ಜನ ಸ್ಮಾರ್ಟ್ ಫೋನ್ ಬಳಕೆದಾರರು.
- ಸುಮಾರು 2 ಲಕ್ಷಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳಿಗೆ ಆಪ್ಟಿಕಲ್ ಫೈಬರ್ ಮೂಲಕ ಇಂಟರ್‌ನೆಟ್ ಸೇವೆ.
- ವಿಶ್ವದಲ್ಲೇ ಅತೀ ಕಮ್ಮಿ ದರದಲ್ಲಿ ಮೋಬೈಲ್ ಇಂಟರ್‌ನೆಟ್ ಸಂಪರ್ಕ.
- ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಫಲಾನುಭವಿಗಳಿಗೆ ಹಣ ಪಾವತಿ ಮಾಡುತ್ತಿರುವುದರಿಂದ ಸರ್ಕಾರದ 2.73 ಲಕ್ಷ ಕೋಟಿ ಹಣ ಉಳಿತಾಯವಾಗಿದೆ.
- ಜೆಮ್ ಪೋರ್ಟಲ್ ಮೂಲಕ 3.90 ಲಕ್ಷ ಕೋಟಿ ಮೌಲ್ಯದ ಮಹಿಳಾ ಉದ್ಯಮಿಗಳ ಉತ್ಪನ್ನಗಳನ್ನು ಸರ್ಕಾರ ಖರೀದಿ.
- ದೇಶಾದ್ಯಂತ 669 ಜಿಲ್ಲೆಗಳಲ್ಲಿ ಸ್ಟಾರ್ಟಪ್‌ಗಳು ಪ್ರಾರಂಭವಾಗಿದೆ.
- 2022 ರಲ್ಲಿ ವಿಶ್ವದ ಒಟ್ಟು ಡಿಜಿಟಲ್ ವ್ಯವಹಾರದಲ್ಲಿ ಭಾರತದ ಪಾಲೇ ಶೇ.46 ರಷ್ಟಿತ್ತು.
- ಕಳೆದ ಎರಡು ವರ್ಷದಲ್ಲಿ ಇಂಟರ್‌ನೆಟ್ ಬಳಕೆದಾರರು 2 ಪಟ್ಟು ಹೆಚ್ಚಳ.
- ಡಿಜಿಟಲ್ ಇಂಡಿಯಾ ಯೋಜನೆಯಡಿ 5.57 ಲಕ್ಷ ಸಾಮಾನ್ಯ ಸೇವಾ ಕೇಂದ್ರಗಳು.
- ಭಾರತ್ ನೆಟ್ ಅಡಿ 6.20 ಲಕ್ಷ ಕಿ.ಮಿ ಆಪ್ಟಿಕಲ್ ಫೈಬರ್ ಕೇಬಲ್ ಅಳವಡಿಕೆ.
- ಭಾರತ ಸ್ವಾತಂತ್ರ್ಯ ನಂತರ 424 ವಿದೇಶಿ ಉಪಗ್ರಹಗಳನ್ನು ಹಾರಿಸಿದೆ. ಅದರಲ್ಲಿ ಕಳೆದ 9 ವರ್ಷದಲ್ಲೇ 389 ಹಾರಿಸಿದೆ.
- ಒಂದೇ ಉಡ್ಡಯನದಲ್ಲಿ 104 ಉಗ್ರಹಗಳನ್ನು ಒಟ್ಟಿಗೆ ಕಕ್ಷೆಗೆ ಸೇರಿಸಿ ಇಸ್ರೋ ವಿಶ್ವ ದಾಖಲೆ ಮಾಡಿದೆ.



## ಈಶಾನ್ಯ ರಾಜ್ಯಗಳ ಪ್ರಗತಿ

- ದೊಂಬಿಗಳನ್ನು ಮತ್ತು ಉಗ್ರಗಾಮಿ ಚಟುವಟಿಕೆಗಳನ್ನು ನಿಯಂತ್ರಿಸಲು ಭದ್ರತಾ ಪಡೆಗಳಿಗೆ ಇದ್ದ ವಿಶೇಷ ಕಾಯ್ದೆ ಆಫ್ಸಾದ ವ್ಯಾಪ್ತಿಯನ್ನು ಶೇ.75 ರಷ್ಟು ಇಳಿಕೆ ಮಾಡಲಾಗಿದೆ.
- ಈಶಾನ್ಯ ರಾಜ್ಯಗಳಿಗೆ ಭಾರತದ ಉಳಿದ ಭಾಗದಿಂದ ಸಂಪರ್ಕಿಸಲು ಬ್ರಹ್ಮಪುತ್ರ ನದಿಯ ಮೇಲೆ 5 ಕಿ.ಮಿ ಉದ್ದದ ಬೋಗಿವಿಲ್ ಸೇತುವೆ ನಿರ್ಮಾಣಕ್ಕೆ 16 ವರ್ಷದ ಹಿಂದೆ ಶಿಲನ್ಯಾಸ ಮಾಡಲಾಗಿತ್ತು. ಭಾರತದ ಭದ್ರತೆಯ ದೃಷ್ಟಿಯಿಂದ ಮುಖ್ಯವಾದ ಈ ಕಾಮಗಾರಿ ಮೋದಿ ಸರ್ಕಾರದ ಅವಧಿಯಲ್ಲಿ ಪೂರ್ಣಗೊಂಡಿತು.
- ಬಂಡುಕೋರರ ಉಪದ್ರವದಲ್ಲಿ 2014 ಕ್ಕೆ ಹೊಲಿಸಿದರೆ 2023 ರಲ್ಲಿ ಶೇ.76 ರಷ್ಟು ಇಳಿಕೆಯಾಗಿದೆ.

- ಈಶಾನ್ಯ ರಾಜ್ಯಗಳಲ್ಲಿ ಕಳೆದ 9 ವರ್ಷದಲ್ಲಿ 7 ಹೊಸ ವಿಮಾನ ನಿಲ್ದಾಣಗಳ ನಿರ್ಮಾಣ.
- ಈಶಾನ್ಯ ರಾಜ್ಯಗ 1.55 ಲಕ್ಷ ಹೆಕ್ಟೆರ್ ಭೂಮಿ ಸಾವಯವ ಕೃಷಿಗೆ ಬಳಕೆ.
- ಈಶಾನ್ಯ ರಾಜ್ಯಗಳಲ್ಲಿ 4,016 ಕಿ.ಮೀ ರಸ್ತೆ ಕಾಮಗಾರಿ ಪ್ರಗತಿಯಲ್ಲಿ .
- ಈಶಾನ್ಯ ಪ್ರದೇಶಗಳ ಸುಮಾರು 22 ಸಾವಿರ ಕೋಟಿಯ ಸುಮಾರು 2 ಸಾವಿರ ಯೋಜನೆಗಳಿಗೆ ಅನುಮೋದನೆ.
- ಈಶಾನ್ಯ ರಾಜ್ಯಗಳಲ್ಲಿ ವನಧನ ಯೋಜನೆಯಡಿ 3.3 ಲಕ್ಷ ಅರಣ್ಯವಾಸಿಗಳಿಗೆ ಅನುಕೂಲ.
- ಸ್ವಾತಂತ್ರ್ಯ ಬಂದು 75 ವರ್ಷಗಳ ನಂತರ ಮೊದಲಬಾರಿಗೆ 2022 ರಲ್ಲಿ ಮಣಿಪುರ ಮತ್ತು 2023 ರಲ್ಲಿ ಮೇಘಾಲಯಕ್ಕೆ ಮೊದಲ ಸರಕು ಸಾಗಣೆ ರೈಲು ತಲುಪಿದೆ.
- 2014 ಕ್ಕೆ ಹೋಲಿಸಿದರೆ 2022 ರಲ್ಲಿ ಭದ್ರತಾ ಪಡೆಗಳ ಸಾವು-ನೋವಿನಲ್ಲಿ ಶೇ.90 ರಷ್ಟು ಇಳಿಕೆ.
- ಈಶಾನ್ಯ ರಾಜ್ಯಗಳ ಬಂಡುಕೋರರ ಜೊತೆ ಶಾಂತಿ ಒಪ್ಪಂದ ಸಾಧಿಸುವಲ್ಲಿ ಯಶಸ್ವಿ.
- ಈಶಾನ್ಯ ರಾಜ್ಯಗಳಲ್ಲಿ 12 ವೈದ್ಯಕೀಯ ಕಾಲೇಜುಗಳ ಸ್ಥಾಪನೆ.



## ಭಾರತೀಯ ಸಂಸ್ಕೃತಿಯ ಪುನರುತ್ಥಾನ

- 500 ವರ್ಷಗಳ ಸುದೀರ್ಘ ಕಾನೂನು ಹೋರಾಟದಲ್ಲಿ ವಿಳಂಬವಾಗುತ್ತಿದ್ದ ಅಯೋಧ್ಯೆಯ ರಾಮ ಮಂದಿರ ನಿರ್ಮಾಣ ಕಾರ್ಯಕ್ಕೆ ಇದ್ದ ಎಲ್ಲಾ ತೊಡಕುಗಳನ್ನು ನಿವಾರಿಸಿ ರಾಮಮಂದಿರ ನಿರ್ಮಾಣ.2020 ರಲ್ಲಿ ಶಿಲನ್ಯಾಸ ಮಾಡಿ 2023 ರಲ್ಲಿ ಉದ್ಘಾಟನೆ ಮಾಡಲಾಯಿತು.
- ಕಾಶಿ ವಿಶ್ವನಾಥ ಕಾರಿಡಾರ್ ಮತ್ತು ಉಜ್ಜಯಿನಿ ಮಹಾಕಾಳೇಶ್ವರ ಕಾರಿಡಾರ್ ನಿರ್ಮಾಣ.
- ದುಬೈಯಲ್ಲಿ ಅತ್ಯಂತ ಭವ್ಯವಾದ ಸ್ವಾಮಿ ನಾರಾಯಣರ ದೇವಸ್ಥಾನವನ್ನು ನಿರ್ಮಾಣ ಮಾಡುವಲ್ಲಿ ಮೋದಿ ಸರ್ಕಾರದ ರಾಜತಾಂತ್ರಿಕ ಕಾರ್ಯ ಯಶಸ್ವಿ ಮಾಡಿದೆ.
- ಸ್ವದೇಶ ದರ್ಶನ ಯೋಜನೆ: ಪ್ರವಾಸೋದ್ಯಮಕ್ಕೆ ಉತ್ತೇಜ ಕೊಡುವ ನಿಟ್ಟಿನಲ್ಲಿ ಸುಮಾರು 76 ಯೋಜನೆಗಳನ್ನು 5292 ಕೋಟಿ ವೆಚ್ಚದಲ್ಲಿ ಅನುಮೋದಿಸಲಾಗಿದೆ.ದೇಶದ 31 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಿದೆ.
- ಕಳವಾಗಿದ್ದ ಸುಮಾರು 231 ಕಲಾಕೃತಿಗಳನ್ನು ಭಾರತಕ್ಕೆ ಮರಳಿ ತರಲಾಗಿದೆ. 2014 ರ ವರೆಗೆ ಕೇವಲ 13 ಕಲಾಕೃತಿಗಳನ್ನು ಮಾತ್ರ ತರಲಾಗಿತ್ತು.
- 207.30 ಕೋಟಿ ವೆಚ್ಚದಲ್ಲಿ ಕೇದಾರನಾಥ ಅಭಿವೃದ್ಧಿಗೆ ಚಾಲನೆ.
- ಚಾರ್‌ಧಾಮ್ ರಾಷ್ಟ್ರೀಯ ಹೆದ್ದಾರಿಗಳ ಯೋಜನೆಯಡಿ ದೇಶದ ಪ್ರಮುಖ ತೀರ್ಥಕ್ಷೇತ್ರಗಳನ್ನು ಸಂಪರ್ಕಿಸಲು 889 ಕಿ.ಮೀ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ.
- 3.5 ಕೋಟಿ ವೆಚ್ಚದಲ್ಲಿ ಸೋಮನಾಥ ದೇವಾಲಯದ ಅಭಿವೃದ್ಧಿ ರಾಷ್ಟ್ರೀಯ ಯುದ್ಧ ಸ್ಮಾರಕ, ರಾಷ್ಟ್ರೀಯ ಪೊಲೀಸ್ ಸ್ಮಾರಕ, ಪ್ರಧಾನಮಂತ್ರಿ ವಸ್ತು ಸಂಗ್ರಹಲಾಯ ನಿರ್ಮಾಣ.
- HRIDAY ಯೋಜನೆ ಮೂಲಕ ಸುಮಾರು 500 ಕೋಟಿ ರೂ ವೆಚ್ಚದಲ್ಲಿ ದೇಶದ 12 ಪಾರಂಪರಿಕ ತಾಣಗಳ ಅಭಿವೃದ್ಧಿ.
- 10 ಹೊಸ ಬುಡಕಟ್ಟು ಜನಾಂಗದವರ ಸ್ವಾತಂತ್ರ್ಯ ಹೋರಾಟಗಾರರ ಮ್ಯೂಸಿಯಂ ಸ್ಥಾಪನೆ.
- ಪ್ರಸಾದ್ ಯೋಜನೆಯಡಿ 1586 ಕೋಟಿ ರೂ.ವೆಚ್ಚದಲ್ಲಿ ದೇಶದ ವಿವಿಧ ತೀರ್ಥಕ್ಷೇತ್ರಗಳ ಅಭಿವೃದ್ಧಿ.
- ಸಿಖ್ಖ ಧಾರ್ಮಿಕ ಕೇಂದ್ರವಾದ ಕರ್ತಾರ್‌ಪುರ ಕಾರಿಡಾರ್ ಅಭಿವೃದ್ಧಿ.
- ದೇಹಲಿಯ ರಾಜ್ ಪಥ್ ಅನ್ನು ಕರ್ತವ್ಯ ಪಥವಾಗಿ ಅಭಿವೃದ್ಧಿ ಪಡಿಸಿ, ಸುಭಾಸ್ ಚಂದ್ರ ಬೋಸರ ಮೂರ್ತಿ ಸ್ಥಾಪನೆ.



## ಪರಿಸರ ಮತ್ತು ವನ್ಯ ಸಂಪತ್ತು ಸಂರಕ್ಷಣೆ

- ಹುಲಿ ಸಂತತಿಯಲ್ಲಿ ಹೆಚ್ಚಳ: 3167 ಕ್ಕೆ ಏರಿಕೆ.
- ನಮಾಮಿ ಗಂಗೆ ಯೋಜನೆಯಡಿ 35,415 ಕೋಟಿ ವೆಚ್ಚದಲ್ಲಿ ಶುದ್ಧೀಕರಣಕ್ಕೆ ಚಾಲನೆ.ಕಾಮಗಾರಿ ಪ್ರಗತಿಯಲ್ಲಿದೆ.
- ಕಾಪ್-21 ಶೃಂಗಸಭೆಯಲ್ಲಿ ಮಾಲಿನ್ಯ ಮುಕ್ತ ಇಂಧಗಳ ಬಳಕೆಯನ್ನು ಹೆಚ್ಚು ಮಾಡುವ ದೃಷ್ಟಿಯಲ್ಲಿ ನಿಗಧಿಪಡಿಸಿದ ಗುರಿಗಿಂತಲು 9 ವರ್ಷ ಮುನ್ನವೇ ಸಾಧನೆಯ ಗುರಿ ತಲುಪಿದೆ.
- 2014 ರಿಂದ ಇತ್ತೀಚೆಗೆ ನವೀಕರಿಸಬಹುದಾದ ಇಂಧನಗಳ ಸಾಮರ್ಥ್ಯಯ ಮತ್ತು ವೃದ್ದಿಯಲ್ಲಿ 2 ಪಟ್ಟು ಹೆಚ್ಚಳ.
- 2014 ರಿಂದ ಈಚೆಗೆ ಸೌರ ವಿದ್ಯುತ್ ಉತ್ಪಾದನೆಯಲ್ಲಿ ಶೇ. 2,300 ಪಟ್ಟು ಹೆಚ್ಚಳವಾಗಿದ್ದು, ಆ ಕಾರಣ ದರ ಶೇ.60 ರಷ್ಟು ಇಳಿಕೆ.
- ಪಿಎಂ ಕುಸುಮ ಯೋಜನೆಯಲ್ಲಿ 35 ಲಕ್ಷ ಕೃಷಿ ಸೌರ ಪಂಪ್‌ಸೆಟ್‌ಗಳ ವಿತರಣೆ.
- ಉಜಾಲ ಯೋಜನೆಯಡಿ 36.86 ಕೋಟಿ ಎಲ್.ಇಡಿ ಬಲ್ಬ್ ವಿತರಣೆ.
- ಭಾರತದ ಸುಮಾರು 12 ಸಮುದ್ರ ತೀರಗಳಿಗೆ ಬ್ಲೂ ಫ್ಲಾಗ್ ಪ್ರಾಮಾಣಿಕರಣ.
- 2,200 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕ ರಾಜಸ್ಥಾನದ ಬಾರ್ಡಾದಲ್ಲಿ ಕಾರ್ಯಾರಂಭ.
- ಪ್ರಧಾನಮಂತ್ರಿ ಉಜ್ವಲ ಯೋಜನೆಯಡಿ ಉಚಿತ ಅಡುಗೆ ಅನಿಲಗಳ ಬಳಕೆಯಿಂದಾಗಿ ಉರುವಲುಗಳ ಬಳಕೆ ಕಡಿಮೆಯಾಗಿ ದೇಶದಲ್ಲಿ ಸಣ್ಣ ಅರಣ್ಯ ವಲಯಗಳ ಪ್ರಮಾಣದಲ್ಲಿ ಹೆಚ್ಚಳ.



# ಮತ್ತೊಮ್ಮೆ ಮೋದಿ ಸರ್ಕಾರ

## 28/28 ಎನ್‌ಡಿಎ ಗೆಲುವಿನ ಗುರಿ

## ಎನ್‌ಡಿಎ ಕೋರ್ ಕಮಿಟಿ ಸಭೆ

**ಬೆಂ**ಗಳೂರಿನಲ್ಲಿ ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ರವರ ಸಮ್ಮುಖದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಎನ್‌ಡಿಎ ಕೋರ್ ಕಮಿಟಿ ಸಭೆ ಆಯೋಜಿಸಲಾಗಿತ್ತು. ಉಭಯ ಪಕ್ಷಗಳ ಮೈತ್ರಿಯ ಸಂಘಟಿತ ಹೋರಾಟದಿಂದ ಮತ್ತೊಮ್ಮೆ ಮೋದಿ ಸಂಕಲ್ಪ ಸಾರ್ಥಕ ಗುರಿ ಸಾಧಿಸಲಿದ್ದು ಒಗ್ಗಟ್ಟಿನಿಂದ ಚುನಾವಣೆ ಎದುರಿಸುವ ನಿಟ್ಟಿನಲ್ಲಿ ಸುದೀರ್ಘ ಚರ್ಚೆ ನಡೆಸಿ, ಚುನಾವಣಾ ಕಾರ್ಯತಂತ್ರಗಳ ಕುರಿತು ಶ್ರೀ ಅಮಿತ್ ಶಾ ಅವರು ಸೂಕ್ತ ಮಾರ್ಗದರ್ಶನ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿಗಳು ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸದಾನಂದಗೌಡ, ವಿರೋಧ ಪಕ್ಷ ನಾಯಕರಾದ ಶ್ರೀ ಆರ್. ಅಶೋಕ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಚುನಾವಣಾ ಉಸ್ತುವಾರಿಗಳಾದ ಶ್ರೀ ಡಾ. ರಾಧಾಮೋಹನ್ ದಾಸ್ ಅಗರ್ವಾಲ್, ಚುನಾವಣಾ ಸಹ ಉಸ್ತುವಾರಿಗಳಾದ ಶ್ರೀ ರೆಡ್ಡಿ ಸುಧಾಕರ್, ಬಿಜೆಪಿ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೇಗೌಡ, ಮಾಜಿ ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳ, ಡಾ. ಅಶ್ವತ್ಥನಾರಾಯಣ, ನಿಕಟಪೂರ್ವ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿ, ಜೆಡಿಎಸ್ ಕೋರ್ ಕಮಿಟಿ ಸದಸ್ಯರಾದ ಶ್ರೀ ಬಂಡೆಪ್ಪ ಖಾಶೆಂಪುರ್, ಶ್ರೀ ಸಾ.ರಾ. ಮಹೇಶ್, ಶ್ರೀ ಹೆಚ್.ಕೆ. ಕುಮಾರಸ್ವಾಮಿ, ಶ್ರೀ ವೆಂಕಟರಾವ್ ನಾಡಗೌಡ ಹಾಗೂ ಶ್ರೀ ಎಂ.ಕೃಷ್ಣಾರೆಡ್ಡಿ ಅವರು ಉಪಸ್ಥಿತರಿದ್ದರು.

# ಮತ್ತೊಮ್ಮೆ ಮೋದಿ ಸರ್ಕಾರ





### ವಿಜಯ ಸಂಕಲ್ಪ ಸಮಾವೇಶ

ಬೆಂಗಳೂರಿನ ಅರಮನೆ ಮೈದಾನದಲ್ಲಿ ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ರವರ ನೇತೃತ್ವದಲ್ಲಿ ವಿಜಯ ಸಂಕಲ್ಪ ಸಮಾವೇಶ - ಶಕ್ತಿ ಕೇಂದ್ರ ಪ್ರಮುಖರ ಸಮ್ಮೇಳನವನ್ನು ಆಯೋಜಿಸಲಾಗಿತ್ತು.

ದೇಶದೆಲ್ಲೆಡೆ ಪ್ರಧಾನಿ ಶ್ರೀ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಯೋಜನೆಗಳು ತಲುಪದ ಮನೆಗಳನ್ನು ಕಾಣಲು ಸಾಧ್ಯವಿಲ್ಲ, ಮೋದಿ ಎಂದರೆ ಅಭಿವೃದ್ಧಿ , ಅಭಿವೃದ್ಧಿ ಎಂದರೆ ಮೋದಿ ಎಂಬುದು ಸಾರ್ವತ್ರಿಕ ಅಭಿಪ್ರಾಯವಾಗಿದ್ದು, ಸಮೃದ್ಧ ಹಾಗೂ ಸದೃಢ ಭಾರತ ನಿರ್ಮಾಣಕ್ಕಾಗಿ ಪಕ್ಷದ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಅತಿ ಹೆಚ್ಚು ಮತ ಗಳಿಸುವ ನಿಟ್ಟಿನಲ್ಲಿ ಜೆಡಿಎಸ್ ಕಾರ್ಯಕರ್ತರ ಜೊತೆಗೂಡಿ ವಿರಮಿಸದೇ ಪರಿಶ್ರಮಿಸಬೇಕೆಂದು ಶ್ರೀ ಅಮಿತ್ ಶಾ ರವರು ಕರೆ ನೀಡಿದರು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸದಾನಂದ ಗೌಡ, ವಿರೋಧ ಪಕ್ಷ ನಾಯಕರಾದ ಶ್ರೀ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಚುನಾವಣಾ ಉಸ್ತುವಾರಿಗಳಾದ ಡಾ. ರಾಧಾಮೋಹನ್‌ದಾಸ್ ಅಗರ್ವಾಲ್, ಚುನಾವಣಾ ಸಹ ಉಸ್ತುವಾರಿಗಳಾದ ಶ್ರೀ ಪೊಂಗುಲೇಟಿ ಸುಧಾಕರ ರೆಡ್ಡಿ, ಮಾಜಿ ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳ, ಡಾ. ಆಶ್ವತ್ಥನಾರಾಯಣ, ನಿಕಟಪೂರ್ವ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿ, ಬಿಜೆಪಿ ಅಭ್ಯರ್ಥಿಗಳಾದ ಡಾ. ಸಿ.ಎನ್. ಮಂಜುನಾಥ, ಕು. ಶೋಭಾ ಕರಂದ್ಲಾಜೆ, ಶ್ರೀ ಪಿ.ಸಿ. ಮೋಹನ್, ಶ್ರೀ ತೇಜಸ್ವಿ ಸೂರ್ಯ, ಡಾ. ಕೆ. ಸುಧಾಕರ್, ಪಕ್ಷದ ಶಾಸಕರು, ಜಿಲ್ಲಾಧ್ಯಕ್ಷರು, ಪದಾಧಿಕಾರಿಗಳು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

### ಭಾರತ ಗೆಲ್ಲಲು 400 ರ ಗುರಿ ಕರ್ನಾಟಕದ ವಿಜಯಕ್ಕೆ 28ರ ಶಪಥ''

ಚನ್ನಪಟ್ಟಣದಲ್ಲಿಂದು ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ರವರ ನೇತೃತ್ವದಲ್ಲಿ ಬೃಹತ್ ರೋಡ್ ಶೋ ಅತ್ಯಂತ ಯಶಸ್ವಿಯಾಗಿ ನಡೆಯಿತು. ಬಿಜೆಪಿ-ಜೆಡಿಎಸ್ ಕಾರ್ಯಕರ್ತರಿಂದ ಮೊಳಗಿದ **'ಮತ್ತೊಮ್ಮೆ ಮೋದಿ'** ಎಂಬ ಜಯಘೋಷ ಎನ್‌ಡಿಎ ಮೈತ್ರಿಕೂಟದ ಪ್ರಚಂಡ ದಿಗ್ವಿಜಯದ ವಿಜಯೋತ್ಸವವೆಂಬಂತೆ ಭಾಸವಾಗುತ್ತಿತ್ತು.




ದೇಶದ ಸುಭದ್ರತೆ ಹಾಗೂ ಸುರಕ್ಷತೆ ಹಾಗೂ ಸಮೃದ್ಧ ಭಾರತ ಜನ ಸಾಮಾನ್ಯರ ಸಂಕಲ್ಪವಾಗಿದ್ದು, ಎರಡೂ ಪಕ್ಷಗಳ ಕಾರ್ಯಕರ್ತರಲ್ಲಿ ಕಂಡುಬಂದ ಸಮನ್ವಯತೆ ರಾಜ್ಯ ಹಾಗೂ ದೇಶದಲ್ಲಿ ಕಾಂಗ್ರೆಸ್ ಧೂಳೀಪಟದ ಮುನ್ಸೂಚನೆಯಂತಿತ್ತು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಪಿ. ಯೋಗೇಶ್ವರ್,ಯುವ ಜನತಾದಳದ ರಾಜ್ಯ ಅಧ್ಯಕ್ಷರಾದ ಶ್ರೀ ನಿಖಿಲ್ ಕುಮಾರಸ್ವಾಮಿ, ಮುಖಂಡರಾದ ಶ್ರೀ ಅಶ್ವತ್ಥ್ ನಾರಾಯಣ ಗೌಡ, ಜಿಲ್ಲೆಯ ಎರಡೂ ಪಕ್ಷಗಳ ಮುಖಂಡರು, ಮಾಜಿ ಶಾಸಕರು, ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ರವರ ನೇತೃತ್ವದಲ್ಲಿ ತುಮಕೂರು, ಚಿತ್ರದುರ್ಗ, ದಾವಣಗೆರೆ ಹಾಗೂ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರಗಳ ಪ್ರಮುಖರ ಸಭೆ ನಡೆಯಿತು. ಈ ಸಂದರ್ಭದಲ್ಲಿ ಶ್ರೀ ಅಮಿತ್ ಶಾ ರವರು ಮಾತನಾಡಿ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ಮಹತ್ವದ ಗುರಿ ನಮ್ಮದಾಗಿದ್ದು, ಯಾವುದೇ ಗೊಂದಲಗಳಿಗೆ ಆಸ್ಪದ ನೀಡದೆ ಬಿಜೆಪಿ ಹಾಗೂ ಜೆಡಿಎಸ್ ಉತ್ತಮ ಸಮನ್ವಯತೆ ಕಾಯ್ದುಕೊಂಡು ಎಂದಿಗಿಂತಲೂ ಅತ್ಯಧಿಕ ಮತಗಳಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಿರುವ ಕಾರ್ಯತಂತ್ರಗಳ ಕುರಿತು ಮಾರ್ಗದರ್ಶನ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪ, ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಚುನಾವಣಾ ಉಸ್ತುವಾರಿಗಳಾದ ಡಾ. ರಾಧಾಮೋಹನ್‌ದಾಸ್ ಅಗರ್ವಾಲ್, ಚುನಾವಣಾ ಉಸ್ತುವಾರಿಗಳಾದ ಶ್ರೀ ರೆಡ್ಡಿ ಸುಧಾಕರ್, ಪಕ್ಷದ ಅಭ್ಯರ್ಥಿಗಳು, ಶಾಸಕರು, ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಚರ್ಚೆಗೊಂದು ಸಾಲು...

**ಸಮರ್ಥ ನೇತೃತ್ವ ಮತ್ತು ಕ್ರಿಯಾಶೀಲ ಕಾರ್ಯಕರ್ತ ಸಂಘಟನೆಯನ್ನು ಗೆಲುವಿನೆಡೆಗೆ ಒಯ್ಯುವ ಜೋಡೆತ್ತುಗಳು.**

# ಲೋಕಸಭಾ ಚುನಾವಣೆ 2024

## ಬಿಜೆಪಿ ಹಾಗೂ ಎನ್‌ಡಿಎ ಅಭ್ಯರ್ಥಿಗಳ ವಿವರ

ಮತ್ತೊಮ್ಮೆ ಮೋದಿ ಸರ್ಕಾರ



**ಶ್ರೀ ಯದುವೀರ್ ಕೃಷ್ಣರಾಜದತ್ತ ಒಡೆಯರ್**
ಮೈಸೂರು



**ಶ್ರೀ ಎಸ್. ಬಾಲರಾಜ್**
ಚಾಮರಾಜನಗರ (ಎಸ್.ಸಿ.)



**ಹೆಚ್.ಡಿ. ಕುಮಾರಸ್ವಾಮಿ (ಎನ್‌ಡಿಎ)**
ಮಂಡ್ಯ



**ಪ್ರಜ್ವಲ್ ರೇವಣ್ಣ (ಎನ್‌ಡಿಎ)**
ಹಾಸನ



**ಕ್ಯಾ. ಬ್ರಿಜೇಶ್ ಚೌಟ**
ದಕ್ಷಿಣಕನ್ನಡ



**ಶ್ರೀ ಕೋಟಾ ಶ್ರೀನಿವಾಸ್ ಪೂಜಾರಿ**
ಉಡುಪಿ-ಚಿಕ್ಕಮಗಳೂರು



**ಶ್ರೀ ಬಿ.ವೈ. ರಾಘವೇಂದ್ರ**
ಶಿವಮೊಗ್ಗ



**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ**
ಉತ್ತರಕನ್ನಡ



**ಶ್ರೀ ಪ್ರಹ್ಲಾದ್ ಜೋಶಿ**
ಧಾರವಾಡ



**ಶ್ರೀ ಬಸವರಾಜ ಬೊಮ್ಮಾಯಿ**
ಹಾವೇರಿ



**ಶ್ರೀ ಜಗದೀಶ್ ಶೆಟ್ಟರ್**
ಬೆಳಗಾವಿ



**ಶ್ರೀ ಅಣ್ಣಾಸಾಹೇಬ್ ಶಂಕರ್ ಜೊಲ್ಲೆ**
ಚಿಕ್ಕೋಡಿ



**ಶ್ರೀ ಪಿ.ಸಿ. ಗದ್ದಿಗೌಡರ್**
ಬಾಗಲಕೋಟೆ



**ಶ್ರೀ ರಮೇಶ್ ಜಿಗಜಿಣಗಿ**
ಬಿಜಾಪುರ (ಎಸ್.ಸಿ.)

# ಲೋಕಸಭಾ ಚುನಾವಣೆ 2024

## ಬಿಜೆಪಿ ಹಾಗೂ ಎನ್‌ಡಿಎ ಅಭ್ಯರ್ಥಿಗಳ ವಿವರ

**ಮತ್ತೊಮ್ಮೆ ಮೋದಿ ಸರ್ಕಾರ**



**ಶ್ರೀ ಭಗವಂತ್ ಖೂಬಾ**
ಬೀದರ್



**ಡಾ. ಉಮೇಶ್ ಜಾಧವ್**
ಗುಲ್ಬರ್ಗಾ (ಎಸ್.ಸಿ.)



**ಶ್ರೀ ರಾಜಾ ಅಮರೇಶ್ ನಾಯಕ್**
ರಾಯಚೂರು (ಎಸ್.ಟಿ.)



**ಡಾ. ಬಸವರಾಜ್ ಕ್ಯಾವತೂರ್**
ಕೊಪ್ಪಳ



**ಶ್ರೀ ಬಿ. ಶ್ರೀರಾಮುಲು**
ಬಳ್ಳಾರಿ (ಎಸ್.ಟಿ.)



**ಶ್ರೀಮತಿ ಗಾಯತ್ರಿ ಸಿದ್ದೇಶ್ವರ್**
ದಾವಣಗೆರೆ



**ಶ್ರೀ ಗೋವಿಂದ ಕಾರಜೋಳ**
ಚಿತ್ರದುರ್ಗ (ಎಸ್.ಸಿ.)



**ಶ್ರೀ ವಿ. ಸೋಮಣ್ಣ**
ತುಮಕೂರು



**ಡಾ. ಕೆ. ಸುಧಾಕರ್**
ಚಿಕ್ಕಬಳ್ಳಾಪುರ



**ಶ್ರೀ ಎಂ. ಮಲ್ಲೇಶ್ ಬಾಬು (ಎನ್‌ಡಿಎ)**
ಕೋಲಾರ (ಎಸ್.ಸಿ.)



**ಡಾ. ಸಿ.ಎನ್. ಮಂಜುನಾಥ್**
ಬೆಂಗಳೂರು ಗ್ರಾಮಾಂತರ



**ಶ್ರೀ ತೇಜಸ್ವಿ ಸೂರ್ಯ**
ಬೆಂಗಳೂರು ದಕ್ಷಿಣ



**ಶ್ರೀ ಪಿ.ಸಿ. ಮೋಹನ್**
ಬೆಂಗಳೂರು ಕೇಂದ್ರ




**ಕು. ಶೋಭಾ ಕರಂದ್ಲಾಜೆ**
ಬೆಂಗಳೂರು ಉತ್ತರ



# ಕಾವೇರಿದ ಲೋಕಸಭಾ ಚುನಾವಣೆ
## ಪ್ರತೀ ಕ್ಷೇತ್ರಗಳಲ್ಲಿ ಮೊಳಗುತ್ತಿದೆ

## ಮತ್ತೊಮ್ಮೆ ಮೋದಿ ಸರ್ಕಾರ



ಮತ್ತೊಮ್ಮೆ ಲೋಕಸಭೆ ಚುನಾವಣೆ ಬಂದಿದೆ. ಚುನಾವಣೆಯ ಕಾರ್ಯ ಎಲ್ಲೆಡೆ ಈಗಾಗಲೇ ಆರಂಭವಾಗಿದ್ದು, ನಿಧಾನಕ್ಕೆ ತೀವ್ರತೆ ಜಾಸ್ತಿಯಾಗುತ್ತಿದೆ. ರಾಜ್ಯದ 28 ಕ್ಷೇತ್ರಕ್ಕೂ ಪಕ್ಷದ ಸಮರ್ಥ ಅಭ್ಯರ್ಥಿಗಳ ಆಯ್ಕೆಯಾಗಿದೆ. ಭಾರತದ ಗೌರವದ ಪರಂಪರೆ ಉಳಿಸಿ ಮುಂದೆ ಕೊಂಡೊಯ್ಯುವ ನಿಟ್ಟಿನಲ್ಲಿ ಮತ್ತೊಮ್ಮೆ ಮೋದಿಯನ್ನು ಈ ಬಾರಿ 400 ಮಿರಿ ಸೀಟುಗಳಿಂದ ಆಯ್ಕೆ ಮಾಡಬೇಕಾಗಿದೆ. ಆ ನಿಟ್ಟಿನಲ್ಲಿ ಪಕ್ಷದ ಕಾರ್ಯಕರ್ತರು ಅತ್ಯುತ್ಸಾಹದಿಂದ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ. ಅದಕ್ಕೆ ಪೂರಕವಾಗಿ ಲೋಕಸಭಾ ಕ್ಷೇತ್ರದ ಹಂತದಲ್ಲಿ ವಿವಿಧ ಹಂತದ ಪ್ರಚಾರ ಕಾರ್ಯಗಳು ನಡೆಯುತ್ತಿವೆ. ಅದರ ಸಂಕ್ಷಿಪ್ತ ನೋಟ ಇಲ್ಲಿದೆ.

**ಬಾಗಲಕೋಟೆ :** ಶ್ರೀ ಪಿ.ಸಿ.ಗದ್ದಿಗೌಡರ ಬಿಜೆಪಿ ಅಭ್ಯರ್ಥಿಯಾಗಿರುವ ಬಾಗಲಕೋಟೆಯಲ್ಲಿ ಎರಡನೇ ಹಂತದಲ್ಲಿ ಅಂದರೆ ಮೇ-07 ರಂದು ಚುನಾವಣೆ ನಡೆಯಲಿದೆ. ಕ್ಷೇತ್ರದಲ್ಲಿ ಚುನಾವಣೆ ಪ್ರಚಾರ ಅಧಿಕೃತವಾಗಿ ಕಾರ್ಯಾರಂಭವಾಗಿದೆ. ರಾಷ್ಟ್ರ ಮತ್ತು ರಾಜ್ಯ ಕಚೇರಿಯಿಂದ ತಿಳಿಸಿದ ಅನೇಕ ಕಾರ್ಯಕ್ರಮ ಮತ್ತು ಪ್ರಚಾರ ಕಾರ್ಯ ಅತ್ಯಂತ ಯಶಸ್ವಿಯಾಗಿ ನಡೆದಿದ್ದು, ಮುಂದೆಯೂ ಸಹ ನಡೆಯಲಿದೆ. ಅದರ ಭಾಗವಾಗಿಯೇ ಮಾರ್ಚ್ 31 ರಂದು ಬಾಗಲಕೋಟೆ ಜಿಲ್ಲಾ ವಿಶೇಷ ಸಭೆ ಜಿಲ್ಲಾ ಕಾರ್ಯಾಲಯದಲ್ಲಿ ನಡೆಯಿತು. ಜಿಲ್ಲಾ ಸ್ತರದ ಎಲ್ಲಾ ನಾಯಕರು, ಪದಾಧಿಕಾರಿಗಳು ಸೇರಿದಂತೆ ಪ್ರಮುಖರು ಭಾಗವಹಿಸಿದ್ದು, ಎಲ್ಲರೂ ಒಗ್ಗಟ್ಟಾಗಿ ಮತ್ತೊಮ್ಮೆ ಮೋದಿ ಸರ್ಕಾರ ತರುವ ದೃಢಸಂಕಲ್ಪ ಮಾಡಿದರು. ಜೊತೆಗೆ ಬಾಗಲಕೋಟೆಯ ರವಿವಾರ ಸಂತೆಯಲ್ಲಿ ಲೋಕಸಭಾ ಚುನಾವಣೆಗೆ ಪ್ರಣಾಳಿಕೆ ಸಿದ್ದಪಡಿಸಲು ಸಾರ್ವಜನಿಕರಿಂದ, ಸಲಹೆಯನ್ನು ಪಡೆದುಕೊಂಡರು. ಇವೆಲ್ಲದರ ಜೊತೆಗೆ ರಾಷ್ಟ್ರ ಮತ್ತು ರಾಜ್ಯದಿಂದ ಸೂಚಿಸಿದ ಇತರ ಕಾರ್ಯಕ್ರಮಗಳು ಕ್ಷೇತ್ರದಲ್ಲಿ ನಡೆಯುತ್ತಿದೆ.



**ಬೆಂಗಳೂರು ಕೇಂದ್ರ :** ಶ್ರೀ ಪಿ.ಸಿ.ಮೋಹನ್‌ರವರು ಬಿಜೆಪಿ ಅಭ್ಯರ್ಥಿಯಾಗಿರುವ ಬೆಂಗಳೂರಿನ ಕೇಂದ್ರ ಲೋಕಸಭಾ ಕ್ಷೇತ್ರದ ಚುನಾವಣೆ ಮೊದಲನೇ ಹಂತ ಅಂದರೆ ಏಪ್ರಿಲ್-26 ರಂದು ನಡೆಯಲಿದ್ದು, ಪಕ್ಷದ ಅಭ್ಯರ್ಥಿಯಾಗಿರುವ ಶ್ರೀ.ಪಿ.ಸಿ.ಮೋಹನ್ ಅವರು ತಮ್ಮ ನಾಮಪತ್ರ ಸಲ್ಲಿಕೆ ಮಾಡಿದ್ದಾರೆ. ಅಲ್ಲದೆ ಬೆಂಗಳೂರು ಕೇಂದ್ರ, ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಾ ವಿಧಾನಸಭೆ ಕ್ಷೇತ್ರಗಳಲ್ಲಿನ ಮಂಡಲ ಮಟ್ಟದಲ್ಲಿ ಕಾರ್ಯಕರ್ತರ ಸಮಾವೇಶ ನಡೆಯಿತು. ಅತ್ಯಂತ ಯಶಸ್ವಿಯಾಗಿ ನಡೆದ ಈ ಸಮಾವೇಶಗಳು ಕಾರ್ಯಕರ್ತರಲ್ಲಿ ಗೆಲುವಿನ ಉತ್ಸಾಹವನ್ನು ಹೆಚ್ಚಿಸಿದೆ.




**ಬೆಂಗಳೂರು ಉತ್ತರ :** ಕೇಂದ್ರ ಸಚಿವರೂ ಆಗಿರುವ ಕುಮಾರಿ. ಶೋಭಾ ಕರಂದ್ಲಾಜೆ ಅವರು ಬೆಂಗಳೂರು ಉತ್ತರದ ಅಭ್ಯರ್ಥಿಯಾಗಿ ಈಗಾಗಲೇ ತಮ್ಮ ಉಮೇದುವಾರಿಕೆ ಸಲ್ಲಿಕೆ ಮಾಡಿದ್ದಾರೆ. ಮೊದಲನೇ ಹಂತದಲ್ಲಿ ಚುನಾವಣೆ ನಡೆಯಲಿದ್ದು, ಏಪ್ರಿಲ್-26 ರಂದು ಮತದಾನ ನಡೆಯಲಿದೆ. ಇನ್ನೊಂದೆಡೆ ಕ್ಷೇತ್ರದಾದ್ಯಂತ ಪ್ರಚಾರ ಭರವಾಗಿ ಸಾಗಿದ್ದು, ಪ್ರತೀ ಬೂತ್‌ನಲ್ಲೂ ಮನೆ ಮನೆ ತಲುಪುವ ಕಾರ್ಯವಾಗುತ್ತಿದೆ. ಚುನಾವಣೆಯ ಕಾರ್ಯ ಚುರುಕುಗೊಳಿಸಲು ಕ್ಷೇತ್ರದ ಕಾರ್ಯಕಾರಣಿ ಸಭೆ ನಡೆಸಿ ಮುಂದಿನ ಕಾರ್ಯಯೋಜನೆ ರೂಪಿಸಿ ಸಿದ್ದಗೊಳಿಸಲಾಗಿದೆ. ಇದರ ಜೊತೆಗೆ ಚುನಾವಣೆಗೆ ಸಂಬಂಧಿಸಿದಂತೆ ಇತರ ಕಾರ್ಯಗಳು ವಿವಿಧ ಹಂತದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದೆ.



**ಬೆಂಗಳೂರು ಗ್ರಾಮಾಂತರ :** ತೀವ್ರ ಕುತೂಹಲ ಕ್ಷೇತ್ರಗಳಲ್ಲಿ ಒಂದು ಬೆಂಗಳೂರು ಗ್ರಾಮಾಂತರ ಕ್ಷೇತ್ರ. ಜಯದೇವ ಆಸ್ಪತ್ರೆಯ ಮಾಜಿ ನಿರ್ದೇಶಕರಾದ ಡಾ. ಮಂಜುನಾಥ ಅವರು ಎನ್‌ಡಿಎ ಮೈತ್ರಿ ಕೂಟದ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿರುವುದು, ಬಿಜೆಪಿ ಕಾರ್ಯಕರ್ತರಲ್ಲಿ ಹುಮ್ಮಸ್ಸು ಹೆಚ್ಚಿಸಿದೆ. ಡಾ.ಮಂಜುನಾಥ ಅವರು ಈಗಾಗಲೇ ನಾಮಪತ್ರವನ್ನು ಸಲ್ಲಿಸಿ ಪ್ರಚಾರ ಅಂಭಿಸಿದ್ದಾರೆ. ವಿಕಸಿತ ಭಾರತಕ್ಕೆ ವಿಜಯ ಸಮಾವೇಶ, ಕಾರ್ಯಕರ್ತರ ಸಮಾವೇಶಗಳು ನಡೆದಿದ್ದು, ಮತ್ತೊಮ್ಮೆ ಮೋದಿ ಎಂಬ ಮಂತ್ರದೊಂದಿಗೆ ಮೋದಿ ಗೆಲ್ಲಿಸಲು ಸಂಕಲ್ಪ ಮಾಡಿದ್ದಾರೆ.



**ಬೆಂಗಳೂರು ದಕ್ಷಿಣ :** ಬೆಂಗಳೂರು ದಕ್ಷಿಣದ ಅಭ್ಯರ್ಥಿ ಶ್ರೀ ತೇಜಸ್ವಿ ಸೂರ್ಯ ಅವರು ತಮ್ಮ ನಾಮಪತ್ರ ಸಲ್ಲಿಸಿದ್ದು, ವಿಶೇಷವಾದ ಪ್ರಚಾರ ಕಾರ್ಯಗಳು ನಡೆಯುತ್ತಿದೆ. ಓಬಿಸಿ ಮೋರ್ಚಾ ವತಿಯಿಂದ ಹಿಂದುಳಿದ ವರ್ಗಗಳ ಸಾಮಾಜಿಕ ಸಮ್ಮೇಳನಗಳು ನಡೆದು ಚುನಾವಣಾ ಕಾರ್ಯಕ್ಕೆ ಮತ್ತಷ್ಟು ಶಕ್ತಿ ಬಂದಿದೆ. ಇದರ ಜೊತೆಗೆ ಯುವ ಸಮ್ಮೇಳನ, ಮಹಿಳಾ ಸಮಾವೇಶಗಳು ಎಲ್ಲಾ ಸ್ತರದಲ್ಲೂ ಕಾರ್ಯಚಟುವಟಿಕೆಗೆ ಕಾರ್ಯಾರಂಭಕ್ಕೆ ಸಾಕ್ಷಿಯಾಗಿದೆ. ರಾಷ್ಟ್ರ ಮತ್ತು ರಾಜ್ಯ ಕಚೇರಿಯಿಂದ ಬಂದಂತಹ ಇತರ ಕಾರ್ಯ ಚಟುವಟಿಕೆಯ ಜೊತೆಗೆ ಚುನಾವಣೆ ಕೆಲಸ ಕಾರ್ಯ ಉತ್ಸಾಹದಿಂದ

ನಡೆಯುತ್ತಿದೆ. ಬೆಂಗಳೂರು ದಕ್ಷಿಣದಲ್ಲಿ ಮೊದಲನೇ ಹಂತದಲ್ಲಿ ಅಂದರೆ ಏಪ್ರಿಲ್-26 ರಂದು ಮತದಾನ ನಡೆಯಲಿದ್ದು, ಬಿಜೆಪಿಯ ಗೆಲುವು ನಿಶ್ಚಿತವಾಗಿದೆ.



**ಬೆಳಗಾವಿ :** ಮಾಜಿ ಮುಖ್ಯಮಂತ್ರಿಯಾಗಿರುವ ಶ್ರೀ ಜಗದೀಶ್ ಶೆಟ್ಟರ್ ಅಭ್ಯರ್ಥಿಯಾಗಿರುವ ಬೆಳಗಾವಿಯಲ್ಲಿ ಎರಡನೇ ಹಂತದಲ್ಲಿ ಅಂದರೆ ಮೇ-7 ರಂದು ಮತದಾನ ನಡೆಯಲಿದೆ. ಅಧಿಸೂಚನೆಯ ನಂತರ ನಾಮಪತ್ರ ಸಲ್ಲಿಸಲಿದ್ದು, ಪ್ರಚಾರ ಕಾರ್ಯ ಜೋರಾಗಿ ನಡೆದಿದೆ. ಪಕ್ಷ ಸಂಘಟನೆ ಮತ್ತು ಪ್ರಚಾರದ ದೃಷ್ಟಿಯಿಂದ ಎಲ್ಲಾ ಪ್ರಕೋಷ್ಠಗಳನ್ನು ಸಕ್ರೀಯಗೊಳಿಸಲು ಜಿಲ್ಲಾ ಕಾರ್ಯಾಲಯದಲ್ಲಿ ಎಲ್ಲಾ ಪ್ರಕೋಷ್ಠ ಸಂಚಾಲಕರ ಸಭೆ ಸೇರಿದಂತೆ, ಎಲ್ಲಾ ಮೋರ್ಚಾಗಳ ಸಮಾವೇಶಗಳು ನಡೆದು ಚುನಾವಣಾ ಪ್ರಚಾರ ಕಾರ್ಯ ಭರದಿಂದ ಸಾಗಿದೆ.



**ಬಳ್ಳಾರಿ :** ಶ್ರೀ ರಾಮುಲುರವರು ಬಿಜೆಪಿ ಅಭ್ಯರ್ಥಿಯಾಗಿರುವ ಬಳ್ಳಾರಿ ಲೋಕಸಭಾ ಕ್ಷೇತ್ರದ ಪ್ರತೀ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿಯೂ ಕಾರ್ಯಕರ್ತರ ಸಮಾವೇಶದ ಮೂಲಕ ಚುನಾವಣಾ ಪ್ರಚಾರ ಕಾರ್ಯ ಆರಂಭವಾಗಿದ್ದು, ಜಿಲ್ಲಾ ಕೋರ್ ಕಮಿಟಿ ಸಭೆ ನಡೆಸಿ ಚುನಾವಣೆಯ ಕಾರ್ಯತಂತ್ರವನ್ನು ರೂಪಿಸಲಾಗಿದೆ. ಎರಡನೇ ಹಂತದಲ್ಲಿ ಅಂದರೆ ಮೇ-07 ಮತದಾನ ನಡೆಯಲಿದ್ದು, ಅಭ್ಯರ್ಥಿಯ ನಾಮಪತ್ರ ಸಲ್ಲಿಕೆಯ ನಂತರ ಪ್ರಚಾರ ಕಾರ್ಯ ಮತ್ತಷ್ಟು ತೀವ್ರಗೊಳ್ಳಲಿದೆ.



**ಬೀದರ್ :** ಶ್ರೀ ಭಗವಂತ ಖೂಬಾ ಅಭ್ಯರ್ಥಿಯಾಗಿರುವ ಬೀದರ್ ಲೋಕಸಭಾ ಕ್ಷೇತ್ರದ ಎರಡನೇ ಹಂತದಲ್ಲಿ ಅಂದರೆ ಮೇ-7 ರಂದು ಮತದಾನ ನಡೆಯಲಿದೆ. ಫಲಾನುಭವಿಗಳ ಸಮಾವೇಶಗಳ ಮೂಲಕ ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳ ಸಂಪರ್ಕವಾದರೆ, ಇನ್ನೊಂದೆಡೆ ಕಾರ್ಯಕರ್ತರ ಸಮಾವೇಶದ ಮೂಲಕ ಕಾರ್ಯಕರ್ತರಲ್ಲಿ ಚುನಾವಣೆಯ ಹುಮ್ಮಸ್ಸು ಹೆಚ್ಚಿಸಿದೆ. ಮನೆ ಮನೆ ಪ್ರಚಾರ ಕಾರ್ಯ ಈಗಾಲೇ ಆರಂಭಿಸಿದ್ದು, ಗೆಲುವು ಮತ್ತಷ್ಟು ಸುಲಭವಾಗಿಸಿದೆ.



**ಬಿಜಾಪುರ :** ಬಿಜೆಪಿ ಅಭ್ಯರ್ಥಿಯಾಗಿರುವ ಶ್ರೀ ರಮೇಶ್ ಜಿಗಜಿಣಗಿ ಅಭ್ಯರ್ಥಿ ಪರ ಕಾರ್ಯಕರ್ತರು ಪ್ರಚಾರ ಕಾರ್ಯ ಈಗಾಗಲೇ ಆರಂಭಿಸಿದ್ದು, ಮಹಿಳಾ ಸಮಾವೇಶ, ಗ್ರಾಮ ಚಲೋ ಅಭಿಯಾನ, ಮೋರ್ಚಾಗಳ ಸಭೆಗಳು ಕಾರ್ಯಕರ್ತರಲ್ಲಿ ಪ್ರಚಾರ ಕಾರ್ಯಕ್ಕೆ ಧುಮುಕಲು ಮತ್ತಷ್ಟು ಸ್ಫೂರ್ತಿ ನೀಡಿದೆ. ಎರಡನೇ ಹಂತದಲ್ಲಿ ಅಂದರೆ ಮೇ-7 ಕ್ಕೆ ಮತದಾನ ನಡೆಯಲಿದ್ದು, ನಾಮಪತ್ರ ಸಲ್ಲಿಕೆಯ ನಂತರ ಪ್ರಚಾರ ಕಾರ್ಯಕ್ಕೆ ಮತ್ತಷ್ಟು ವೇಗ ನೀಡಿ ಮನೆ ಮನೆ ತಲುಪಲು ನಿರ್ಧರಿಸಲಾಗಿದೆ.



**ಚಾಮರಾಜನಗರ :** ಶ್ರೀ ಎಸ್. ಬಾಲರಾಜ್ ಬಿಜೆಪಿ ಅಭ್ಯರ್ಥಿಯಾಗಿರುವ ಮೊದಲನೇ ಹಂತದಲ್ಲಿ ಅಂದರೆ ಏಪ್ರಿಲ್-26 ಮತದಾನ ನಡೆಯಲಿದ್ದು, ಅಭ್ಯರ್ಥಿಯಾಗಿರುವ ಶ್ರೀ ಎಸ್. ಬಾಲರಾಜ್ ಅವರು ಈಗಾಗಲೇ ನಾಮಪತ್ರವನ್ನು ಸಲ್ಲಿಸಿದ್ದಾರೆ.



ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಜೆಡಿಎಸ್ ಜೊತೆ ಸೇರಿ ಅಭ್ಯರ್ಥಿ ಪರ ಪ್ರಚಾರ ಕಾರ್ಯ ಭರದಿಂದ ಸಾಗಿದ್ದು, ಮೋರ್ಚಾಗಳ ಸಮಾವೇಶಗಳು ಸೇರಿದಂತೆ ಬೂತ್ ಹಂತದಲ್ಲಿ ಪ್ರಚಾರ ಕಾರ್ಯ ಆರಂಭವಾಗಿದೆ.

**ಚಿಕ್ಕಬಳ್ಳಾಪುರ :** ಮಾಜಿ ಸಚಿವರು ಆದ ಡಾ. ಕೆ ಸುಧಾಕರ್ ಅಭ್ಯರ್ಥಿಯಾಗಿರುವ ಚಿಕ್ಕಬಳ್ಳಾಪುರದಲ್ಲಿ ಮೊದಲನೇ ಹಂತದಲ್ಲಿ ಅಂದರೆ ಏಪ್ರಿಲ್-26 ರಂದು ಮತದಾನ ನಡೆಯಲಿದ್ದು. ಮೋದಿಯವರನ್ನು ಗೆಲ್ಲಿಸಲು ಕಾರ್ಯಕರ್ತರು ಉತ್ಸಾಹದಿಂದ ಕಾರ್ಯಕ್ಷೇತ್ರಕ್ಕೆ ಇಳಿದಿದ್ದಾರೆ. ರೈತ ಸಮಾವೇಶಗಳು ಕ್ಷೇತ್ರದ ರೈತರನ್ನು ತಲುಪಲು ಯಶಸ್ವಿಯಾದರೆ, ಜೊತೆಗೆ ಜಿಲ್ಲಾ ಪ್ರಮುಖರ ಸಭೆಗಳು ಚುನಾವಣೆಯ ಇನ್ನಿತರ ಕಾರ್ಯತಂತ್ರವನ್ನು ರೂಪಿಸಿವೆ.



**ಚಿಕ್ಕೋಡಿ :** ಶ್ರೀ ಅಣ್ಣಾಸಾಹೇಬ ಜೊಲ್ಲೆ ಬಿಜೆಪಿ ಅಭ್ಯರ್ಥಿಯಾಗಿರುವ ಎರಡನೇ ಹಂತ ಅಂದರೆ ಮೇ-7 ರಂದು ಚುನಾವಣೆ ನಡೆಯಲಿದ್ದು, ಅಧಿಸೂಚನೆಯ ನಂತರ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ. ಪಕ್ಷ ಸಂಘಟನೆ, ಅಭ್ಯರ್ಥಿ ಪರ ಪ್ರಚಾರ ಕಾರ್ಯ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದ್ದು, ಪ್ರಕೋಷ್ಠಗಳ ಸಮಾವೇಶ, ಮೋರ್ಚಾಗಳ ಸಮಾವೇಶಗಳು ಕಾರ್ಯಕರ್ತರಲ್ಲಿ ಮೋದಿಯನ್ನು ಗೆಲ್ಲಿಸಲು ಮತ್ತಷ್ಟು ಉತ್ಸಾಹವನ್ನು ತುಂಬಿಸಿದೆ.



**ಚಿತ್ರದುರ್ಗ :** ಶ್ರೀ ಗೋವಿಂದ ಕಾರಜೋಳ ಬಿಜೆಪಿ ಅಭ್ಯರ್ಥಿಯಾಗಿರುವ ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಮೋರ್ಚಾಗಳ ಸಮಾವೇಶ, ಎನ್‌ಡಿಎ ಮೈತ್ರಿಕೂಟದ ಬಿಜೆಪಿ-ಜೆಡಿಎಸ್ ಸಮನ್ವಯ ಸಮಾವೇಶಗಳು ಕಾರ್ಯಕರ್ತರಲ್ಲಿ ಮತ್ತೊಮ್ಮೆ ಮೋದಿ ಗೆಲ್ಲಿಸುವ ಕಾಯಕಕ್ಕೆ ಮತ್ತಷ್ಟು ಶಕ್ತಿ ತುಂಬಿಸಿದೆ. ಜೊತೆಗೆ ಪಕ್ಷ ಸಂಘಟನೆಗೂ ಬಲ ಬಂದಿದೆ. ಮೊದಲನೇ ಹಂತದಲ್ಲಿ ಅಂದರೆ ಏಪ್ರಿಲ್-26 ರಂದು ನಡೆಯುವ ಮತದಾನದಲ್ಲಿ ಈಗಾಗಲೇ ಅಭ್ಯರ್ಥಿ ಶ್ರೀ ಗೋವಿಂದ ಕಾರಜೋಳ ಅವರು ನಾಮಪತ್ರವನ್ನು ಸಲ್ಲಿಸಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ.

**ಉತ್ತರಕನ್ನಡ :** ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅಭ್ಯರ್ಥಿಯಾಗಿರುವ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಎರಡನೇ ಹಂತದಲ್ಲಿ ಅಂದರೆ ಮೇ-7 ರಂದು ಮತದಾನ ನಡೆಯಲಿದ್ದು, ಅಭ್ಯರ್ಥಿಪರ ಪ್ರಚಾರ ಅಬ್ಬರದಿಂದ ನಡೆಯುತ್ತಿದೆ. ಫಲಾನುಭವಿಗಳ ಸಮಾವೇಶ, ಮಹಿಳಾ ಸಮಾವೇಶದ ಉತ್ಸಾಹದಲ್ಲಿದ್ದ ಕಾರ್ಯಕರ್ತರಿಗೆ, ಲೋಕಸಭಾ ಚುನಾವಣಾ ರಾಜ್ಯ ಉಸ್ತುವಾರಿ ಶ್ರೀ ರಾಧಾಮೋಹನದಾಸ್ ಅಗರ್‌ವಾಲ್ ಉಪಸ್ಥಿತಿಯಲ್ಲಿ ನಡೆದ ಕಾರ್ಯಕರ್ತರ ಸಮಾವೇಶ ಮತ್ತಷ್ಟು ಬಲವನ್ನು ತಂದುಕೊಟ್ಟಿದೆ. ಮನೆ ಮನೆ ಪ್ರಚಾರ ಕಾರ್ಯಗಳು ಸಹ ಆರಂಭವಾಗಿದ್ದು, ನಾಮಪತ್ರ ಸಲ್ಲಿಕೆಯ ನಂತರ ಮತ್ತಷ್ಟು ಬಿರುಸು ಪಡೆದುಕೊಳ್ಳಲಿದೆ. ಲೋಕಸಭೆ ಚುನಾವಣೆಯಲ್ಲಿ ಉತ್ತರಕನ್ನಡ ಭಾಗವೇ ಆಗಿರುವ ಕಿತ್ತೂರು-ಖಾನಾಪುರದಲ್ಲೂ ಅಭ್ಯರ್ಥಿ ಪರ ಪ್ರಚಾರ ಕಾರ್ಯ, ಸಮಾವೇಶಗಳು ಜೋರಾಗಿ ನಡೆಯುತ್ತಿದ್ದು, ಪ್ರಮುಖರ ಸಭೆಗಳು ಮುಂದಿನ ಕಾರ್ಯಯೋಜನೆಯನ್ನು ರೂಪಿಸುತ್ತಿವೆ. ಒಟ್ಟಿನಲ್ಲಿ ಮೋದಿಯನ್ನು ಮತ್ತೊಮ್ಮೆ ಪ್ರಧಾನಿಯಾಗಿಸಲು ಎಲ್ಲರೂ ಒಗ್ಗಟ್ಟಿನಿಂದ ಪ್ರಚಾರ ಕಾರ್ಯಕ್ಕೆ ಸಿದ್ದರಾಗಿ ಮುನ್ನುಗ್ಗುತ್ತಿದ್ದಾರೆ.




**ದಕ್ಷಿಣಕನ್ನಡ :** ಬಿಜೆಪಿ ಭದ್ರಕೋಟೆಯಾಗಿರುವ ದಕ್ಷಿಣಕನ್ನಡದಲ್ಲಿ ಮಾಜಿ ಸೈನಿಕ ಕ್ಯಾ.ಬ್ರಿಜೇಶ್ ಚೌಟ ಅಭ್ಯರ್ಥಿಯಾಗಿರುವುದರಿಂದ ಕಾರ್ಯಕರ್ತರಲ್ಲಿ ಮತ್ತಷ್ಟು ಅತ್ಯುತ್ಸಾಹ ಬಂದಿದೆ.



ರಾಷ್ಟ್ರ ಮತ್ತು ರಾಜ್ಯ ಕಚೇರಿಯಿಂದ ಸೂಚಿಸಲ್ಪಟ್ಟ ಸಮಾವೇಶ, ಅಭಿಯಾನಗಳ ಜೊತೆಗೆ ಅಭ್ಯರ್ಥಿ ಪರ ಪ್ರಚಾರ ಅತ್ಯಂತ ಜೋರಾಗಿ ನಡೆದಿದೆ. ಅಲ್ಲದೆ ಬೆಂಗಳೂರಿನಲ್ಲಿರುವ ದಕ್ಷಿಣಕನ್ನಡದವರನ್ನು ಸೇರಿಸಿ ಮೋದಿ ಗೆಲ್ಲಿಸಲು ಕರೆ ನೀಡುತ್ತಿರುವ ಪ್ರಯತ್ನ ವಿಶೇಷವಾಗಿದೆ. ಮೊದಲನೇ ಹಂತದಲ್ಲಿ ಅಂದರೆ ಏಪ್ರಿಲ್-26 ರಂದು ನಡೆಯುವ ಮತದಾನಕ್ಕೆ ಈಗಾಗಲೇ ಪಕ್ಷದ ಅಭ್ಯರ್ಥಿ ನಾಮಪತ್ರ

ಸಲ್ಲಿಕೆಯಾಗಿದ್ದು, ಪ್ರಚಾರ ಕಾರ್ಯ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದೆ.

**ದಾವಣಗೆರೆ :** ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅಭ್ಯರ್ಥಿಯಾಗಿರುವ ದಾವಣಗೆರೆ ಲೋಕಸಬಾ ಕ್ಷೇತ್ರದಲ್ಲಿ ಗ್ರಾಮ ಚಲೋ ಅಭಿಯಾನ, ಮಹಿಳಾ ಸಮಾವೇಶಗಳ ಅತ್ಯಂತ ಯಶಸ್ವಿಯ ನಂತರ, ಈಗ ಲೋಕಸಭಾ ಚುನಾವಣೆಯ ಕಾರ್ಯತಂತ್ರ ರೂಪಿಸಿ ಅಭ್ಯರ್ಥಿ ಪರ ಪ್ರಚಾರ ಕಾರ್ಯ ಅತ್ಯಂತ ಜೋರಾಗಿ ನಡೆಯುತ್ತಿದೆ. ಎರಡನೇ ಹಂತದಲ್ಲಿ ಅಂದರೆ ಮೇ-7 ರಂದು ಮತದಾನ ನಡೆಯಲಿದ್ದು ಅಧಿಸೂಚನೆ ನಂತರ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ. ಕ್ಷೇತ್ರದ ಎಲ್ಲಾ ಹಾಲಿ, ಮಾಜಿ ಶಾಸಕರು, ಕಾರ್ಯಕರ್ತರನ್ನೊಳಗೊಂಡು ಮತ್ತೊಮ್ಮೆ ಮೋದಿ ಗೆಲ್ಲಿಸಲು ರಾತ್ರಿ ಹಗಲು ಶ್ರಮಿಸುತ್ತಿದ್ದಾರೆ.



**ಧಾರವಾಡ-ಹುಬ್ಬಳ್ಳಿ :** ಕೇಂದ್ರ ಸಚಿವರಾಗಿರುವ ಶ್ರೀ ಪ್ರಹ್ಲಾದ್ ಜೋಶಿ ಅವರು ಸ್ಪರ್ಧಿಸುವ ಧಾರವಾಡ-ಹುಬ್ಬಳ್ಳಿ ಕ್ಷೇತ್ರದಲ್ಲಿ ಎರಡನೇ ಹಂತದಲ್ಲಿ ಅಂದರೆ ಮೇ-7 ರಂದು ಚುನಾವಣೆ ನಡೆಯಲಿದ್ದು, ಅಧಿಸೂಚನೆಯ ನಂತರ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ. ಪ್ರಬುದ್ದರ ಸಮಾವೇಶ ಸೇರಿದಂತೆ ಅನೇಕ ಸಭೆ, ಸಮಾವೇಶಗಳು ಚುನಾವಣೆ ತಯಾರಿಗೆ ನಾಂದಿ ಹಾಡಿದೆ. ಈಗಾಗಲೇ ಬೂತ್ ಮಟ್ಟದಲ್ಲಿ ಮನೆ ಮನೆ ಪ್ರಚಾರ ಕಾರ್ಯ ಆರಂಭಿಸಿರುವ ಕಾರ್ಯಕರ್ತರು ಮತ್ತೊಮ್ಮೆ ಮೋದಿಯನ್ನು ಗೆಲ್ಲಿಸುವ ಉತ್ಸಾಹದಲ್ಲಿ ಪಾಗ್ಗೊಳ್ಳುತ್ತಿದ್ದಾರೆ.



**ಗುಲ್ಬರ್ಗ :** ಡಾ. ಉಮೇಶ್ ಜಾದವ್ ಅಭ್ಯರ್ಥಿಯಾಗಿರುವ ಗುಲ್ಬರ್ಗ ಕ್ಷೇತ್ರದಲ್ಲಿ ಎರಡನೇ ಹಂತದಲ್ಲಿ ಅಂದರೆ ಅಂದರೆ ಮೇ-7 ರಂದು ನಡೆಯುವ ಚುನಾವಣೆಗೆ ಮತ್ತೊಮ್ಮೆ ಮೋದಿ ಗೆಲ್ಲಿಸಲು ಟೊಂಕ ಕಟ್ಟಿ ನಿಂತ ಕಾರ್ಯಕರ್ತರು ಅಭ್ಯರ್ಥಿಪರ ಪ್ರಚಾರ ಕಾರ್ಯವನ್ನು ಆರಂಭಿಸಿದ್ದಾರೆ. ಪ್ರಮುಖರ ಸಭೆಗಳು, ಮಾಧ್ಯಮ ಸಮಾವೇಶಗಳು ಚುನಾವಣೆಯ ಪ್ರಚಾರ ಕಾರ್ಯಕ್ಕೆ ಮತ್ತಷ್ಟು ಬಲವನ್ನು ತುಂಬಿದೆ.

**ಹಾಸನ, ಕೋಲಾರ, ಮಂಡ್ಯ :** ಎನ್‌ಡಿಎ ಮೈತ್ರಿ ಭಾಗವಾಗಿರುವ ಜೆಡಿಎಸ್‌ಗೆ ಈ ಮೂರು ಕ್ಷೇತ್ರವನ್ನು ಬಿಜೆಪಿ ಬಿಟ್ಟುಕೊಟ್ಟಿದ್ದು, ಈ ಮೂರು ಕ್ಷೇತ್ರದಲ್ಲಿ ಮೊದಲನೇ ಹಂತದಲ್ಲಿ ಅಂದರೆ ಏಪ್ರಿಲ್-26 ಕ್ಕೆ ಮತದಾನ ನಡೆಯಲಿದೆ. ಈಗಾಗಲೇ ಜೆಡಿಎಸ್‌ನ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದು ಹಾಸನದ ಅಭ್ಯರ್ಥಿ ಶ್ರೀ ಪ್ರಜ್ವಲ್ ರೇವಣ್ಣ, ಮಂಡ್ಯದಲ್ಲಿ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿ, ಕೋಲಾರ ಅಭ್ಯರ್ಥಿಯಾದ ಶ್ರೀ ಮಲ್ಲೇಶ್ ಬಾಬು ಪರ ಬಿಜೆಪಿ, ಜೆಡಿಎಸ್ ಕಾರ್ಯಕರ್ತರು ಜಂಟಿಯಾಗಿ ಸೇರಿ ಈಗಾಗಲೇ ಪ್ರಚಾರ ಕಾರ್ಯ ಅರಂಭಿಸಿದ್ದಾರೆ. ಬಿಜೆಪಿ-ಜೆಡಿಎಸ್ ಸಮನ್ವಯ ಸಮಾವೇಶ, ಪ್ರಮುಖರ ಸಭೆಗಳ ಪ್ರೇರಣೆಯಿಂದ ಕಾರ್ಯಕರ್ತರು ಜೋರಾಗಿ ಪ್ರಚಾರ ಕಾರ್ಯ ಆರಂಭಿಸಿದ್ದಾರೆ. ಇನ್ನೂ ಬಿಜೆಪಿ ಪಕ್ಷ ಸಂಘಟನೆಯ ದೃಷ್ಟಿಯಂದ ಮೋರ್ಚಾಗಳ ಸಮಾವೇಶ, ಅಭಿಯಾನಗಳನ್ನು ಅತ್ಯಂತ ಯಶಸ್ವಿಯಾಗಿ ಸಂಘಟಿಸಿ ಪಕ್ಷಕ್ಕೆ ಬಲ ತಂದುಕೊಟ್ಟಿದೆ.



**ಹಾವೇರಿ :** ಹಾವೇರಿ ಲೋಕಸಭಾ ಕ್ಷೇತ್ರದಲ್ಲಿ ಎರಡನೇ ಹಂತದಲ್ಲಿ ಅಂದರೆ ಮೇ- 7 ರಂದು ನಡೆಯುವ ಚುನಾವಣೆಯಲ್ಲಿ ಮಾಜಿ ಮುಖ್ಯ ಮಂತ್ರಿಗಳಾಗಿರು ಶ್ರೀ  ಬಸವರಾಜ ಬೊಮ್ಮಾಯಿ ಅವರು ಸ್ಪರ್ಧಿಸುತ್ತಿದ್ದು, ಪ್ರಚಾರ ಕಾರ್ಯ ಭರದಿಂದ ಸಾಗಿದೆ. ಸಮನ್ವಯ ಸಭೆಗಳು, ಕಾರ್ಯಕರ್ತರ ಸಮಾವೇಶಗಳು ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿ ಮೋದಿಯನ್ನು ಮತ್ತೊಮ್ಮೆ ಗೆಲ್ಲಿಸಲು ಹಗಲಿರುಳು ಶ್ರಮಿಸುತ್ತಿದ್ದಾರೆ.



**ಕೊಪ್ಪಳ :** ಡಾ.ಬಸವರಾಜ ಕ್ಯಾವತೂರು ಅಭ್ಯರ್ಥಿಯಾಗಿರುವ ಕೊಪ್ಪಳ ಲೋಕಸಭಾ ಕ್ಷೇತ್ರದ ಚುನಾವಣೆ ಎರಡನೇ ಹಂತದಲ್ಲಿ ಅಂದರೆ ಮೇ- 7 ರಂದು ನಡೆಯಲಿದ್ದು, ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುವ ಮೂಲಕ ಮೋದಿಯವರ



ಕೈಬಲಪಡಿಸಲು ಪದಾಧಿಕಾರಿಗಳು, ಕಾರ್ಯಕರ್ತರು ಟೊಂಕಕಟ್ಟಿ ನಿಂತು ಪ್ರಚಾರ ಕಾರ್ಯ ಆರಂಭಿಸಿದ್ದಾರೆ.

**ಮೈಸೂರು-ಕೊಡಗು :** ಮೈಸೂರಿನ ಮಹಾರಾಜರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸ್ಪರ್ಧಿಸಿರುವ ಮೈಸೂರು-ಕೊಡಗು ಕ್ಷೇತ್ರದಲ್ಲಿ ಮೊದಲನೇ ಹಂತದಲ್ಲಿ ಅಂದರೆ ಏಪ್ರಿಲ್-26 ರಂದು ಮತದಾನ ನಡೆಯಲಿದ್ದು, ಈಗಾಗಲೇ ನಾಮಪತ್ರ ಸಲ್ಲಿಕೆಯಾಗಿದೆ. ಹಿಂದುಳಿದ ವರ್ಗಗಳ ಮುನ್ನಡೆ ಸಮಾವೇಶ ಸೇರಿದಂತೆ ಮೋರ್ಚಾಗಳ ವಿಶೇಷ ಸಭೆ, ಅಭಿಯಾನಗಳು ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿಸಿದರೆ, ಮಹಾರಾಜರ ಸ್ಪರ್ಧೆ, ಮೋದಿಯನ್ನು ಮತ್ತೊಮ್ಮೆ ಪ್ರಧಾನಿಯಾಗಿಸುವ ಸಂಕಲ್ಪ ಮೈಸೂರು-ಕೊಡಗು ಕ್ಷೇತ್ರದ ಕಾರ್ಯಕರ್ತರಲ್ಲಿ ಮತ್ತಷ್ಟು ಹುಮ್ಮಸ್ಸನ್ನು ಹೆಚ್ಚಿಸಿದ್ದು ಪಕ್ಷದ ಗೆಲವು ನಿಶ್ಚಿತ ಎಂದು ಸಂದೇಶ ನೀಡುತ್ತಿದ್ದಾರೆ.




**ರಾಯಚೂರು :** ಶ್ರೀ ರಾಜಾ ಅಮರೇಶ್ವರ್ ನಾಯಕ ಅಭ್ಯರ್ಥಿಯಾಗಿರುವ ರಾಯಚೂರು ಕ್ಷೇತ್ರದಲ್ಲಿ ಗ್ರಾಮ ಚಲೋ ಅಭಿಯಾನ, ಫಲಾನುಭವಿಗಳ ಸಮಾವೇಶಗಳು ಚುನಾವಣಾ ಕಾರ್ಯಕ್ಕೆ ಚಾಲನೆ ನೀಡಿದರೆ, ಅಭ್ಯರ್ಥಿ ಘೋಷಣೆಯ ನಂತರ ಪ್ರಚಾರ ಕಾರ್ಯ ಉತ್ಸಾಹದಿಂದ ನಡೆಯುತ್ತಿದೆ. ಮೋದಿಯನ್ನು ಮತ್ತೊಮ್ಮೆ ಪ್ರಧಾನಿಯಾಗಿಸಲು ಕಾರ್ಯಕರ್ತರು ಶ್ರಮಿಸುತ್ತಿದ್ದರೆ, ಪ್ರಮುಖರು ಕಾರ್ಯತಂತ್ರವನ್ನು ರೂಪಿಸಿ ಗೆಲುವಿಗೆ ಕೆಲಸ ಮಾಡುತ್ತಿದ್ದಾರೆ.




**ಶಿವಮೊಗ್ಗ :** ಶ್ರೀ ಬಿ.ವೈ ರಾಘವೇಂದ್ರ ಅಭ್ಯರ್ಥಿಯಾಗಿರುವ ಶಿವಮೊಗ್ಗ ಕ್ಷೇತ್ರದಲ್ಲಿ ಎರಡನೇ ಹಂತದಲ್ಲಿ ಅಂದರೆ ಮೇ-7 ರಂದು ನಡೆಯುವ ಚುನಾವಣೆಯಲ್ಲಿ ಗೆಲುವಿನ ಕೇಕೆ ಹಾಕಲು ಪ್ರಮುಖರು, ಕಾರ್ಯಕರ್ತರು ಅತ್ಯಂತ ಚಲನಶೀಲರಾಗಿ ಪ್ರಚಾರ ಕಾರ್ಯ ಆರಂಭಿಸಿದ್ದಾರೆ. ಪ್ರಮುಖರ ಸಭೆ, ಕಾರ್ಯಕರ್ತರ ಸಮಾವೇಶಗಳು, ಹಾಲಿ,ಮಾಜಿ ಶಾಸಕರ ಪ್ರವಾಸಗಳು ಚುನಾವಣಾ ಪ್ರಚಾರಕ್ಕೆ ವೇಗಕೊಟ್ಟಿದ್ದು, ಮತ್ತೊಮ್ಮೆ ಮೋದಿ ಪ್ರಧಾನಿಯಾಗುವುದು ನಿಶ್ಚಿತ ಎಂದು ಕಾರ್ಯಕರ್ತರು ಕೆಲಸ ಮಾಡುತ್ತಿದ್ದಾರೆ. ಇನ್ನೊಂದೆಡೆ ಬೆಂಗಳೂರಿನಲ್ಲಿರುವ ಶಿವಮೊಗ್ಗದವರನ್ನು ಸೇರಿಸಿ ಮೋದಿ ಗೆಲ್ಲಿಸಲು ತೊಡಗಿಸಿ ಕೊಳ್ಳುವಂತೆ ಪ್ರೇರೇಪಿಸುತ್ತಿರುವುದು ವಿಶೇಷವಾಗಿದೆ.



**ತುಮಕೂರು :** ಶ್ರೀ ವಿ.ಸೋಮಣ್ಣ ಅಭ್ಯರ್ಥಿಯಾಗಿರುವ ತುಮಕೂರು ಕ್ಷೇತ್ರದಲ್ಲಿ ಪ್ರತೀ ವಿಧಾನಸಭೆ ಕ್ಷೇತ್ರದಲ್ಲೂ ಕಾರ್ಯಕರ್ತರ ಸಮಾವೇಶಗಳು ನಡೆದು ಕಾರ್ಯಕರ್ತರಲ್ಲಿ ಚುನಾವಣಾ ಪ್ರಚಾರಕಾರ್ಯಕ್ಕೆ ಇಳಿಯಲು ಉತ್ಸಾಹ ಬಂದರೆ, ಮೋರ್ಚಾಗಳ ಸಮಾವೇಶ, ಮಹಿಳಾ ಸಮಾವೇಶಗಳು ಪಕ್ಷ ಸಂಘಟನೆಗೆ ಮತ್ತಷ್ಟು ಬಲ ತುಂಬಿವೆ. ಮೊದಲನೇ ಹಂತದಲ್ಲಿ ಅಂದರೆ ಏಪ್ರಿಲ್-26 ರಂದು ನಡೆಯುವ ಮತದಾನಕ್ಕೆ ಈಗಾಗಲೇ ನಾಮಪತ್ರ ಸಲ್ಲಿಕೆಯಾಗಿದ್ದು, ಮನೆ ಮನೆ ಪ್ರಚಾರ ಕಾರ್ಯಗಳು ಆರಂಭವಾಗಿದೆ.




**ಉಡುಪಿ-ಚಿಕ್ಕಮಗಳೂರು :** ಸರಳ ರಾಜಕಾರಣಿ ಎಂದು ಹೆಸರಿರುವ ಶ್ರೀ ಕೋಟಾ ಶ್ರೀನಿವಾಸ ಪೂಜಾರಿ ಸ್ಪರ್ಧಿಸಿರುವ ಉಡುಪಿ-ಚಿಕ್ಕಮಗಳೂರಿನಲ್ಲಿ ಮೊದಲನೇ ಹಂತದಲ್ಲಿ ಅಂದರೆ ಏಪ್ರಿಲ್-26 ರಂದು ಮತದಾನ ನಡೆಯಲಿದ್ದು ಈಗಾಗಲೇ ನಮಪತ್ರ ಸಲ್ಲಿಕೆ ಮಾಡಿದ್ದಾರೆ. ಪ್ರಚಾರ ಕಾರ್ಯವು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದ್ದು, ಕಾರ್ಯಕರ್ತರ ಸಮಾವೇಶ, ಸಾರ್ವಜನಿಕ ಸಭೆ



ಸಮಾರಂಭಗಳಲ್ಲಿನ ಜನರ ಬೆಂಬಲ ಪಕ್ಷದ ಅಭ್ಯರ್ಥಿ ಗೆಲುವಿನೊಂದಿಗೆ ಮೋದಿ ಮತ್ತೊಮ್ಮೆ ಸಂದೇಶವನ್ನು ಸಾರುತ್ತಿವೆ. ಅಲ್ಲದೆ ಬೆಂಗಳೂರಿನಲ್ಲಿರುವ ಉಡುಪಿ-ಚಿಕ್ಕಮಂಗಳೂರಿನ ಜನರನ್ನು ಸೇರಿಸಿ ಮೋದಿ ಗೆಲ್ಲಿಸಲು ಕರೆ ನೀಡುತ್ತಿರುವ ಪ್ರಯತ್ನ ಪ್ರಾಚರವನ್ನು ವಿಸ್ತರಿಸಿದೆ.

ಒಟ್ಟಾರೆ ಈ ಬಾರಿ 400 ಮೀರಿ, ವಿಕಸಿತ ಭಾರತಕ್ಕಾಗಿ ಮೋದಿ ಗ್ಯಾರಂಟಿ, ಮತ್ತೊಮ್ಮೆ ಮೋದಿ ಸರ್ಕಾರ ಎಂಬ ಘೋಷ ವಾಕ್ಯದೊಂದಿಗೆ ಮೋದಿಯನ್ನು ಮತ್ತೊಮ್ಮೆ ದೇಶದ ಗದ್ದುಗೆಯಲ್ಲಿ ಪ್ರಧಾನಿಯಾಗಿಸಲು ರಾಜ್ಯಾದ್ಯಂತ ಅತ್ಯಂತ ಉತ್ಸಾಹದಿಂದ ಕಾರ್ಯಕರ್ತರು ಶ್ರಮಿಸುತ್ತಿದ್ದಾರೆ. ಎಲ್ಲಾ ಕ್ಷೇತ್ರದಲ್ಲೂ ಚುನಾವಣಾ ನಿರ್ವಹಣಾ ಸಮಿತಿ ರಚನೆಯಾಗಿ ಕಾರ್ಯಾಗಾರಗಳು ನಡೆದಿದ್ದು,ಚುನಾವಣಾ ಕಾರ್ಯ ಅಚ್ಚುಕಟ್ಟಾಗಿ ಸಾಗುತ್ತಿದೆ. ಎಲ್ಲಾ ಕ್ಷೇತ್ರದ ಜಿಲ್ಲಾಧ್ಯಕ್ಷರು, ಜಿಲ್ಲೆಯಿಂದ ಹಿಡಿದು ಬೂತ್ ವರೆಗಿನ ಪದಾಧಿಕಾರಿಗಳು ಎಲ್ಲಾ ಸಮಾವೇಶ, ಅಭಿಯಾನಗಳಲ್ಲಿ, ಮಾಧ್ಯಮ, ಸಾಮಾಜಿಕ ಜಾಲತಾಣ ಕಾರ್ಯಾಗಾರ ಸೇರಿದಂತೆ ಅನೇಕ ಕಾರ್ಯಕ್ರಮಗಳಲ್ಲಿ ಉಪಸ್ಥಿತರಿದ್ದು, ತಮ್ಮ ಕರ್ತವ್ಯವವನ್ನು ನಿರ್ವಹಿಸುತ್ತಿದ್ದಾರೆ. ಇನ್ನೂ ಪ್ರತೀ ಕ್ಷೇತ್ರಕ್ಕೂ ರಾಷ್ಟ್ರ, ರಾಜ್ಯ ನಾಯಕರ ಪ್ರವಾಸಗಳು ನಿಗಧಿಯಾಗಿದ್ದು ಚುನಾವಣಾ ಪ್ರಚಾರ ಕಾರ್ಯ ಮತ್ತಷ್ಟು ವೇಗ ಪಡೆದುಕೊಳ್ಳಲಿದೆ.

**ಮುಂದಿನ ಪ್ರಚಾರ ಯೋಜನೆ :** ಮೋದಿ ಸರ್ಕಾರದ ಯೋಜನೆಯನ್ನು ಮನೆ ಮನೆಗೆ ತಲುಪಿಸುವ ನಿಟ್ಟಿನಲ್ಲಿ ವಿಶೇಷ ರೀತಿಯ ಪ್ರಚಾರ ಯೋಜನೆಯನ್ನು ರೂಪಿಸಿದ್ದು, ಮನೆ ಮನೆ ಪ್ರಚಾರ ಅಭಿಯಾನ ಹಾಗೂ ಮಹಾ ಸಂಪರ್ಕ ಅಭಿಯಾನ ಎಂದು ಅಭಿಯಾನ ಹಮ್ಮಿಕೊಂಡಿದ್ದು, ಎರಡು ಹಂತಗಳಲ್ಲಿ ನಡೆಯಲಿದೆ. ಅದರ ವಿವರ ಇಂತಿದೆ.

## ಮುಂದಿನ ಪ್ರಚಾರ ಯೋಜನೆ

**ಮೋದಿ ಸರ್ಕಾರದ ಯೋಜನೆಯನ್ನು ಮನೆ ಮನೆಗೆ ತಲುಪಿಸುವ ನಿಟ್ಟಿನಲ್ಲಿ ವಿಶೇಷ ರೀತಿಯ ಪ್ರಚಾರ ಯೋಜನೆಯನ್ನು ರೂಪಿಸಿದ್ದು, ಮನೆ ಮನೆ ಪ್ರಚಾರ ಅಭಿಯಾನ ಹಾಗೂ ಮಹಾ ಸಂಪರ್ಕ ಅಭಿಯಾನ ಎಂದು ಅಭಿಯಾನ ಹಮ್ಮಿಕೊಂಡಿದ್ದು, ಎರಡು ಹಂತಗಳಲ್ಲಿ ನಡೆಯಲಿದೆ.**

| ಮೊದಲನೇ ಹಂತ- ಏಪ್ರಿಲ್-26 ಮತದಾನ | |
|---|---|
| ಮೊದಲನೆ ಸುತ್ತಿನ ಮನೆ ಮನೆ ಪ್ರಚಾರ ಅಭಿಯಾನ | ಏಪ್ರಿಲ್-15, 16, 17 |
| ಮಹಾ ಸಂಪರ್ಕ ಅಭಿಯಾನ | ಏಪ್ರಿಲ್-21 |
| ಎರಡನೆ ಸುತ್ತಿನ ಮನೆ ಮನೆ ಪ್ರಚಾರ ಅಭಿಯಾನ | ಏಪ್ರಿಲ್-22, 23, 24 |
| **ಎರಡನೇ ಹಂತ- ಮೇ-7 ಮತದಾನ** | |
| ಮೊದಲನೆ ಸುತ್ತಿನ ಮನೆ ಮನೆ ಪ್ರಚಾರ ಅಭಿಯಾನ | ಏಪ್ರಿಲ್-22, 23, 24 |
| ಮೊದಲನೆ ಸುತ್ತಿನ ಮಹಾ ಸಂಪರ್ಕ ಅಭಿಯಾನ | ಏಪ್ರಿಲ್-28 |
| ಎರಡನೆ ಸುತ್ತಿನ ಮನೆ ಮನೆ ಪ್ರಚಾರ ಅಭಿಯಾನ | ಮೇ- 2, 3, 4 |
| ಎರಡನೆ ಸುತ್ತಿನ ಮಹಾ ಸಂಪರ್ಕ ಅಭಿಯಾನ | ಮೇ-5 |

**ಇನ್ನೊಂದೆಡೆ ಯುಗಾದಿ ದಿನದಂದು ಮರಳಿ ಬಂತು ಯುಗಾದಿ, ಮರಳಿ ಬರುವರು ಮೋದಿ ಎಂಬ ಘೋಷವಾಕ್ಯದೊಂದಿಗೆ ಮಹಿಳಾ ಪಾದಯಾತ್ರೆ ಹಮ್ಮಿಕೊಂಡರೆ, ರಾಮನೌಮಿಯಂದು ವಿಶೇಷ ಪ್ರಚಾರ ಕಾರ್ಯಕ್ಕೆ ಕಾರ್ಯ ಯೋಜನೆ ಸಿದ್ಧವಾಗಿ ಕಾರ್ಯರೂಪಕ್ಕೆ ಬರಲಿದೆ.**

**ಮೋದಿಯ ಶ್ರೇಷ್ಠ ನಾಯಕತ್ವದ ಅಲೆ ದೇಶದಾದ್ಯಂತ ಇದ್ದು, ಎಲ್ಲಾ ಕಾರ್ಯಕರ್ತರ, ಪ್ರಮುಖರ ಸಹಭಾಗಿತ್ವದಲ್ಲಿ ಮೋದಿ ಮತ್ತೊಮ್ಮೆ ಪ್ರಧಾನಿಯಾವುದು ನಿಶ್ಚಿತವಾಗಿದೆ.**




# ರಾಜ್ಯಾಧ್ಯಕ್ಷರ ಪ್ರವಾಸ

**ಬೆಂಗಳೂರು :** ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ಅಧ್ಯಕ್ಷತೆಯಲ್ಲಿ ಪಕ್ಷ ಸೇರ್ಪಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಲಬುರಗಿಯ ಮಾಜಿ ಸಚಿವರಾದ ಶ್ರೀ ಬಾಬುರಾವ್ ಚೌಹಾಣ್, ಬೈಲಹೊಂಗಲದ ಮಾಜಿ ಶಾಸಕರಾದ ಶ್ರೀ ವಿಶ್ವನಾಥ್ ಪಾಟೀಲ್, ಜಗಳೂರಿನ ಮಾಜಿ ಶಾಸಕರಾದ ಶ್ರೀ ಹೆಚ್.ಪಿ. ರಾಜೇಶ್, ಶಿಗ್ಗಾಂವಿಯ ಮುಖಂಡ ಶ್ರೀ ಶಶಿಧರ್ ಯಲಿಗಾರ್ ಅವರು ಸೇರಿದಂತೆ ಅನೇಕ ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾವೇರಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶ್ರೀ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ, ಬಿಜೆಪಿ ನಿಕಟಪೂರ್ವ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿ, ಸಂಸದರಾದ ಶ್ರೀ ಜಿ.ಎಂ. ಸಿದ್ದೇಶ್ವರ್, ವಿಧಾನಪರಿಷತ್ ಮುಖ್ಯಸಚೇತಕರಾದ ಶ್ರೀ ಎನ್. ರವಿಕುಮಾರ್, ಶಾಸಕರು ಹಾಗೂ ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಶೈಲೇಂದ್ರ ಬೆಲ್ದಾಳೆ, ಶ್ರೀ ಶರಣು ತಳ್ಳಿಕೇರಿ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

### ಮತ್ತೊಮ್ಮೆ ಮೋದಿ –ವಿಜಯ ಸಂಕಲ್ಪ

ಪಕ್ಷದ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ಅಧ್ಯಕ್ಷತೆಯಲ್ಲಿ ಲೋಕಸಭಾ ಚುನಾವಣೆಯ ನಿರ್ವಹಣಾ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಲೋಕಸಭಾ ಚುನಾವಣೆಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿ ಪ್ರಚಂಡ ವಿಜಯ ಸಾಧಿಸುವ ನಿಟ್ಟಿನಲ್ಲಿ ಚುನಾವಣಾ ನಿರ್ವಹಣಾ ಸಮಿತಿಯ ಜವಾಬ್ದಾರಿ ಮಹತ್ವದ ಪಾತ್ರ ವಹಿಸಲಿದ್ದು ಚುನಾವಣಾ ಕಾರ್ಯಗಳ ಸಿದ್ಧತೆ ಹಾಗೂ ಅನುಸರಿಸಬೇಕಾದ ಕ್ರಮಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಈ ಸಂದರ್ಭದಲ್ಲಿ ಚುನಾವಣಾ ನಿರ್ವಹಣಾ ಸಮಿತಿಯ ರಾಜ್ಯ ಸಂಚಾಲಕರಾದ ಶ್ರೀ ವಿ. ಸುನೀಲ್ ಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರೀತಮ್ ಗೌಡ, ಶ್ರೀ ಎನ್.ಎಸ್. ನಂದೀಶ್, ಪಕ್ಷದ ಪದಾಧಿಕಾರಿಗಳು ಹಾಗೂ ಚುನಾವಣಾ ನಿರ್ವಹಣಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

### ಮತ್ತೊಮ್ಮೆ ಮೋದಿ – ಜನಸಾಮಾನ್ಯರ ಸಂಕಲ್ಪ



ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಲೋಕಸಭಾ ಚುನಾವಣೆಯ ಪೂರ್ವಭಾವಿ ಸಭೆಯನ್ನು ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಪ್ರಧಾನಿ ಶ್ರೀ ಮೋದಿ ರವರ ವಿಕಸಿತ ಭಾರತ ನಿರ್ಮಾಣದ ಸಂಕಲ್ಪ ಸಾಕಾರಗೊಳಿಸುವ ನಿಟ್ಟಿನಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ 'ವೈದ್ಯೋ ನಾರಾಯಣೋ ಹರಿ' ಎನ್ನುವ ಪದಕ್ಕೆ ಒಂದು ಶ್ರೇಷ್ಠ ಅರ್ಥ ತಂದುಕೊಟ್ಟ ಕೀರ್ತಿ ಪಡೆದಿರುವ ನಮ್ಮ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ಅವರನ್ನು ನಮ್ಮ ಎನ್‌ಡಿಎ ಮೈತ್ರಿ ಪಕ್ಷ

ಜೆಡಿಎಸ್ ಬೆಂಬಲದೊಂದಿಗೆ ದಾಖಲೆಯ ಮತಗಳ ಅಂತರದಿಂದ ಗೆಲ್ಲಿಸಲು ಕಾರ್ಯಕರ್ತರು ವಿರಮಿಸದೇ ಶ್ರಮಿಸಬೇಕೆಂಬ ಸಂಕಲ್ಪ ಮಾಡಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಸಿ.ಕೆ.ರಾಮಮೂರ್ತಿ, ಶಾಸಕರಾದ ಶ್ರೀ ಎಂ.ಕೃಷ್ಣಪ್ಪ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಗೋಪಿನಾಥ್ ರೆಡ್ಡಿ, ಶ್ರೀ ತುಳಸಿ ಮುನಿರಾಜು ಗೌಡ, ಮುಖಂಡರಾದ ಶ್ರೀ ಎ.ಪಿ.ರಂಗನಾಥ್, ಪಕ್ಷದ ಮುಖಂಡರು ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಭಾರತ ಗೆಲ್ಲಿಸಲು ಮತ್ತೊಮ್ಮೆ ಮೋದಿ



ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಚುನಾವಣಾ ಕಾರ್ಯಾಲಯದ ಉದ್ಘಾಟನೆ ನೆರವೇರಿಸಿ ಮಾತನಾಡಿ, ದೇಶದ ಅಭಿವೃದ್ಧಿಯ ಗ್ಯಾರಂಟಿಯಾಗಿರುವ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿ ರವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ದೃಷ್ಟಿಯಿಂದ ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀ ತೇಜಸ್ವಿ ಸೂರ್ಯ ಅವರನ್ನು ದಾಖಲೆಯ ಮತಗಳ ಅಂತರಗಳಲ್ಲಿ ಗೆಲ್ಲಿಸಲು ಪ್ರತಿ ಮತದಾರರನ್ನು ತಲುಪಿ ಮತಯಾಚನೆ ಮಾಡುವ ನಿಟ್ಟಿನಲ್ಲಿ ಕಾರ್ಯಕರ್ತರು ಹಗಲಿರುಳೆನ್ನದೆ ಶ್ರಮಿಸಬೇಕೆಂಬ ಕರೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಸಿ.ಕೆ. ರಾಮಮೂರ್ತಿ, ಶಾಸಕರಾದ ಶ್ರೀ ರವಿ ಸುಬ್ರಮಣ್ಯ, ಶ್ರೀ ರಘು, ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳೀಕೇರಿ, ಮುಖಂಡರಾದ ಶ್ರೀ ಉಮೇಶ್ ಶೆಟ್ಟಿ ಅವರು ಸೇರಿದಂತೆ ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಮೋದಿ ಮತ್ತೊಮ್ಮೆ ಜನಸಾಮಾನ್ಯರ ಗ್ಯಾರಂಟಿ

ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜೇಂದ್ರ ರವರು ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಚುನಾವಣಾ ಕಾರ್ಯಾಲಯದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು ಪ್ರಧಾನಿ ಶ್ರೀ ನರೇಂದ್ರ ಮೋದಿ ರವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ಮೂಲಕ ವಿಕಸಿತ ಭಾರತದ ಸಂಕಲ್ಪದ ಸಾಕಾರಕ್ಕೆ ನಾಡಿನ



ಜನರೇ ದೃಢ ಸಂಕಲ್ಪ ತೊಟ್ಟಿದ್ದು ನಮ್ಮ ಅಭ್ಯರ್ಥಿ ಶ್ರೀ ಪಿ.ಸಿ. ಮೋಹನ್ ರವರ ಪ್ರಚಂಡ ಗೆಲುವಿಗೆ ನಮ್ಮೆಲ್ಲಾ ಕಾರ್ಯಕರ್ತರು ವಿರಮಿಸದೇ ಜೆಡಿಎಸ್ ಪಕ್ಷದೊಂದಿಗೆ ಜೊತೆಗೂಡಿ ಶ್ರಮಿಸಬೇಕೆಂಬ ಕರೆ ನೀಡಿದರು.

ಈ ಸಂದರ್ಭದಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಅಭ್ಯರ್ಥಿ ಶ್ರೀ ಪಿ.ಸಿ. ಮೋಹನ್, ಶಾಸಕರುಗಳಾದ ಶ್ರೀ ನಿಮ್ಮ ಸುರೇಶ್, ಶ್ರೀ ಎಸ್. ರಘು, ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳೀಕೇರಿ, ಜಿಲಾಧ್ಯಕ್ಷರಾದ ಶ್ರೀ ಸಪ್ತಗಿರಿ ಗೌಡ, ನಿವೃತ್ತ ಐಪಿಎಸ್ ಅಧಿಕಾರಿ ಹಾಗೂ ಮುಖಂಡರಾದ ಶ್ರೀ ಭಾಸ್ಕರ್ ರಾವ್, ಮಹಾನಗರ ಪಾಲಿಕೆಯ ಮಾಜಿ ಸದಸ್ಯರು, ಪಕ್ಷದ ಪದಾಧಿಕಾರಿಗಳು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ವಿಕಸಿತ ಭಾರತಕ್ಕಾಗಿ ಮತ್ತೊಮ್ಮೆ ಮೋದಿ ಸರ್ಕಾರ



ಮಲ್ಲೇಶ್ವರಂನ ಜಿ.ಎಂ. ರಿಜಾಯ್ಸ್ ಹೋಟೆಲ್‌ನಲ್ಲಿ ಲೋಕಸಭಾ ಚುನಾವಣಾ 2024ರ ಬಿಜೆಪಿ ಮಾಧ್ಯಮ ಕೇಂದ್ರದ ಉದ್ಘಾಟನೆಯನ್ನು ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ನೆರವೇರಿಸಿದರು. ರಾಜ್ಯದೆಲ್ಲೆಡೆ ಪ್ರಧಾನಿ ಶ್ರೀ ನರೇಂದ್ರ ಮೋದಿ ರವರ ಪರವಾದ ಅಲೆ ವ್ಯಾಪಕವಾಗಿದ್ದು 'ಮತ್ತೊಮ್ಮೆ ಮೋದಿ ಸರ್ಕಾರ' ಎಂಬುದು ಜನಸಾಮಾನ್ಯರ ಸಂಕಲ್ಪವಾಗಿದೆ. ದೇಶದಲ್ಲಿ 400 ಹಾಗೂ ರಾಜ್ಯದಲ್ಲಿ 28 ಕ್ಕೆ 28 ಸ್ಥಾನಗಳ ವಿಜಯದ ಗುರಿ ತಲುಪುವ ನಿಟ್ಟಿನಲ್ಲಿ ಮಾಧ್ಯಮ ಕಾರ್ಯಾಲಯ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸಬೇಕೆಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ವಿರೋಧ ಪಕ್ಷ ನಾಯಕರಾದ ಶ್ರೀ ಆರ್. ಅಶೋಕ, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಚುನಾವಣಾ ನಿರ್ವಹಣಾ ಸಮಿತಿ ರಾಜ್ಯ ಸಂಚಾಲಕರಾದ ಶ್ರೀ ವಿ. ಸುನೀಲ್ ಕುಮಾರ್, , ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರೀತಮ್ ಗೌಡ, ಬಿಜೆಪಿ ರಾಜ್ಯ ಮುಖ್ಯ ವಕ್ತಾರರಾದ ಶ್ರೀ ಅಶ್ವತ್ಥನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಛಲವಾದಿ ನಾರಾಯಣ ಸ್ವಾಮಿ, ಮಾಜಿ ಸಚಿವರಾದ ಶ್ರೀ ಎಸ್.ಎ.ರಾಮದಾಸ್, ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳೀಕೇರಿ, ಬಿಜೆಪಿ ರಾಜ್ಯ ಮಾಧ್ಯಮ ಸಂಚಾಲಕರಾದ ಶ್ರೀ ಕರುಣಾಕರ್, ಪಕ್ಷದ ವಕ್ತಾರರು, ಮಾಧ್ಯಮ ವಿಭಾಗದ ಸದಸ್ಯರು, ಕಾರ್ಯಕರ್ತರು ಹಾಗೂ ಮಾಧ್ಯಮ ಮಿತ್ರರು ಉಪಸ್ಥಿತರಿದ್ದರು.

## ಲೋಕಸಮರದ ಪ್ರಚಂಡ ವಿಜಯ ಬಿಜೆಪಿಯ ಸಂಕಲ್ಪ




ರಾಜ್ಯ ಬಿಜೆಪಿ ವತಿಯಿಂದ ಅರಮನೆ ಮೈದಾನದ ವೃಕ್ಷ ಸಭಾಂಗಣದಲ್ಲಿ ಆಯೋಜಿಸಿದ್ದ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿಯ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿದರು. 2024 ರ ಲೋಕಸಭಾ ಚುನಾವಣೆ ವಿಕಸಿತ ಭಾರತ ನಿರ್ಮಿಸಿ ಭಾರತ ಗೆಲ್ಲಿಸುವ ಚುನಾವಣೆಯಾಗಿದ್ದು ಚುನಾವಣಾ ಸಮಿತಿಯು ಜವಾಬ್ದಾರಿಯುತ ಸ್ಥಾನ ನಿರ್ವಹಿಸಲಿದ್ದು, ಅತ್ಯಂತ ಕ್ರಿಯಾಶೀಲ ನಿರ್ವಹಣೆಯ ಮೂಲಕ ಯಶಸ್ವಿಯಾಗಿ ಚುನಾವಣೆ ನಿರ್ವಹಿಸುವಂತೆ ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಚುನಾವಣಾ ಉಸ್ತುವಾರಿಗಳಾದ ಶ್ರೀ ಡಾ. ರಾಧಾಮೋಹನ್ ದಾಸ್ ಅಗರ್ವಾಲ್, ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಚುನಾವಣಾ ನಿರ್ವಹಣಾ ಸಮಿತಿ ರಾಜ್ಯ ಸಂಚಾಲಕರಾದ ಶ್ರೀ ವಿ. ಸುನೀಲ್ ಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರೀತಮ್ ಗೌಡ, ಶ್ರೀ ಪಿ. ರಾಜೀವ್, ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ, ಶ್ರೀ ಕೇಶವ ಪ್ರಸಾದ್, ಪಕ್ಷದ ಪದಾಧಿಕಾರಿಗಳು ಮುಖಂಡರು ಹಾಗೂ ಚುನಾವಣಾ ನಿರ್ವಹಣಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ಅಧ್ಯಕ್ಷತೆಯಲ್ಲಿ ಪಕ್ಷ ಸೇರ್ಪಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕೆಆರ್‌ಪಿಪಿ ಪಕ್ಷವನ್ನು ಬಿಜೆಪಿಯೊಂದಿಗೆ ವಿಲೀನಗೊಳಿಸಿ ತಮ್ಮ ಅಪಾರ ಬೆಂಬಲಿಗರೊಂದಿಗೆ ಪಕ್ಷಕ್ಕೆ ಮರಳಿದ ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಗಾಲಿ ಜನಾರ್ದನ ರೆಡ್ಡಿ ಅವರನ್ನು ಬಿಜೆಪಿಗೆ ಬರಮಾಡಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಕೇಂದ್ರ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಕರ್ನಾಟಕ ರಾಜ್ಯ ಚುನಾವಣಾ ಸಹ ಉಸ್ತುವಾರಿಗಳಾದ ಶ್ರೀ ಸುಧಾಕರ್ ರೆಡ್ಡಿ, ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿ, ಬಳ್ಳಾರಿ ಲೋಕಸಭಾ ಅಭ್ಯರ್ಥಿ ಶ್ರೀ ಬಿ. ಶ್ರೀರಾಮುಲು, ಸಂಸದರಾದ ಶ್ರೀ ಪಿ.ಸಿ. ಮೋಹನ್, ಮಾಜಿ ಸಚಿವರಾದ ಶ್ರೀ ಆನಂದ್ ಸಿಂಗ್, ಸಂಸದರಾದ ಶ್ರೀ ದೇವೇಂದ್ರಪ್ಪ, ಕೊಪ್ಪಳ ಜಿಲ್ಲಾಧ್ಯಕ್ಷರಾದ ಶ್ರೀ ನವೀನ್, ಮಾಜಿ ಸಚಿವರಾದ ಶ್ರೀ ಎಸ್.ಕೆ. ಬೆಳ್ಳುಬ್ಬಿ, ಶ್ರೀಮತಿ ಅರುಣಾ ಲಕ್ಷ್ಮಿ, ಡಾ.ಥಾಮಸ್, ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಮೋದಿಜೀ ಅವರ 10 ವರ್ಷಗಳ ಸಾಧನೆಗಳು ಬಿಜೆಪಿ ಪ್ರಚಂಡ ಗೆಲುವಿನ ಮೆಟ್ಟಿಲು



ಬೆಂಗಳೂರಿನಲ್ಲಿ ಆಯೋಜಿಸಿದ್ದ ಬಿಜೆಪಿ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣ ವಿಭಾಗದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಬಿಜೆಪಿಯ ರಾಜ್ಯಾಧ್ಯಕ್ಷರಾದ

ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿದರು. ಸಕಾರಾತ್ಮಕ ಅಂಶಗಳನ್ನು ಜನರ ಮುಂದಿಟ್ಟು, ಬಡವರು, ರೈತರು, ಮಹಿಳೆಯರು, ಯುವಜನತೆ ಎಂಬ 4 ವರ್ಗಗಳ ಜನರನ್ನು ತಲುಪಿ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಸಾಧನೆಗಳನ್ನು ಎಲ್ಲೆಡೆ ತಲುಪಿಸುವ ಮೂಲಕ ಕರ್ನಾಟಕ ರಾಜ್ಯವು ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲು ಎಂಬುದನ್ನು ಲೋಕಸಮರದಲ್ಲಿ 28 ಸ್ಥಾನಗಳಲ್ಲಿಯೂ ವಿಜಯ ಸಾಧಿಸುವ ಮೂಲಕ ಮತ್ತೊಮ್ಮೆ ರುಜುವಾತು ಮಾಡುವ ದೃಷ್ಟಿಯಿಂದ ವಿರಮಿಸದೇ ಶ್ರಮಿಸಬೇಕು ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿ, ರಾಷ್ಟ್ರೀಯ ವಕ್ತಾರರಾದ ಶ್ರೀ ಶೆಹಜಾದ್ ಪೂನಾವಾಲ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪಿ. ರಾಜೀವ್, ಶ್ರೀ ಪ್ರೀತಂ ಗೌಡ, ರಾಜ್ಯ ಉಪಾಧ್ಯಕ್ಷೆ ಮತ್ತು ಮಾಜಿ ಶಾಸಕಿ ಶ್ರೀಮತಿ ರೂಪಾಲಿ ನಾಯಕ್, ರಾಜ್ಯ ಮುಖ್ಯ ವಕ್ತಾರರಾದ ಶ್ರೀ ಅಶ್ವಥನಾರಾಯಣ್, ಪ್ರಕೋಷ್ಟಗಳ ರಾಜ್ಯ ಸಂಚಾಲಕರಾದ ಶ್ರೀ ಎಸ್. ದತ್ತಾತ್ರಿ, ರಾಜ್ಯ ಮಾಧ್ಯಮ ಸಂಚಾಲಕ ಶ್ರೀ ಕರುಣಾಕರ ಖಾಸಲೆ, ಸಹ-ಸಂಚಾಲಕ ಶ್ರೀ ಪ್ರಶಾಂತ್, ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣ ಪ್ರಕೋಷ್ಠದ ಪ್ರಮುಖರು ಉಪಸ್ಥಿತರಿದ್ದರು.

## ಮತದಾರ ಬಂಧುಗಳ ಸಂಕಲ್ಪ ಮತ್ತೊಮ್ಮೆ ಮೋದಿ ಸರ್ಕಾರ



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಆಯೋಜಿಸಿದ್ದ ರಾಜ್ಯ ಎಸ್‌ಸಿ, ಎಸ್‌ಟಿ ಪ್ರಮುಖರ ಸಭೆಯಯನ್ನು ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಸ್ವಾತಂತ್ರ್ಯ ನಂತರ ಈ ದೇಶದಲ್ಲಿ ಎಸ್‌ಸಿ - ಎಸ್‌ಟಿ ಸಮುದಾಯಗಳಿಗೆ ಆರ್ಥಿಕವಾಗಿ, ಔದ್ಯೋಗಿಕವಾಗಿ, ರಾಜಕೀಯವಾಗಿ ಶಕ್ತಿ ಕೊಡುವ ಪ್ರಾಮಾಣಿಕ ಪ್ರಯತ್ನ ನಡೆದಿದ್ದರೆ ಅದು ನಮ್ಮ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ಆಡಳಿತ ಅವಧಿಯಲ್ಲಿ ಮಾತ್ರ ಎಂದು ಹೇಳಿದರು. ನಮ್ಮದು ದಿನದ ಗ್ಯಾರಂಟಿ ಯೋಜನೆಗಳಲ್ಲ ಪ್ರಧಾನ ಮಂತ್ರಿ ವಿಶ್ವಕರ್ಮ' ಯೋಜನೆಯ ಮೂಲಕ ಸ್ವಾವಲಂಬಿ ಬದುಕು ರೂಪಿಸಿ ವರ್ಷಪೂರ್ತಿ ಹರುಷ ನೀಡುವ ಸರ್ಕಾರ ಎಂದು ತೋರಿಸಿಕೊಟ್ಟವರು ನಮ್ಮ ನರೇಂದ್ರ ಮೋದಿಯವರು. ಆದ್ದರಿಂದ ಅವರನ್ನು ಮಗದೊಮ್ಮೆ ಪ್ರಧಾನಿ ಮಾಡುವ ಸಂಕಲ್ಪವಾಗಬೇಕು, ಈ ನಿಟ್ಟಿನಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್, ರಾಜ್ಯ ಉಪಾಧ್ಯಕ್ಷರಾದ ಶ್ರೀ ಎನ್. ಮಹೇಶ್, ಸಂಸದರಾದ ಶ್ರೀ ಉಮೇಶ್ ಜಾದವ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಛಲವಾದಿ ನಾರಾಯಣ ಸ್ವಾಮಿ ಅವರು ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಸಿಮೆಂಟ್ ಮಂಜು, ಎಸ್‌ಟಿ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಬಂಗಾರು ಹನುಮಂತು, ಪ್ರಮುಖರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಮತ್ತೊಮ್ಮೆ ಮೋದಿಗಾಗಿ 28ಕ್ಕೆ 28 ಬಿಜೆಪಿ - ಜೆಡಿಎಸ್ ಸಮನ್ವಯ ಗೆಲುವಿನ ಗುರಿ



ಬೆಂಗಳೂರಿನಲ್ಲಿ ಲೋಕಸಭಾ ಚುನಾವಣೆಯ ಪೂರ್ವಭಾವಿಯಾಗಿ ಬಿಜೆಪಿ ಹಾಗೂ ಜೆಡಿಎಸ್ ರಾಜ್ಯ ಮಟ್ಟದ ಸಮನ್ವಯ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಮಾತನಾಡಿ ರಾಜ್ಯದ ಇತಿಹಾಸದಲ್ಲಿ ಈ ರಾಜಕೀಯ ಮೈತ್ರಿ ಚಾರಿತ್ರಿಕವಾಗಲಿದ್ದು, ಈ ಮೈತ್ರಿಯನ್ನು ಉಭಯ ಪಕ್ಷಗಳ ಕಾರ್ಯಕರ್ತರು ಸ್ವಾಗತಿಸಿ ಒಗ್ಗಟ್ಟು ಪ್ರದರ್ಶಿಸಿದ್ದು ರಾಜ್ಯದ ಜನತೆ ಮೈತ್ರಿ ಪರವಾಗಿ ಪೂರಕ ಸ್ಪಂದನೆ ವ್ಯಕ್ತಪಡಿಸುತ್ತಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿಗಳು ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಚುನಾವಣಾ ಉಸ್ತುವಾರಿಗಳಾದ ಡಾ. ರಾಧಾ ಮೋಹನ್‌ದಾಸ್ ಅಗರ್ವಾಲ್, ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೇಗೌಡ, ಮಾಜಿ ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಎಂ. ಕಾರಜೋಳ, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ನಾಯಕರು, ಶಾಸಕರು, ಸಂಸದರು, ಮುಖಂಡರು ಪದಾಧಿಕಾರಿಗಳು ಉಪಸ್ಥಿತರಿದ್ದರು.

## ವಿಕಸಿತ ಭಾರತಕ್ಕಾಗಿ ಮತ್ತೊಮ್ಮೆ ಮೋದಿ ನಮ್ಮೆಲ್ಲರ ದೃಢ ಸಂಕಲ್ಪ

ಪಕ್ಷದ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬಿಜೆಪಿ ಚುನಾವಣಾ ಆಯೋಗ ಮತ್ತು ಕಾನೂನು ವಿಭಾಗದ ವತಿಯಿಂದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ರಾಜ್ಯ ಪ್ರಕೋಷ್ಠಕಗಳ ಸಂಯೋಜಕರಾದ ಶ್ರೀ ದತ್ತಾತ್ರಿ, ಕಾನೂನು ಪ್ರಕೋಷ್ಠದ ರಾಜ್ಯ ಸಂಚಾಲಕರಾದ ಶ್ರೀ ವಸಂತ್ ಕುಮಾರ್, ಸಹ ಸಂಚಾಲಕರಾದ ಶ್ರೀ ಲಕ್ಷ್ಮಣ್ ಕುಲಕರ್ಣಿ, ಚುನಾವಣಾ ಆಯೋಗದ ಸಮಿತಿ ಸಂಚಾಲಕರಾದ ಶ್ರೀ ದತ್ತಗುರು ಹೆಗಡೆ, ಶ್ರೀ ವಿನೋದ್ ಕುಮಾರ್, ಶ್ರೀ ಬಿ.ಎಸ್. ರಾಜಶೇಖರ್, ಶ್ರೀ ಹರ್ಷ ಮುತಾಲಿಕ್, ಶ್ರೀ ಎಸ್.ಎಸ್. ಮಿಟ್ಟಲ್ ಕೋಡ್, ಕಾನೂನು ವಿಭಾಗದ ಸದಸ್ಯರು ಹಾಗೂ ಪ್ರಮುಖರು ಉಪಸ್ಥಿತರಿದ್ದರು.

## ದೇಶಭಕ್ತ ಕೊಡವರ ಸಂಕಲ್ಪ ಮತ್ತೊಮ್ಮೆ ಮೋದಿ ಸರ್ಕಾರ

**ಕೊಡಗು :** ಲೋಕಸಮರದ ಪ್ರವಾಸದ ಹಿನ್ನಲೆಯಲ್ಲಿ ಕೊಡಗಿನಲ್ಲಿ ಆಯೋಜಿಸಿದ್ದ ಬಿಜೆಪಿ ಕಾರ್ಯಕರ್ತರ ಬೃಹತ್ ಸಮಾವೇಶವನ್ನು ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿ ವಿಕಸಿತ ಭಾರತ ಸಂಕಲ್ಪವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸಾಗುತ್ತಿರುವ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಮಗದೊಮ್ಮೆ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ನಮ್ಮ ಅಭ್ಯರ್ಥಿ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಗೆಲ್ಲಿಸುವ ಸಂಕಲ್ಪ ಮಾಡೋಣ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು, ಸಂಸದರಾದ ಶ್ರೀ ಪ್ರತಾಪಸಿಂಹ, ಮಾಜಿ ಸಚಿವರಾದ ಶ್ರೀ ಎಸ್.ಎ.ರಾಮದಾಸ್, ಮಾಜಿ ಸ್ಪೀಕರ್ ಶ್ರೀ ಕೆ.ಜಿ. ಬೋಪಯ್ಯ, ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳೀಕೇರಿ, ಜಿಲ್ಲಾಧ್ಯಕ್ಷರಾದ ಶ್ರೀ ರವಿ ಕಾಳಪ್ಪ, ಪಕ್ಷದ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ವಿಕಸಿತ ಭಾರತಕ್ಕಾಗಿ ಮತ್ತೊಮ್ಮೆ ಮೋದಿ ಸಂಘಟಿತ ಸಂಕಲ್ಪ

**ಮೈಸೂರು :** ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ನಡೆದ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಸಮನ್ವಯ ಸಭೆಯನ್ನು ಆಯೋಜಿಸಲಾಗಿತ್ತು. ಬಲಿಷ್ಠ ಭಾರತ ನಿರ್ಮಾಣದ ಸಂಕಲ್ಪ ತೊಟ್ಟಿರುವ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರನ್ನು ಮಗದೊಮ್ಮೆ ಪ್ರಧಾನಿಯನ್ನಾಗಿಸಲೇಬೇಕೆಂಬ ಅಚಲ ನಿರ್ಧಾರದೊಂದಿಗೆ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಕಾರ್ಯಕರ್ತರು ಸಮನ್ವಯತೆಯಿಂದ ಒಗ್ಗಟ್ಟು ಕಾಯ್ದುಕೊಂಡು ಮೈಸೂರು -ಕೊಡಗು ಹಾಗೂ ಚಾಮರಾಜನಗರ ಲೋಕಸಭಾ ಅಭ್ಯರ್ಥಿಗಳನ್ನು ಅತಿ ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಿಸಲು ಹಗಲಿರುಳೆನ್ನದೆ ಶ್ರಮಿಸಬೇಕೆಂದು ಅವರು ಈ ಸಂದರ್ಭದಲ್ಲಿ ಕರೆ ನೀಡಿದರು.

ಮಾಜಿ ಮುಖ್ಯಮಂತ್ರಿಗಳು ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು, ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀ ಎಸ್.ಬಾಲರಾಜ್, ಮಾಜಿ ಉಪ ಮುಖ್ಯಮಂತ್ರಿಗಳಾದ ಡಾ. ಅಶ್ವತ್ಥನಾರಾಯಣ್, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೇಗೌಡ, ಸಂಸದರಾದ ಶ್ರೀ ಪ್ರತಾಪ್ ಸಿಂಹ, ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಎನ್. ಮಹೇಶ್, ಮಾಜಿ ಸಚಿವರಾದ ಶ್ರೀ ಸಾ.ರಾ.ಮಹೇಶ್, ಶಾಸಕರಾದ ಶ್ರೀ ಶ್ರೀವತ್ಸ, ಶ್ರೀ ಹರೀಶ್ ಗೌಡ, ಶ್ರೀ ಮಂಜೇಗೌಡ ಹಾಗೂ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಮತ್ತೊಮ್ಮೆ ಮೋದಿ ಸರ್ಕಾರಕ್ಕಾಗಿ ಬಿಜೆಪಿ-ಜೆಡಿಎಸ್ ಸಂಘಟಿತ ಗೆಲುವು



**ಮಂಡ್ಯ :** ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರ ಸಮನ್ವಯ ಸಭೆಯಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಮಾತನಾಡಿ ಸದೃಢ ಹಾಗೂ ಸಮೃದ್ಧ ಭಾರತಕ್ಕಾಗಿ ಮತ್ತೊಮ್ಮೆ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಮಂಡ್ಯದ ಜೆಡಿಎಸ್ ಅಭ್ಯರ್ಥಿ ಪ್ರಚಂಡ ಮತಗಳ ಅಂತರಗಳಲ್ಲಿ ಗೆಲುವು ಸಾಧಿಸಲು ಎರಡೂ ಪಕ್ಷಗಳ ಕಾರ್ಯಕರ್ತರು ಒಗ್ಗಟ್ಟಿನಿಂದ ಶ್ರಮಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಉಪ ಮುಖ್ಯಮಂತ್ರಿಗಳಾದ ಡಾ. ಅಶ್ವತ್ಥನಾರಾಯಣ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೇಗೌಡ, ಮಾಜಿ ಸಚಿವರುಗಳಾದ ಶ್ರೀ ಎಸ್. ಎ.ರಾಮದಾಸ್, ಡಾ. ನಾರಾಯಣ ಗೌಡ, ಶ್ರೀ ಸಿ.ಎಸ್. ಪುಟ್ಟರಾಜು, ಶ್ರೀ ಸಾ.ರಾ.ಮಹೇಶ್, ಮಾಜಿ ಶಾಸಕರುಗಳಾದ ಶ್ರೀ ಸುರೇಶ್ ಗೌಡ, ಶ್ರೀ ರವೀಂದ್ರ, ಶ್ರೀಕಂಠಯ್ಯ, ಶ್ರೀ ಅನ್ನದಾನಿ, ಬಿಜೆಪಿ ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳೀಕೇರಿ, ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀ ಇಂದ್ರೇಶ್, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.




# ಬಿಜೆಪಿಯ ಜನ ಕಲ್ಯಾಣ ಯೋಜನೆಗಳಿಗೆ ತಿಲಾಂಜಲಿ ಇತ್ತ

# ಕೈ ಸರ್ಕಾರ

**ಬಿ**ಜೆಪಿ ಸರ್ಕಾರ ಜಾರಿಗೆ ತಂದಿದ್ದ ರೈತರು, ಆಟೋ ಚಾಲಕರು, ನೇಕಾರರ ಮಕ್ಕಳ ವಿದ್ಯಾಭ್ಯಾಸಕ್ಕೆ ನೀಡುತ್ತಿದ್ದ ಸ್ಕಾಲರ್‌ಶಿಪ್ ಯೋಜನೆ **ವಿದ್ಯಾನಿಧಿ**, ದಶಕಗಳ ನಂತರ ಜಾರಿಗೆ ತಂದ ನೂತನ **ರಾಷ್ಟ್ರೀಯ ಶಿಕ್ಷಣ ನೀತಿ**, ಗೋವುಗಳ ರಕ್ಷಣೆಗೆ ಬಿಜೆಪಿ ಸರ್ಕಾರ ಪ್ರತಿ **ಜಿಲ್ಲೆಗೊಂದು ಗೋಶಾಲೆ** ತೆರೆಯುವ ಯೋಜನೆ ಗೋಶಾಲೆ, ಮಧ್ಯವರ್ತಿಗಳ ಹಾವಳಿಯಿಂದ ತಪ್ಪಿಸಲು ಜಾರಿಗೆ ತಂದ **ಎಪಿಎಂಸಿ ತಿದ್ದುಪಡಿ ಕಾಯಿದೆ**, ಸರ್ಕಾರಿ ಶಾಲೆಗಳಲ್ಲಿ ತರಗತಿ ಕೊಠಡಿಗಳನ್ನು ಕಟ್ಟಿಸುವ **ವಿವೇಕ ಶಾಲಾ ಯೋಜನೆ**, ಯುವ ಶಕ್ತಿಯನ್ನು ಸಮರ್ಪಕವಾಗಿ ಸಂಘಟಿಸಿ ಪ್ರತೀ ಗ್ರಾಮಪಂಚಾಯಿತಿಯಲ್ಲಿ **ಯುವಕ ಸಂಘ** ತೆರೆಯುವ ಯೋಜನೆ, ಗ್ರಾಮೀಣ ವಲಯದ ಮಹಿಳೆಯರ ಬದುಕಿಗೆ ಶಕ್ತಿ ತುಂಬುವ ಸ್ವ-ಸಹಾಯ ಸಂಘಗಳಿಗೆ 5 ಲಕ್ಷ ರೂ. ಕೊಡುವ **ಸ್ತ್ರೀ ಸಾಮರ್ಥ್ಯ ಯೋಜನೆ,** ನೇಗಿಲ ಯೋಗಿಯ ಕೈ ಬಲಪಡಿಸುವ **ಭೂಸಿರಿ ಯೋಜನೆ**, ಎಸ್.ಸಿ/ಎಸ್.ಟಿ ಸುಮುದಾಯದ ಯುವಕರಿಗೆ ತರಬೇತಿ ಕೊಡುವ ಯೋಜನೆ **ಅಗ್ನಿ ವೀರ್,** ಹೈನು ಉತ್ಪಾದನೆಗೆ ಬಲ ತುಂಬಲು ಜಾರಿಗೆ ತಂದಿದ್ದ **ಕ್ಷೀರ ಸಮೃದ್ಧಿ ಬ್ಯಾಂಕ್ ಯೋಜನೆ,** ಅಸ್ಪೃಶ್ಯ ಪಿಡುಗನ್ನು ಹೋಗಲಾಡಿಸಲು ಜಾರಿಗೆ ತಂದ **ವಿನಯ ಸಾಮರಸ್ಯ ಯೋಜನೆ,** ಮಹಿಳೆಯರಲ್ಲಿ ಆತ್ಮರಕ್ಷಣೆಗೆ ಹೆಚ್ಚಿಸಲು ಜಾರಿಗೆ ತಂದಿದ್ದ **ಓಬವ್ವ ಆತ್ಮರಕ್ಷಣಾ ತರಬೇತಿ ಯೋಜನೆ** ಸೇರಿದಂತೆ ಬಿಜೆಪಿ ಸರ್ಕಾರ ಜಾರಿಗೆ ತಂದ ಅನೇಕ ಯೋಜನೆಗಳಿಗೆ ಈಗಿನ ಕಾಂಗ್ರೆಸ್ ಸರ್ಕಾರ ತಿಲಾಂಜಲಿಗೆ ಇಟ್ಟಿದೆ.

## ಕಾಂಗ್ರೆಸ್ ಆಡಳಿತದಲ್ಲಿ ಹದಗೆಟ್ಟ ಕಾನೂನು ಸುವ್ಯವಸ್ಥೆ: ಮಹಿಳೆಯರ ಮೇಲೆ ಹೆಚ್ಚಿದ ದೌರ್ಜನ್ಯ

- ಹಿಂದಿನ ಕಾಂಗ್ರೆಸ್ ಸರಕಾರ ಓಲೈಕೆಯ ರಾಜಕಾರಣಕ್ಕಾಗಿ ಕೆ ಎಫ್ ಡಿ ಮತ್ತು ಪಿ ಎಫ್ ಐ ಮೇಲಿನ 1600 ಕೇಸುಗಳನ್ನು ವಾಪಾಸು ಪಡೆದಿತ್ತು. ಈಗ ಮತ್ತೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ನಂತರ ಸಮಾಜ ಘಾತುಕ ಶಕ್ತಿಗಳಿಗೆ ಮತ್ತೆ ಧೈರ್ಯ ಬಂದಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ರಾಜ್ಯದಲ್ಲಿ 1,80,742 ಅಪರಾಧ ಪ್ರಕರಣಗಳು ದಾಖಲಾಗಿವೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ 40% ಹೆಚ್ಚಳ. ಹಿರಿಯ ನಾಗರೀಕರ ಮೇಲಿನ ದೌರ್ಜನ್ಯ ಪ್ರಕರಣದಲ್ಲಿ 56% ರಷ್ಟು ಹೆಚ್ಚಳ.



- ನೈತಿಕ ಪೊಲೀಸ್‌ಗಿರಿಯ ನೆಪದಲ್ಲಿ ಹಾವೇರಿಯಲ್ಲಿ ನಡೆದ ಅತ್ಯಾಚಾರ ಪ್ರಕರಣವನ್ನು ತನಿಕೆ ನಡೆಸದೇ ಪೊಲೀಸರೇ ರಾಜಿ ಮಾಡಿಸುವ ಪ್ರಯತ್ನ ಮಾಡಿದ್ದರು. ಇಂತಹ ನಡೆಗಳು ಅಪರಾಧಿಗಳಿಗೆ ಅಪರಾಧ ಕೃತ್ಯ ಮಾಡಲು ಮತ್ತಷ್ಟು ಧೈರ್ಯ ತಂದುಕೊಟ್ಟಿದೆ.
- ರಾಜಧಾನಿ ಕ್ರೈಂ ಸಿಟಿಯಾಗಿ ಬದಲಾಗುತ್ತಿದೆ. ರಾಜ್ಯದಲ್ಲಿ ಕೊಲೆಗ ಪ್ರಮಾಣ ಹಿಂದಿನ ಬಿಜೆಪಿ ಸರಕಾರದ ಆಡಳಿತಕ್ಕೆ ಹೋಲಿಸಿದರೆ ಶೇ.31 ರಷ್ಟು ಹೆಚ್ಚಳ. ದರೋಡೆ ಪ್ರಕರಣ ಕಳೆದ ವರ್ಷಕ್ಕೆ ಹೋಲಿಸದರೆ ಶೇ. 41 ರಷ್ಟು ಹೆಚ್ಚಳ. 2023 ರಲ್ಲಿ ರಾಜ್ಯದಲ್ಲಿ ಇದುವರೆಗೆ 176 ಮಹಿಳೆಯರ ಮೇಲೆ ಅತ್ಯಾಚಾ, 1135 ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ, ವರದಕ್ಷಿಣೆಯ ಕಿರುಕುಳಕ್ಕೆ 25 ಮಂದಿ ಸಾವಿಗೀಡಾಗಿದ್ದಾರೆ. ಒಟ್ಟಾರೆ ಅಪಹರಣ ಪ್ರಕರಣಗಳು 2023ರಲ್ಲಿ ಹೆಚ್ಚಳ.ಬೆಳಗಾವಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯೊಬ್ಬರ ಮೇಲೆ ಹಲ್ಲೆ ಮಾಡಿ ಅವರ ಮೂಗನ್ನು ಕತ್ತರಿಸಿ ಆಕಯೆ ಮೇಲೆ ಮೂತ್ರ ವಿಸರ್ಜನೆ ಮಾಡಿದ ಅಮಾನವೀಯ ಘಟನೆ, ಮದ್ದೆ ಬಿಹಾಳದಲ್ಲಿ ನ್ಯಾಯಾಲಯದ ಎದುರೇ ಮಹಿಳೆಯನ್ನು ವಿದ್ಯುತ್ ಕಂಬಕ್ಕೆ ಕಟ್ಟಿ ಹಲ್ಲೆ ಮಾಡಿದ ಪ್ರಕರಣ, ಬೆಂಗಳೂರು ಜಯನಗರದ ಸೌತ್ ಎಂಡ್ ಸರ್ಕಲ್ ಬಳಿ ಇರು ಡಿಸಿಪಿ ಕಛೇರಿ ಹತ್ತಿರವೇ ತಡ ರಾತ್ರಿ ಕಿಡಿಗೇಡಿಯೊಬ್ಬ ಯುವತಿಯನ್ನು ಪೀಡಿಸಿದ ಪ್ರಕರಣ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಎಷ್ಟು ಹತೋಟಿಯಲ್ಲಿದೆ ಎಂಬುದನ್ನು ತೋರಿಸುತ್ತದೆ.
- ಬೆಳಗಾವಿಯಲ್ಲಿ ನಡೆದ ಬೆತ್ತಲೆ ಪ್ರಕರಣದಲ್ಲಿ ರಾಜ್ಯ ಸರಕಾರ ತೋರಿದ ಅಸಡ್ಡೆಯನ್ನು ಗಮನಿಸಿದ ರಾಜ್ಯದ ಉಚ್ಚ ನ್ಯಾಯಾಲಯ ಸ್ವಯಂ ಪ್ರೇರಿತ ದೂರನ್ನು ದಾಖಲಿಸಿಕೊಂಡು ರಾಜ್ಯ ಸರಕಾರದ ಆಡಳಿತ ದುಶ್ಯಾಸನನ ಆಡಳಿತಕ್ಕಿಂತಲೂ ಘೋರವಾಗಿದೆ ಎಂದು ರಾಜ್ಯದ ಕಾಂಗ್ರೆಸ್ ಸರಕಾರದದ ಮೇಲೆ ಛೀಮಾರಿ ಹಾಕಿತು.
- ಒಟ್ಟಾರೆ ರಾಜ್ಯ ಸರಕಾರದ ದಿವ್ಯನಿರ್ಲಕ್ಷದ ಕಾರಣ ಬೆಂಗಳೂರು ನಗರದಲ್ಲಿ ಕಳೆದ 8 ತಿಂಗಳಲ್ಲಿ ಮಹಿಳೆಯರ ಮೇಲಿನ ಅಪರಧಾಗಳು ವರದಿಯಯಾದ ಪ್ರಕರಣಗಳ ಸಂಖ್ಯೆ-3260. ಇದು ದೇಶದಲ್ಲೇ ಅತ್ಯಂತ ಹೆಚ್ಚು. ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯದಲ್ಲಿ ಮಹಿಳೆಯರು ಹಿಂದೆಂದಿಗಿಂತಲೂ ಅಸುರಕ್ಷಿತ.

- ರಾಜ್ಯ ಸರಕಾರದ ಅತಿಯಾದ ಓಲೈಕೆಯ ಮಾನಸಿಕತೆಯ ಕಾರಣ ಉಗ್ರವಾದಿಗಳಿಗೆ ಸ್ವರ್ಗವಾಗುತ್ತಿರುವ ಕರ್ನಾಟಕ. ಶಿವಮೊಗ್ಗ, ತೀರ್ಥಹಳ್ಳಿ, ಬಳ್ಳಾರಿ ಮತ್ತು ಬೆಂಗಳೂರುನಲ್ಲಿ ಎನ್‌ಐಎ ಅಧಿಕಾರಿಗಳು ಸಾಲು ಸಾಲು ಉಗ್ರವಾದಿಗಳನ್ನು ಬಂಧಿಸಿದ್ದು, ರಾಜ್ಯದಲ್ಲಿ ಹೇಗೆ ಉಗ್ರವಾದ ಅವ್ಯಾಹತವಾಗಿ ತನ್ನ ಜಾಲವನ್ನು ವಿಸ್ತರಿಕೊಳ್ಳುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.
- ಬೆಂಗಳೂರಿನ ರೌಡಿ ಶೀಟರ್ ರಿಜ್ವಾನ್ ಸಹಚರರು ಪೂಲೀಸರ ಎದುರೇ ಸಿಗರೇಟು ಸೇದಿ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನಸಿದ ಘಟನೆ,2023 ಜುಲೈನಲ್ಲಿ ನೊ-ಪಾರ್ಕಿಂಗ್ ವಲಯದಲ್ಲಿ ಪಾರ್ಕ್ ಮಾಡಿದ್ದ ಕಾರಿನ ಚಕ್ರ ಲಾಕ್ ಮಾಡಿದ್ದನ್ನು ವಿರೋಧಿಸಿ ಸಂಚಾರಿ ಪೊಲೀಸ್ ಕಾನ್‌ಸ್ಟೆಬಲ್ ಉಮೇಶ್ ಮೇಲೆ ಮಾರಣಾಂತಿಕ ಹಲ್ಲೆ, 2024 ಜನವರಿಯಂದು ಕಾರಿನೊಳಗೆ ಅಸಭ್ಯವಾಗಿ ವರ್ತಿಸುತ್ತಿದ್ದ ಯುವಕರಿಗೆ ಬುದ್ದಿ ಹೇಳಲು ಹೋದ ಪೊಲೀಸ್ ಎಸ್‌ಐ ಮೇಲೆ ಕಾರು ಹತ್ತಿಸುವ ಪ್ರಯತ್ನ, ಅಕ್ಟೋಬರ್ 2023ರಲ್ಲಿ ಬೆಂಗಳೂರಿನ ಸದಾಶಿವ ನಗರ ಠಾಣಾ ವ್ಯಾಪ್ತಿಯಲ್ಲಿ ಹುಸೈನ್ ಖಾನ್ ಎನ್ನುವ ಪಾತಕಿ ಅತನನ್ನು ಬಂಧಿಸಲು ಹೋದ ಹೆಡ್ ಕಾನ್ಸ್ಟೆಬಲ್ ಮೇಲೆಯ ಚಾಕು ಇರಿತ, ಕಲಬುರಗಿಯಲ್ಲಿ ಅಕ್ರಮ ಮರಳುದಂಧೆಯನ್ನು ತಡೆಯಲು ಹೋಗಿದ್ದ ನಲೋಗಿ ಪೊಲೀಸ್ ಠಾಣೆಯ ಕಾನ್ಸ್ಟೆಬಲ್ ಮಯೂರ್ ಚವ್ಹಾಣ್ ಅವರ ಮೇಲೆ ಟ್ರ್ಯಾಕ್ಟರ್ ಹತ್ತಿಸಿ ಕೊಲೆ, ನವೆಂಬರ್ 2023 ರಲ್ಲಿ ಡಿಜೆ ಹಳ್ಳಿಯಲ್ಲಿ ಗಲಾಟೆಯನ್ನು ತಪ್ಪಿಸಲು ಹೋದ ಕಾನ್‌ಸ್ಟೆಬಲ್ ರಮೇಶ್ ಅವರ ಮೇಲೆ ಹಲ್ಲೆ, ಅಗಸ್ಟ್ 2023 ರಲ್ಲಿ ಚಾಮರಾಜನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ತಪಾಸಣೆ ನಡೆಸಲು ಬಂದ ಇಬ್ಬರು ಕಾನ್ಸ್ಟೆಬಲ್ ಮೇಲೆ ಜೆಜೆ ನಗರದ ನಿವಾಸಿ ಫಾರೂಕ್‌ನಿಂದ ಮಚ್ಚಿನಿಂದ ಹಲ್ಲೆ. ರಾಜ್ಯದ ಕಾಂಗ್ರೆಸ್ ಸರ್ಕಾರದಲ್ಲಿ ರಕ್ಷಣೆ ಕೊಡುವ ಪೊಲೀಸರಿಗೂ ರಕ್ಷಣೆ ಇಲ್ಲ.

## ಅಸಮರ್ಪಕ ಬರ ನಿರ್ವಹಣೆ ಮತ್ತು ರೈತರ ಬದುಕಿಗೆ ಕೊಳ್ಳಿ ಇಟ್ಟ ಕಾಂಗ್ರೆಸ್ ಆಡಳಿತ



- ರಾಜ್ಯದ ಬರ ನಿರ್ವಹಣೆಯಲ್ಲಿ ರಾಜ್ಯ ಸರಕಾರ ಸಂಪೂರ್ಣವಾಗಿ ಸೋತಿದೆ. ಪರಿಣಾಮ ರಾಜ್ಯದಲ್ಲಿ ಗುಳೆ ಹೋಗುವವರ ಸಂಖ್ಯೆಯಲ್ಲಿ ಹೆಚ್ಚಳ, ರಾಜ್ಯದ 7,247 ಹಳ್ಳಿಗಳಲ್ಲಿ ಕುಡಿವ ನೀರಿಗೂ ಸಂಚಕಾರ, ಪಶುಗಳ ಮೇವಿನ ಬೇಡಿಕೆಯ ಅರ್ಧದಷ್ಟನ್ನೂ ಪೂರೈಕೆ ಮಾಡದ ಸರಕಾರ, ರೈತರು ಕೇಳಿದ 20 ಲಕ್ಷ ಟನ್ ಮೇವಿನ ಬದಲಾಗಿ ರಾಜ್ಯ ಸರಕಾರ ಕೊಟ್ಟಿದ್ದು ಕೇವಲ 8 ಲಕ್ಷ ಟನ್, ಇದುವರೆಗೆ 692 ಜನ ರೈತರ ಆತ್ಮಹತ್ಯೆ. ಇದರ ಜೊತೆಗೆ ರಾಜ್ಯ ಕಾಂಗ್ರೆಸ್ ಸರಕಾರದ ಸಚಿವ ಶ್ರೀ ಶಿವಾನಂದ ಪಾಟೀಲ್ ರೈತರು ಸಾಲ ಮನ್ನಕ್ಕಾಗಿಯೇ ಬರಗಾಲವನ್ನು ನಿರೀಕ್ಷೆ ಮಾಡುತ್ತಿದ್ದಾರೆ ಎಂಬ ಹೇಳಿಕೆ. ರಾಜ್ಯ ಕಾಂಗ್ರೆಸ್ ಸರಕಾರ ಎಷ್ಟೊಂದು ಸಂವೇದನಾ ಶೂನ್ಯ ಎಂಬುದಕ್ಕೆ ಸಾಕ್ಷಿಯಾಗಿದೆ.

## ಐಟಿ ರಾಜಧಾನಿ ಆಗಿದ್ದ ಬೆಂಗಳೂರು ಈಗ ಸೈಬರ್ ವಂಚಕರ ರಾಜಧಾನಿ



- ರಾಜ್ಯದ ಬರ ನಿರ್ವಹಣೆಯಲ್ಲಿ ರಾಜ್ಯ ಸರಕಾರ ಸಂಪೂರ್ಣವಾಗಿ ಸೋತಿದೆ. ಪರಿಣಾಮ ರಾಜ್ಯದಲ್ಲಿ ಗುಳೆ ಹೋಗುವವರ ಸಂಖ್ಯೆಯಲ್ಲಿ ಹೆಚ್ಚಳ, ರಾಜ್ಯದ 7,247 ಹಳ್ಳಿಗಳಲ್ಲಿ ಕುಡಿವ ನೀರಿಗೂ ಸಂಚಕಾರ, ಬರದ ಕಾರಣ ಪಶುಗಳ ಮೇವಿನ ಬೇಡಿಕೆಯ ಅರ್ಧದಷ್ಟನ್ನೂ ಪೂರೈಕೆ ಮಾಡದ ಸರಕಾರ, ರೈತರು ಕೇಳಿದ 20 ಲಕ್ಷ ಟನ್ ಮೇವಿನ ಬದಲಾಗಿ ರಾಜ್ಯ ಸರಕಾರ ಕೊಟ್ಟಿದ್ದು ಕೇವಲ 8 ಲಕ್ಷ ಟನ್, ಇದುವರೆಗೆ 692 ಜನ ರೈತರ ಆತ್ಮಹತ್ಯೆ. ಇದರ ಜೊತೆಗೆ ರಾಜ್ಯ ಕಾಂಗ್ರೆಸ್ ಸರಕಾರದ ಸಚಿವ ಶ್ರೀ ಶಿವಾನಂದ ಪಾಟೀಲ್ ರೈತರು ಸಾಲ ಮನ್ನಕ್ಕಾಗಿಯೇ ಬರಗಾಲವನ್ನು ನಿರೀಕ್ಷೆ ಮಾಡುತ್ತಿದ್ದಾರೆ ಎಂಬ ಹೇಳಿಕೆ. ರಾಜ್ಯ ಕಾಂಗ್ರೆಸ್ ಸರಕಾರ ಎಷ್ಟೊಂದು ಸಂವೇದನಾ ಶೂನ್ಯ ಎಂಬುದಕ್ಕೆ ಸಾಕ್ಷಿಯಾಗಿದೆ.

## 40% ಸರ್ಕಾರ ಎಂದಿದ್ದ ಕಾಂಗ್ರೆಸ್ ಈಗ ಅದೇ ಆರೋಪವನ್ನು ಎದುರಿಸುತ್ತಿದೆ

- ವಿಧಾನಸಭೆ ಚುನಾವಣೆ ಸಮಯದಲ್ಲಿ ಆಧಾರ ರಹಿತವಾಗಿ 40% ಆರೋಪ ಮಾಡಿದ್ದ ಕಾಂಗ್ರೆಸ್ ಈಗ ತನ್ನದೇ ಆಡಳಿದಲ್ಲಿ 40% ಕಮಿಷನ್ ಆರೋಪವನ್ನು ಎದುರಿಸುತ್ತಿದೆ. ರಾಜ್ಯದ ಕಾಂಗ್ರೆಸ್ ಸರಕಾರದ ಮೇಲೆಯೇ ಗುತ್ತಿಗೆದಾರರ ಸಂಘದ ಅಧ್ಯಕ್ಷರಾದ ಶ್ರೀ ಕೆಂಪಣ್ಣ 40% ಆರೋಪ ಮಾಡಿದ್ದಾರೆ. ಬಿಜೆಪಿ ಕಾಲದ 40 % ಆರೋಪವನ್ನು ತನಿಖೆ ಮಾಡಲು ಕಾಂಗ್ರೆಸ್ ಸರಕಾರ ನೇಮಿಸಿದ್ದ ನ್ಯಾ। ನಾಗಮೋಹನ್ ದಾಸ್ ಆಯೋಗ ಕಳೆ ಒಂದು ವರ್ಷದಿಂದ ಸಮರ್ಪಕವಾಗಿ ತನಿಕೆ ನಡೆಸುತ್ತಿಲ್ಲ ಎಂದು ನ್ಯಾಯಾಲಯವೇ ಛೀಮಾರಿ ಹಾಕಿದೆ. ಕಾಂಗ್ರೆಸ್ ಸರಕಾರ ವರ್ಗಾವಣೆ ದಂಧೆ ನಡೆಸುತ್ತಿದೆ ಎಂದು ಅದೇ ಪಕ್ಷದ ಮಾಜಿ ಸಚಿವ ಶ್ರೀ ಬಿ. ಶಿವರಾಂ ಅವರೇ ನೇರ ಆರೋಪ ಮಾಡಿದ್ದಾರೆ, ಮುಖ್ಯಂತ್ರಿಯವರ ಮಗ ಸರ್ಕಾರಿ ಯಂತ್ರವನ್ನು ದುರುಪಯೋಗ ಮಾಡಿಕೊಂಡು, ವರ್ಗಾವಣೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬ ಆರೋಪಕ್ಕೆ ಅವರ ಹಲೋ ಅಪ್ಪ ಕ್ಯಾತಿಯ ವೀಡಿಯೋ ಸಾಕ್ಷಿಯಾಗಿದೆ, ಕಿಯೋನಿಕ್ಸ್‌ನಲ್ಲಿ ಗುತ್ತಿಗೆದಾರರಿಗೆ ಕಮಿಷನ್ ಕೊಡದ ಕಾರಣ, ಬಿಲ್ ಪಾವತಿಯಲ್ಲಿ ವಿಳಂಬವಾಗುತ್ತಿದೆ ಎಂದು ಸ್ವತಃ ಗುತ್ತಿಗೆದಾದರೊಬ್ಬರು ಮಾಧ್ಯಮಗಳ ಮುಂದೆ ಅವಲತ್ತುಕೊಂಡಿದ್ದರು, ಗುತ್ತಿಗೆದಾರಾರ ಬಿಲ್ ಪಾವತಿಯಲ್ಲಿ ನಡೆಯುತ್ತಿರುವ ವಿಳಂಬನ್ನು ಪ್ರಶ್ನೆ ಮಾಡಿದ್ದ ರಾಜ್ಯ ಹೈಕೋರ್ಟ್ ಜನರಿಗೆ ಈ ಕಾಂಗ್ರೆಸ್ ಸರಕಾರವೇ ಮೊದಲ ಶತ್ರು ಎಂದು ಛೀಮಾರಿ ಹಾಕಿತ್ತು. ಕೃಷಿ ಸಚಿವ ಚೆಲುವರಾಯ ಸ್ವಾಮಿ ಅವರು ಲಂಚಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ ಕೃಷಿ ಇಲಾಖೆಯ ಅಧಿಕಾರಿಗಳೇ ಪತ್ರ ಬರೆದು ದೂರು ಕೊಟ್ಟರೂ ರಾಜ್ಯ ಸರಕಾರ ಇದರ ಬಗ್ಗೆ ಯಾವುದೇ ಕ್ರಮ ಜರುಗಿಸಲಿಲ್ಲಾ. 2500 ಕೋಟಿ ರೂ ಪಾಲಿಕೆಯ

ಬಾಕಿ ಬಿಲ್ ಪಾವತಿ ಆಗದ ಕಾರಣ ಗುತ್ತಿಗೆದಾರಾರು ದಯಾಮರಣಕ್ಕೂ ಅರ್ಜಿ ಹಾಕಿದ್ದರು. ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಆರ್‌ಟಿಓ ಚೆಕ್ ಪೋಸ್ಟ್‌ಗಳಲ್ಲಿ ಪ್ರತೀ ಎರಡು ಗಂಟೆಗೊಮ್ಮೆ ಲಂಚದ ಹಣ ಸಾಗಾಣಿಕೆ ಆಗುತ್ತಿದೆ ಎಂದು ಲೋಕಾಯುಕ್ತವೇ ಹೇಳಿರುವುದು ಅತ್ಯಂತ ಕಳವಳಕಾರಿ.

## ಬೆಲೆ ಏರಿಕೆಯನ್ನು ಬಳುವಳಿಯಾಗಿ ಕೊಟ್ಟ ಕಾಂಗ್ರೆಸ್ ಸರಕಾರ

- ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬೆನ್ನಲ್ಲೇ ವಿದ್ಯುತ್ ದರಗಳನ್ನ ಏರಿಸಿತು.ಹಾಲಿನ ದರ ಏರಿಸಲಾಯಿತು, ಇದರ ಪರಿಣಾಮ ಹೋಟೆಲ್ ತಿಂಡಿಗಳ ಬೆಲೆಯಲ್ಲೂ ಶೇ 10ರಷ್ಟು ಏರಿಕೆ ಆಯಿತು. ರಾಜ್ಯ ಸರಕಾರ ಪಶು ಅಹಾರಕ್ಕೆ ಪ್ರತೀ ಮೆಟ್ರಿಕ್ ಟನ್ ಗೆ ರೂ 500 ಹೆಚ್ಚಿಸಿದೆ. ಮುದ್ರಾಂಕ ಶುಲ್ಕವನ್ನು ಏರಸಿರುವ ರಾಜ್ಯ ಸರಕಾರ ರೈತರ ಜೀವನವನ್ನು ನರಕ ಮಾಡಿದೆ.ಆಸ್ತಿ ನೋಂದಣಿ ಶೇ.30 ರ್ರು ಹೆಚ್ಚಾಗಿದೆ. ಕಟ್ಟಡ ಸಾಮಗ್ರಿಗಳ ಬೆಲೆಯಲ್ಲಿ ಏರಿಕೆ, ನಗರ ಪ್ರದೇಶದಲ್ಲಿ ನೀರಿನ ದರ ಹೆಚ್ಚಳ, ಮೊಟ್ಟೆಯ ದರದಲ್ಲಿ ಏರಿಕೆ ಮೂಲಕ ಕಾಂಗ್ರೆಸ್ ಬೆಲೆ ಏರಿಕೆ ಗ್ಯಾರಂಟಿ ನೀಡಿದೆ.

## ಕಾಂಗ್ರೆಸ್ ಸರಕಾರದ ಓಲೈಕೆ ರಾಜಕಾರಣ ಮತ್ತು ಬಿಜೆಪಿ ಕಾರ್ಯಕರ್ತರಿಗೆ ಕಿರುಕುಳ

- ರಾಜ್ಯ ಸರಕಾರದ ಓಲೈಕೆ ರಾಜಕಾರಣ ಇಡೀ ರಾಜ್ಯದ ಕಾನೂನು ಸುವ್ಯವಸ್ಥೆಯನ್ನೇ ಹದಗೆಡಿಸಿದೆ. ಕಾರವಾರದಲ್ಲಿ ವಿಧಾನಸಭಾ ಚುನಾವಣೆಯ ಫಲಿತಾಂಶ ಬಂದ ನಂತರ ಬಿಜೆಪಿ ಕಾರ್ಯಕರ್ತರ ವಾಹನಗಳಿಗೆ ಕಾಂಗ್ರೆಸ್ ಬೆಂಬಲಿಗರಿಂದ ಬೆಂಕಿ, ಬೆಳಗಾವಿ ಉತ್ತರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಶಾಸಕ ಆಸಿಫ್ ಸೇಠ್ ಅವರ ವಿಜಯೋತ್ಸವದ ಸಂದರ್ಭದಲ್ಲಿ ಪಾಕ್ ಧ್ವಜದ ಪ್ರದರ್ಶನ, ಘೋಣೆ ಕೂಗಿದರು ಯಾವುದೇ ಕಾನೂನು ಕ್ರಮ ಕೈಗೊಳ್ಳಲಿಲ್ಲ.
- ಡಿಜೆ ಹಳ್ಳಿ, ಕೆಜಿ ಹಳ್ಳಿ, ಹುಬ್ಬಳ್ಳಿ ಮತ್ತು ಶಿವಮೊಗ್ಗದ ದೊಂಬಿ ಪ್ರಕರಣದಲ್ಲಿ ಬಂಧಿತರ ಮೇಲಿನ ಕೇಸನ್ನು ಹಿಂಪಡೆಯಲು ಸರ್ಕಾರದ ಹುನ್ನಾರ, ಮಂಗಳೂರಿನ ಮೂವರು ಹಿಂದೂ ಕಾರ್ಯಕರ್ತರಿಗೆ ಗಡಿಪಾರು ಆದೇಶ, ಕೋಲಾರದ ಕ್ಲಾಕ್ ಟವರ್ ಬಳಿ ಬೃಹತ್ ತಲ್ವಾರ್ ಪ್ರದರ್ಶಿಸಿ ಹಿಂದೂಗಳನ್ನು ಬೆದರಿಸುವ ಕೆಲಸ, ಶಿವಮೊಗ್ಗದ ರಾಗಿಗುಡ್ಡದಲ್ಲಿ ನಡೆದ ಈದ್ ಗಲಭೆಯ ಸಂದರ್ಭದಲ್ಲಿ ಹಿಂದುಗಳ ಪ್ರದೇಶಗಳಿಗೆ ಮತ್ತು ಮನೆಗಳಿಗೆ ನುಗ್ಗಿ ಬೆದರಿಕೆ ಸೇರಿದಂತೆ ಮಂಡ್ಯ ಹನುಮ ಧ್ವಜ ಪ್ರಕರಣದಲ್ಲಿ ರಾಜ್ಯ ಸರಕಾರ ಹಿಂದು ಸಮಾಜಕ್ಕೆ ನೋವನ್ನುಂಟು ಮಾಡಲು ಏನೆಲ್ಲಾ ಮಾಡಬೇಕೋ ಅದೆಲ್ಲವನ್ನೂ ಮಾಡಿತು.
- ಬೆಂಗಳೂರಿನ ರಾಮೇಶ್ವರಂ ಕೆಫೆ ಬಾಂಬ್ ಬ್ಲಾಸ್ಟ್ ಇದಕ್ಕೆ ಸಾಕ್ಷಿಯಾಗಿದೆ.ಈ ಪ್ರಕರಣವನ್ನು ಉಗ್ರಗಾಮಿ ಕೃತ್ಯ ಎಂದು ನೇರವಾಗಿ ಹೇಳಲು ಕಾಂಗ್ರೆಸ್ ಸರಕಾರ ಹಿಂದೇಟು ಹಾಕಿತ್ತು.
- ರಾಜ್ಯಸಭಾ ಚುನಾವಣೆಯಲ್ಲಿ ಗೆದ್ದ ಕಾಂಗ್ರೆಸ್ ಅಭ್ಯರ್ಥಿ ನಾಸಿರ್ ಹುಸೇನ್ ಅವರ ವಿಜಯೋತ್ಸವದ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ಕಾರ್ಯಕರ್ತರೆ ವಿಧಾನಸೌಧದ ಒಳಗೆ ಪಾಕಿಸ್ತಾನದ ಪರ ಘೋಣೆಗಳನ್ನು ಕೂಗಿದರೂ, ದೇಶದ್ರೋಹಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ಹಿಂದೇಟು ಹಾಕಿತು.
- ಬೆಂಗಳೂರಿನ ನಗರ್ತಪೇಟೆಯಲ್ಲಿ ಹನುಮಾನ್ ಚಾಲೀಸ್ ಹಾಕಿದ ಕಾರಣಕ್ಕೆ ಮತಾಂದರು ಅಂಗಡಿ ಮಾಲೀಕನ ಮೇಲೆ ಹಾಡುಹಗಲೇ ಮಾರಣಾಂತಿಕ ಹಲ್ಲೆನಡೆಸುತ್ತಾರೆ.
- ಸರಕಾರಿ ಯಂತ್ರದ ದುರ್ಬಳಕೆ: ಬಿಜೆಪಿ ಹಾಗೂ ಹಿಂದೂ ಕರ್ಯಾಕರ್ತರ ಮೇಲೆ ನಿರಂತರ ಹಲ್ಲೆ.
- ಕಲಬುರಗಿಯ ಚಿತ್ತಾಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಣಿಕಂಠ ಮತ್ತು ಅವರ ಸಹವರ್ತಿಯ ಮೇಲೆ ಮಾರಣಾಂತಿಕ ಹಲ್ಲೆ. ಹೊಸಕೋಟೆಯ ಡಿ ಶೆಟ್ಟಿ ಹಳ್ಳಿಯಲ್ಲಿ ಚುನಾವಣೆ ವೈಶಮ್ಯದ ಕಾರಣಕ್ಕೆ ಬಿಜೆಪಿ ಕಾರ್ಯಕರ್ತ ಕೃಷ್ಣಪ್ಪ ಹತ್ಯೆ, ಟಿ. ನರಸೀಪುರದಲ್ಲಿ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ್ ಹತ್ಯೆ, ಯಾದಗಿರಿಯಲ್ಲಿ ಬಿಜೆಪಿ ಕಾರ್ಯಕರ್ತ ಶ್ರೀನಿವಾಸ್ ಹತ್ಯೆ, ಧಾರವಾಡದಲ್ಲಿ ಚುನಾವಣಾ ವಿಜಯೋತ್ಸವದ ವೇಳೆ ಬಿಜೆಪಿ ಕಾರ್ಯಕರ್ತ ಭರತೇಶ ಗಾಳಿ ಅವರ ಮೇಲೆ ಕಾಂಗ್ರೆಸ್ ಕಾರ್ಯಕರ್ತರಿಂದ ಚಾಕು ಇರಿತ, ಕಲ್ಬುರ್ಗಿಯಲ್ಲಿ ನಮೋ ಭಾರತ ಕಾರ್ಯಕ್ರಮಕ್ಕೆ ಹೋಗಲು ಸಜ್ಜಾಗಿದ್ದ ಖ್ಯಾತ ವಾಗ್ಮಿ, ಲೇಖಕ ಚಕ್ರವರ್ತಿ ಸೂಲಿಬೆಲೆ ಅವರಿಗೆ ನಗರ ಪ್ರೇಶಕ್ಕೆ ನಿರ್ಭಂದ, ದಕ್ಷಿಣಕನ್ನಡ ಜಿಲ್ಲೆಯ ಮಂಡೂರು ಗ್ರಾಮದಲ್ಲಿ ರಾಮ ಮಂದಿರದ ಅಕ್ಷತೆ ವಿತರಣೆ ಮಾಡುತ್ತಿದ್ದ ಸಂತೋಷ ಅವರ ಮೇಲೆ ಮತಾಂದರಿಂದ ದಾಳಿ.

## ರಾಜ್ಯ ಸರಕಾರದ ಆರ್ಥಿಕ ಅಶಿಸ್ತು

- ಸಮಾಜ ಕಲ್ಯಾಣ ಇಲಾಖೆಯ 25 ಸಾವಿರ ಕೋಟಿ ರೂಗಳನ್ನು ಇತರ ಯೋಜನೆಗಳಿಗೆ ಬಳಿಸಿಕೊಂಡು ಎಸ್.ಸಿ/ಎಸ್.ಟಿ ಸಮುದಾಯದವರಿಗೆ ಅನ್ಯಾಯ ಮಾಡಿದ ಕಾಂಗ್ರೆಸ್ ಸರ್ಕಾರ. ಅಭಿವೃದ್ಧಿ ಕಾರ್ಯಗಳಿಗೆ ಬಿಡುಗಾಸು ಹಣವನ್ನೂ ಬಿಡುಗಡೆ ಮಾಡದ ರಾಜ್ಯ ಸರಕಾರ, ಅಲ್ಪ ಸಂಖ್ಯಾತರ ಓಲೈಕೆಗೆ 10 ಸಾವಿರ ಕೋಟಿಯನ್ನ ಕಾಯ್ದಿರಿಸಿದೆ. ಹೈನುಗಾರಿಕೆಯಲ್ಲಿ ನಿರತರಾಗಿರುವ ರೈತರ 716 ಕೋಟಿ ರೂ ಪ್ರೋತ್ಸಾಹ ಧನ ಬಿಡುಗಡೆ ಮಾಡಲು ಮೀನಮೇಶ,ರಾಜ್ಯದ ಅರಣ್ಯ ಸಂರಕ್ಷಕರಿಗೆ ಕಳೆದ 3-4 ತಿಂಗಳಿಂದ ವೇತನವಿಲ್ಲಾ. ಹಣದ ಕೊರತೆಯಿಂದ ಈ ವರ್ಷ ರಾಜ್ಯದ ವಸತಿ ಶಾಲೆಗಳಲ್ಲಿ 4.39 ಲಕ್ಷ ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆ ಕಲ್ಪಿಸುವಲ್ಲಿ ರಾಜ್ಯ ಸರಕಾರ ವಿಫಲ.
- ಶಾಲೆಗಳ ಬಿಸಿಯೂಟಕ್ಕೆ ಕೇವಲ ಅಕ್ಕಿ, ಗೋಧಿ ಮಸಾಲೆ ಪುಡಿ ನೀಡಿ ಸುಮ್ಮನಾದ ಸರಕಾರ, ಬಿಸಿಯೂಟಕ್ಕೆ ಎಣ್ಣೆ ತರಕಾರಿಯನ್ನೂ ಒದಗಿಸುವಲ್ಲಿ ವಿಫಲ,ಸರಕಾರಿ ಶಾಲೆಗಳಿಗೆ ಉಚಿತವಾಗಿ ನೀರು ವಿದ್ಯುತ್ ಕೊಡುವುದಾಗಿ ಘೋಷಣೆ ಮಾಡಿದ್ದ ಸರ್ಕಾರ ಈಗ

ವಿದ್ಯುತ್ ಮತ್ತು ನೀರಿನ ಬಿಲ್ ಭರಿಸುವಂತೆ ಸೂಚನೆ, ಹತ್ತನೇ ತರಗತಿಯ ಪೂರ್ವಸಿದ್ದತಾ ಪರೀಕ್ಷೆಗೆ ಪ್ರಶ್ನೆಪತ್ರಿಕೆಗೆ ತಲಾ 50 ರೂ ವಿದ್ಯಾರ್ಥಿಗಳಿಂದಲೇ ವಸೂಲಿ ಮಾಡಿದ್ದ ರಾಜ್ಯ ಸರಕಾರ, ಉತ್ತರ ಪತ್ರಿಕೆ ಕೊಡಲು ಹಣವಿಲ್ಲ ಎಂದು ವಿದ್ಯಾರ್ಥಿಗಳೇ ಅದನ್ನು ತರಬೇಕು ಎಂದು ಆದೇಶಿಸಿದೆ. ಕೆಇಎ ವಿದ್ಯಾರ್ಥಿಗಳಿಂದ ಎರಡುಸಲ ಶುಲ್ಕ ವಸೂಲು, ವಸತಿ ಶಾಲೆ ವಿದ್ಯಾರ್ಥಿಗಳಿ ಸೋಪ್ ಕಿಟ್ ಕೂಡದ ಸರ್ಕಾರ. ಹಿಂದುಳಿದ ವರ್ಗಗಳ ಮಕ್ಕಳಿಗೆ ನೀಡುವ ವಿದ್ಯಾಸಿರಿಗೆ ಅನುದಾನದ ಕೊರತೆ ಸರ್ಕಾರದ ಆರ್ಥಿಕ ಪರಿಸ್ಥಿತಿಯ ದಿವಾಳಿತನ ತೊರಿಸುತ್ತದೆ.

- 15 ನೇ ಹಣಕಾಸು ಆಯೋಗ 2012 ರಿಂದ 2026 ರ ವರೆಗೆ ರಾಜ್ಯಕ್ಕೆ ಶಿಫಾರಸ್ಸು ಮಾಡಿ 8,042 ಕೋ.ರೂ. ಅನುದಾವನ್ನು ಪಡೆಯಲು ಬೇಕಾದ ಕ್ರಮಗಳನ್ನು ರಾಜ್ಯ ಸರ್ಕಾರ ಮಾಡುತ್ತಿಲ್ಲಾ. ರಾಜ್ಯ ಸರ್ಕಾರ ಬಂದು ಒಂದು ವರ್ಷವಾದರೂ ಅಭಿವೃದ್ಧಿ ಕೆಲಸಗಳಿಗೆ ಹಣ ಬಿಡುಗಡೆಯಿಲ್ಲ ಹಾಗೂ ಶಾಸಕರಿಗೆ ಅನುದಾನವಿಲ್ಲ.
- ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಹಣವನ್ನು ಸರ್ಕಾರ ಸರಿಯಾಗಿ ಬಳಸಿಕೊಳ್ಳದೆ ಹಾಗೆ ಬಿಟ್ಟಿರುವುದು ಸರ್ಕಾರದ ಬೇಜವಾಬ್ದಾರಿತನವನ್ನು ಸೂಚಿಸುತ್ತದೆ.ರಾಜ್ಯದ ವಿಜ್ಞಾನ ಪರಿಷತ್‌ಗೆ ಸರ್ಕಾರ ಅನುದಾನ ಬಿಡುಗಡೆ ಮಾಡದೆ ಸಂಸ್ಥೆಯನ್ನು ಹಾಳುಗೆಡಗುತ್ತಿದೆ. ದುರಾಡಳಿತದಿಂದ ರಾಜ್ಯಕ್ಕೆ ಹರಿದು ಬರುವ ವಿದೇಶಿ ಬಂಡವಾಳದಲ್ಲಿ ಶೇ.46 ರಷ್ಟು ಕುಸಿತ. ಬಿಜೆಪಿ ಸರ್ಕಾರ ಅನುಮೋದನೆ ನೀಡಿದ್ದ 10 ಸಾವಿರ ಕೋಟಿ ರೂ ಕಾಮಗಾರಿಗಳ ರದ್ದು. ಸುಮಾರು 8 ತಿಂಗಳಿಂದ ಗ್ರಾಮ ಪಂಚಾಯ್ತಿ ಸದಸ್ಯರಿಗೆ ಗೌರವ ಧನ ಬಿಡುಗಡೆ ಮಾಡದೆ, ರಾಜ್ಯದ 6022 ಗ್ರಾಮ ಪಂಚಾಯ್ತಿಗಳ ಸುಮಾರು 90 ಸಾವಿರ ಸದಸ್ಯರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಅಲ್ಲದೆ ಬ್ರ್ಯಾಂಡ್ ಬೆಂಗಳೂರು ಮಾಡುತ್ತೇನೆ ಎಂದಿದ್ದ ಸರ್ಕಾರ ಈಗ ಹಿಂದಿನ ಬಿಜೆಪಿ ಜಾರಿಗೆ ತಂದ 8 ಪ್ರಮುಖ ಯೋಜನೆಗಳನ್ನು ಕೈಬಿಟ್ಟಿದೆ.
- ಕನ್ನಡ ಸಂಸ್ಕೃತಿ ಇಲಾಖೆಯ ಕಲಾ ತಂಡಗಳಿಗೆ ಕೊಡುವ ಅನುದಾನಕ್ಕೆ ರಾಜ್ಯ ಸರ್ಕಾರ ಕತ್ತರಿ. ಹಳೆ ಪಿಂಚಣಿ ಸ್ಕೀಮ್ ಜಾರಿ ಬಗ್ಗೆ ಯಾವುದೇ ಕ್ರಮಕೈಗೊಂಡಿಲ್ಲಾ. ಗ್ಯಾರಂಟಿ ಯೋಜನೆಗಳು ರಾಜ್ಯದ ಆರ್ಥಿಕ ಭಾರವನ್ನು ಹೆಚ್ಚಿಸಿದೆ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ರಾಯರೆಡ್ಡಿಯವರೆ ಒಪ್ಪಿಕೊಂಡಿದ್ದು, ಪೂರಕ ಎಂಬಂತೆ ಇದುವರೆಗೂ ಯಾವುದೇ ಹೊಸ ಅಭಿವೃದ್ಧಿಕಾರ್ಯ ಆಗದಿರುವುದು ಸರ್ಕಾರ ರಾಜ್ಯದ ಆರ್ಥಿಕ ಸ್ಥಿತಿಗಳನ್ನು ಮರೆಮಾಚುತ್ತಿರುವುದು ಸ್ಪಷ್ಟವಾಗಿ ಗೊಚರಿಸುತ್ತಿದೆ.

## ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ

- **ಕಾಂ**ಗ್ರೆಸ್ ಸರ್ಕಾರ ತಪ್ಪು ನಿರ್ಧಾರ ಕೈಗೊಂಡು ಹದಗೆಟ್ಟಿರುವ ಕಾನೂನು ಸುವ್ಯವಸ್ಥೆ, ಒತ್ತಡದಲ್ಲಿರುವ ರಾಜ್ಯದ ಪೊಲೀಸ್ ಇಲಾಖೆಯ ಸಮಸ್ಯೆಗಳಿಗೆ ಸ್ಪಂದಿಸದೆ ಆಟವಾಡುತ್ತಿದೆ.
- ರೈತರ ಕೃಷಿ ಪಂಪಸೆಟ್‌ಗಳಿಗೆ ಹೈ-ಓಲ್ಟೇಜ್ ವಿದ್ಯುತ್ ಪೂರೈಸದೆ, ರೈತರ ಕೃಷಿ ಚಟುವಟಿಕೆಗಳಿಗೆ ತೊಡಕುಂಟಾಗಿದೆ.
- ಕಳೆದ ಮೂರು ತಿಂಗಳಿಂದ ವಿದ್ಯುತ್ ಮೀಟರ್ ರೀಡರ್‌ಗಳಿಗೆ ಸಂಬಳವಿಲ್ಲ. 4 ರಿಂದ 5 ಸಾವಿರ ರೂ. ವೆತನದಲ್ಲಿ ಕಡಿತ ಗೊಳಿಸಿ ಅವರ ಜೀವನದ ಜೊತೆಗೆ ಚೆಲ್ಲಾಟವಾಡುತ್ತಿದೆ.
- ಅನುದಾನ ರಹಿತ ಮತ್ತು ಖಾಸಗಿ ಶಾಲೆಗಳಲ್ಲಿ ನಾಡಗೀತೆ ಹಾಡಬೇಕಿಲ್ಲಾ ಎಂಬ ಅರ್ಥದ ಆದೇಶ.
- ಶಿಕ್ಷಣ ಇಲಾಖೆಯಲ್ಲಿ ಮಹತ್ತರವಾದ ಬದಲಾವಣೆ, ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡುತ್ತೇವೆ ಎಂದ ಸರ್ಕಾರ ಪರೀಕ್ಷಾ ಸಮಯದಲ್ಲೇ 300 ಕ್ಕೂ ಅಧಿಕ ಪ್ರೌಢಶಾಲಾ ಶಿಕ್ಷಕರಿಗೆ ಬಡ್ತಿ ನೀಡಿ ವರ್ಗಾವಣೆ ಮಾಡಿ ವಿದ್ಯಾರ್ಥಿಗಳನ್ನು ಆತಂಕಕ್ಕೆ ದೂಡಿತ್ತು.
- ರಾಜ್ಯದ 19 ಸಾವಿರ ಶಾಲೆಗಳ ಆಸ್ತಿ ಲೆಕ್ಕ ಬಾಕಿ ಇದ್ದು, 4,876 ಶಾಲೆಗಳ ಗೋಡೆಗಳಿಗೆ ಆವರಣವಿಲ್ಲ, 23 ಶಾಲೆಗಳಿಗೆ ಶೌಚಾಲಯವಿಲ್ಲ.
- ರಾಜ್ಯದ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದರು, ಅಗತ್ಯ ಸೌಕರ್ಯವಿಲ್ಲ. ವಿದ್ಯಾರ್ಥಿಗಳಿಗೆ ನರಕ ಯಾತನೆ.
- ರಾಜ್ಯದ ಬಾಣಂತಿ ಶಿಕ್ಷಕಿಯರಿಗೆ ಹೇರಿಗೆ ರಜೆಯನ್ನು ಕೊಡದೆ ರಾಜ್ಯ ಸರ್ಕಾರ ಅವರ ಬದುಕಿನ ಜೊತೆಗೆ ಚೆಲ್ಲಾಟವಾಡುತ್ತಿದೆ.

## ಗ್ಯಾರಂಟಿ ಯೋಜನೆಗಳ ಅಸಮರ್ಪಕ ಅನುಷ್ಠಾನ

- ರಾಜ್ಯದ ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳು ಇನ್ನೂ ಅರ್ಹ ಫಲಾನುಭವಿಗಳಿಗೆ ಸರಿಯಾಗಿ ತಲುಪುತ್ತಿಲ್ಲ.
- ಅನ್ನಭಾಗ್ಯ ಯೋಜನೆಯಲ್ಲಿ ಕೇಂದ್ರದ 5 ಕೆಜಿ ಅಕ್ಕಿಯ ಜೊತೆ ರಾಜ್ಯ ಸರಕಾರದ 5 ಕೆಜಿ ಅಕ್ಕಿ ಸೇರಿ ಒಟ್ಟು 10 ಕೆಜಿ ಅಕ್ಕಿ ನೀಡುವುದಾಗಿ ಹೇಳಿದ್ದ ಕಾಂಗ್ರೆಸ್, ಕೇಂದ್ರ ಸರಕಾರದ ಕೊಟ್ಟ 5 ಕೆಜಿ ಅಕ್ಕಿ ತನ್ನದೇ ಸರಕಾರದ ಕೊಡುಗೆ ಎಂದು ಹೇಳಿ ತನ್ನ ಪಾಲಿನ 5 ಕೆಜಿ ಅಕ್ಕಿಯನ್ನು ಇದುವರೆಗೂ ಜನರಿಗೆ ಕೊಟ್ಟಿಲ್ಲ.
- ಮಹಿಳೆಯರಿಗೆ ಬಸ್ಸಿನಲ್ಲಿ ಉಚಿತ ಪ್ರಯಾಣ ಯೋಜನೆ ಜಾರಿಯಿಂದ ಪ್ರಯಾಣಿಕರ ಅಗತ್ಯಕ್ಕನುಗುಣವಾಗಿ ಬಸ್ಸಿಲ್ಲದೆ ಸಾರ್ವಜನಿಕರಿಗೆ ತೊಂದರೆ, ನಿಗಮಗಳಿಗೆ ಸರಿಯಾಗಿ ಹಣ ನೀಡಿಲ್ಲ.
- ರಾಜ್ಯದ ಪ್ರತೀ ಮಹಿಳೆಯರಿಗೂ ಮಾಸಿಕ 2,000 ರೂ ಕೊಡುವ ಗೃಹ ಲಕ್ಷ್ಮಿ ಯೋಜನೆ ನೋಂದವಾಣೆಗೆ ಸರಿಯಾದ ಮಾರ್ಗೋಪಾಯವಿಲ್ಲದೆ ಅಲ್ಲಿಯೂ ಮಹಿಳೆಯರ ಪರದಾಟ.
- ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ಕೊಡುವ ಯುವ ನಿಧಿ ಯೋಜನೆ ಕಾಂಗ್ರೆಸ್ ಸರಕಾರ ಜಾರಿಗೆ ತರಲು ರಾಜ್ಯದ ವಿರೋಧ ಪಕ್ಷಗಳು ಒತ್ತಡಹಾಕಬೇಕಾಯಿತು. ಈ ಯೋಜನೆಯನ್ನು ಸರಕಾರ ಜಾರಿಗೆ ತಂದರೂ ಅನಗತ್ಯ ನಿಮಯ ಜಾರಿಗೊಳಿಸಿ ಅರ್ಹರಿಗೆ ಪೂರ್ಣ ಪ್ರಮಾಣದಲ್ಲಿ ಯೋಜನೆ ತಲುಪದಂತೆ ಸರಕಾರವೇ ಮಾಡಿದೆ.

## ಪ್ರಸಕ್ತ ಮೋದಿ ಸರ್ಕಾರ ಮತ್ತು ಹಿಂದಿನ ಯುಪಿಎ ಸರಕಾರದ ಪ್ರಗತಿಯ ತುಲನಾತ್ಮಕವಾದ ಅಂಕಿ ಅಂಶ

| | 2014 | 2024 |
|---|---|---|
| ▪ ವಿಮಾನ ನಿಲ್ದಾಣಗಳು | 74 | 150 |
| ▪ ಮೆಟ್ರೋ ವ್ಯವಸ್ಥೆ ಇರುವ ನಗರಗಳು | 5 (248 ಕಿ.ಮೀ.) | 20 (860 ಕಿ ಮೀ) |
| ▪ ಸರಕಾರಿ ಖಜಾನೆಯಲ್ಲಿ ಸೋರಿಕೆ | 85% | 0 % |
| ▪ ಕೃಷಿ ಬಜೆಟ್ ಹಂಚಿಕೆ | 21,933 ಕೋಟಿ ರೂ | 1,25,036 ಕೋಟಿ ರೂ |
| ▪ ಅಹಾರ ಉತ್ಪಾದನೆ | 256.05 ಎಂ ಎಂ ಟಿ | 323.55 ಎಂ ಎಂ ಟಿ |
| ▪ ತಾಯಂದಿರ ವಾರ್ಷಿಕ ಮರಣ ಪ್ರಮಾಣ | 167 | 97 |
| ▪ ಒಟ್ಟು ರಫ್ತಿನ ಪ್ರಮಾಣ | 466.22 ಬಿಲಿಯನ್ ಡಾಲರ್ | 709.81 ಬಿಲಿಯನ್ ಡಾಲರ್ |
| ▪ ಏಮ್ಸ್ | 8 | 23 |
| ▪ ವೈದ್ಯಕೀಯ ಕಾಲೇಜುಗಳು | 641 | 1341 |
| ▪ ವೈದ್ಯಕೀಯ ಸೀಟುಗಳು | 82,466 | 1,52,129 |
| ▪ ಐಐಟಿ ಗಳು | 16 | 23 |
| ▪ ಐಐಎಂಗಳು | 13 | 20 |
| ▪ ವಿಶ್ವವಿದ್ಯಾನಿಲಯಗಳು | 723 | 1,113 |
| ▪ ಲಸಿಕೆಗೆ ಅಭಿವೃದ್ದಿ ಮಾಡಲು ತೆಗೆದುಕೊಂಡ ಸರಾಸರಿ ಸಮಯ | 30 ವರ್ಷ ಸರಾಸರಿ | 1 ತಿಂಗಳು ( ಕೋವಿಡ್ ಲಸಿಕೆ) |
| ▪ ರಕ್ಷಣಾ ಉತ್ಪನ್ನಗಳ ರಫ್ತಿನ ಪ್ರಮಾಣ | 1,941 ಕೋಟಿ ರೂ | 16,000 ಕೋಟಿ ರೂ |
| ▪ ರಾಷ್ಟ್ರೀಯ ಹೆದ್ದಾರಿ | 91,287 ಕಿ.ಮೀ | 1,45,155 ಕಿ.ಮೀ |
| ▪ ವಿದೇಶಿ ನೇರ ಬಂಡವಾಳ ಹೂಡಿಕೆ | 324 ಶತ ಕೋಟಿ ಡಾಲರ್ (2000-2014) | 578ಶತ ಕೋಟಿ ಡಾಲರ್ (2014 -2023) |
| ▪ ಆರ್ಥಿಕ ಸ್ಥಿತಿಗತಿ | ವಿಶ್ವದ 5 ದುರ್ಬಲ ರಾಷ್ಟ್ರಗಳಲ್ಲಿ ಒಂದು | ವಿಶ್ವದ 5ನೇ ದೊಡ್ಡ ಆರ್ಥಿಕ ಶಕ್ತಿ |
| ▪ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ಉತ್ಪಾದನಾ ಪ್ರಮಾಣ | | 300% ಏರಿಕೆ |
| ▪ ಪೇಟೆಂಟ್ ಪ್ರಮಾಣ | 6,326 (2015-2016) | 34,153 (2022-23) |
| ▪ ಸ್ಟಾರ್ಟ್‌ಅಪ್‌ಗಳ ಸಂಖ್ಯೆ | 350 | 90,000+ |
| ▪ ಯುನಿಕಾರ್ನ್ ಗಳ ಸಂಖ್ಯೆ | 4 | 100+ |
| ▪ ಗ್ರಾಮೀಣ ರಸ್ತೆಗಳ ಅಭಿವೃದ್ಧಿ | 3,20,000 ಕಿ.ಮೀ | 3,75,000 ಕಿ ಮೀ |
| ▪ ವಂದೇ ಭಾರತ ರೈಲುಗಳು | 0 | 47 |
| ▪ ಬ್ರಾಡ್ ಗೇಜ್ ರೈಲ್ವೇ ಹಳಿಗಳ ವಿದ್ಯುದೀಕರಣ | 21,801 ಕಿ.ಮೀ (2014 ತನಕ ಆಗಿದ್ದು) | 40,000 ಕಿ.ಮೀ. (2014ರಿಂದ 2024 ಜನವರಿಯ ತನಕ ಆಗಿದ್ದು) |
| ▪ ಬ್ರಾಡ್ ಗೇಜ್ ರೈಲ್ವೇ ಹಳಿಗಳ ವಿದ್ಯುದೀಕರಣದ ವೇಗ | ದಿನಕ್ಕೆ 1.42 ಕಿ.ಮೀ. (2004-2014) | ದಿನಕ್ಕೆ 18 ಕಿ.ಮೀ (2022-2024) (61,813 ಕಿ.ಮೀ. ಶೇ 94 ರಷ್ಟು) |

# ಎನ್‌ಡಿಎ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ



ಡಾ. ಸಿ.ಎನ್. ಮಂಜುನಾಥ್, ಬೆಂಗಳೂರು ಗ್ರಾಮಾಂತರ



ಕು. ಶೋಭಾ ಕರಂದ್ಲಾಜೆ, ಬೆಂಗಳೂರು ಉತ್ತರ



ಶ್ರೀ ಪಿ.ಸಿ. ಮೋಹನ್, ಬೆಂಗಳೂರು ಕೇಂದ್ರ



ಶ್ರೀ ತೇಜಸ್ವಿ ಸೂರ್ಯ, ಬೆಂಗಳೂರು ದಕ್ಷಿಣ



ಡಾ. ಕೆ. ಸುಧಾಕರ್, ಚಿಕ್ಕಬಳ್ಳಾಪುರ



ಶ್ರೀ ಎಂ. ಮಲ್ಲೇಶ್ ಬಾಬು, ಕೋಲಾರ (ಎಸ್.ಸಿ.)





ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬಿಜೆಪಿ ಸಂಸ್ಥಾಪನಾ ದಿವಸ ಅಂಗವಾಗಿ ಧ್ವಜಾರೋಹಣ ಹಾಗೂ ಹಿರಿಯ ಕಾರ್ಯಕರ್ತರಿಗೆ ಸನ್ಮಾನ



ಕಾಲೇ ವರ್ಷತು ಪರ್ಜನ್ಯಃ

# ನಂಬಿಕೆ ಮತ್ತು ಪುರುಷ ಪ್ರಯತ್ನ

ಸಂಕಷ್ಟಗಳು ಬಂದೆರಗಿದಾಗ ನಮ್ಮ ಸಾಮರ್ಥ್ಯದ ಮೇಲೆ ನಂಬಿಕೆಯಿರಬೇಕು. ಸಂಕಷ್ಟ ನಿವಾರಣೆಗೆ ಆ ನಂಬಿಕೆಯಿಂದಲೇ ನಮ್ಮೆಲ್ಲಾ ಪ್ರಯತ್ನಗಳನ್ನು ಮುಂದುವರೆಸಬೇಕು. ಜೊತೆಗೆ ನಮ್ಮವರೂ ನಮ್ಮ ಜೊತೆಯಲ್ಲಿದ್ದಾರೆಂಬ ಆತ್ಮವಿಶ್ವಾಸವೂ ಇರಬೇಕು. ಎಲ್ಲರ ಪ್ರಯತ್ನದ ನಡುವೆಯೂ ನಮ್ಮ ಸಂಕಷ್ಟ ನಿವಾರಣೆ ಆಗದಿದ್ದಲ್ಲಿ ಭಗವಂತನ ಮೊರೆ ಹೋಗುವುದು ಅನಿವಾರ್ಯ. ಈ ನಂಬಿಕೆ, ವಿಶ್ವಾಸದೊಡನೆಯೇ ಮುನ್ನಡೆಯುತ್ತಿರಬೇಕು. ಪ್ರಯತ್ನ ಮಾಡುವುದನ್ನೇ ಬಿಟ್ಟು, ಮೊದಲೇ ಭಗವಂತನ ಮೊರೆ ಹೋದರೆ ಅದು ಅಸಹಾಯಕತೆಯ ಅನಾವರಣವಷ್ಟೆ.

ಮಹಾಭಾರತದ ದ್ರೌಪದಿ ಮಾಡಿದ್ದೂ ಇದನ್ನೇ. ದುಶ್ಯಾಸನ ದ್ರೌಪದಿಯ ವಸ್ತ್ರಾಪಹರಣ ಮಾಡುವ ಕಾಲದಲ್ಲೂ ಆಕೆ ತನ್ನ ಮಾನ ಉಳಿಸಿಕೊಳ್ಳಲು ತನ್ನೆಲ್ಲಾ ಪ್ರಯತ್ನಗಳನ್ನು ಮಾಡಿ ವಿಫಲವಾಗಿ, ಕೊನೆಯಲ್ಲಿ ಭಗವಂತನ ಮೊರೆ ಹೋಗುತ್ತಾಳೆ. ಮೊದಲು ತನ್ನ ಐವರು ಗಂಡಂದಿರ ಸಹಾಯ ಯಾಚಿಸಿದಳು, ಸಭೆಯಲ್ಲಿರುವ ಗುರು ದ್ರೋಣಾಚಾರ್ಯ, ಜಗದೇಕ ವೀರ ಕುರುಕುಲದ ಸಿಂಹಾಸನವನ್ನು ಕಾಯುವ ಪ್ರತಿಜ್ಞೆ ಮಾಡಿದ್ದ ಭೀಷ್ಮ, ಮಹಾನ್ ಜ್ಞಾನಿ ವಿದುರನಂತವರ ಸಹಾಯ ಯಾಚಿಸಿದಳು, ಅವರು ಮನಸ್ಸು ಮಾಡಿದರೆ ಇದನ್ನು ತಡೆಯುವ ಸಾಮರ್ಥ್ಯವಿದೆ ಎಂಬ ನಂಬಿಕೆ ದ್ರೌಪದಿಯಲ್ಲಿತ್ತು. ಅಪ್ರತಿಮ ಜ್ಞಾನಿಯಾಗಿದ್ದ ದ್ರೌಪದಿಗೆ ಮನವರಿಕೆಯಾಯಿತು, ಇಲ್ಲಿ ನಡೆಯುತ್ತಿರುವುದು ಘನಘೋರವಾದ ಅಪರಾಧವಾದವೆಂದು ತಿಳಿದಿದ್ದರೂ ಪಾಂಡವರಾಗಲಿ, ಭೀಷ್ಮ ದ್ರೋಣ ವಿದುರಾದಿಗಳು ಏನೂ ಮಾಡಲಾಗದೆ ಕೈ ಚೆಲ್ಲಿ ಕುಳಿತಿದ್ದಾರೆ. ದುಷ್ಟ ದುಶ್ಯಾಸನ ಬಿಡದೆ ವಸ್ತ್ರಾಪಹರಣಕ್ಕೆ ಮುಂದಾಗುತ್ತಿದ್ದಾನೆ, ಕೊನೆಯದಾಗಿ ದ್ರೌಪದಿ ಭಗವಂತನಾದ ಶ್ರೀಕೃಷ್ಣ ಪರಮಾತ್ಮನಿಗೆ ಶರಣಾಗುತ್ತಾಳೆ. ಆಗ ಕೃಷ್ಣ ಸಹಾಯಕ್ಕೆ ಬರುತ್ತಾನೆ. ಮುಂದೆ ನಡೆದಿದ್ದೆಲ್ಲವೂ ಒಂದು ಪವಾಡದಂತೆ. ಧರ್ಮದ ರಕ್ಷಣೆಯಾಗುತ್ತದೆ. ಅಧರ್ಮಕ್ಕೆ ಸೋಲಾಗುತ್ತದೆ. ಇದನ್ನು ಕೃಷ್ಣ ಮೊದಲೇ ಮಾಡಬಹುದಿತ್ತಲ್ಲವೇ?, ಆದರೆ ಮಾಡಲಿಲ್ಲ. ಏಕೆಂದರೆ ಕೃಷ್ಣ ಮೊದಲೇ ಸಹಾಯಕ್ಕೆ ಧಾವಿಸಿದ್ದರೆ ಪುರುಷ ಪ್ರಯತ್ನಕ್ಕೆ ಬೆಲೆಯೇ ಇರುತ್ತಿರಲಿಲ್ಲ, ಗುರು ದ್ರೋಣಾಚಾರ್ಯ, ಜಗದೇಕ ವೀರ ಕುರುಕುಲದ ಸಿಂಹಾಸನವನ್ನು ಕಾಯುವ ಪ್ರತಿಜ್ಞೆ ಮಾಡಿದ್ದ ಭೀಷ್ಮ, ಮಹಾನ ಜ್ಞಾನಿ ವಿದುರನಂತವರ ಅಸಮರ್ಥತೆ, ಅಸಹಾಯಕತೆಯಿಂದ ಕೈಚೆಲ್ಲಿ ತಲೆ ತಗ್ಗಿಸಿ ಕುಳಿತ ಪಾಂಡವರ ದುಃಸ್ಥಿತಿಯ ಅನಾವರಣವೂ ಆಗುತ್ತಿರಲಿಲ್ಲ. ಇಲ್ಲಿ ಪ್ರತೀ ಘಟನೆಯೂ ವಿಶೇಷ ಅರ್ಥಗಳಿಂದ ಕೂಡಿದ್ದೇ.

ವೈಚಾರಿಕ ಸಿದ್ದಾಂತದ ಸಂಘಟನೆಯೊಳಗೆ ಇರುವ ನಾವು ಎರಡು ರೀತಿಯಲ್ಲಿ ಇದನ್ನು ವಿಮರ್ಶಿಸಿಕೊಳ್ಳಬೇಕಿದೆ.

ಕೆಲವೊಮ್ಮೆ ಸಂಘಟನೆಯಲ್ಲಿ ಸಣ್ಣ ಪುಟ್ಟ ತಪ್ಪುಗಳು ನಡೆಯುತ್ತಿರುತ್ತವೆ. ಅದನ್ನು ನೋಡಿ ಹುದ್ದೆ, ಜವಾಬ್ದಾರಿ ಇದ್ದವರು ಕೆಲವೊಮ್ಮೆ ಪಾಂಡವರಂತೆ, ವಿದುರನಂತೆ ಏನು ಮಾಡಲಾಗದೆ ಸುಮ್ಮನಿರಬೇಕಾದ ಅನಿವಾರ್ಯತೆಯಿರುತ್ತದೆ. ಹಾಗೆಂದ ಮಾತ್ರಕ್ಕೆ ಅವರಿಗೆ ಸಂಘಟನೆಯ ಬಗ್ಗೆ ಹಿತಾಸಕ್ತಿ ಇಲ್ಲವೆಂದೇನಿಲ್ಲ, ಅಥವಾ ಸಂಘಟನೆ ಮುಳುಗಿ ಹೋಗಿಯೇ ಬಿಟ್ಟಿತು ಎಂಬುದೇನಿಲ್ಲ. ನಮ್ಮೆಲ್ಲಾ ಪ್ರಯತ್ನಗಳಾಚೆಗೆ ನಾವು ಭಗವಂತನಿಗೆ ಶರಣಾಗುವಂತೆ, ನಮ್ಮ ಸಂಕಷ್ಟಗಳ ನೋವನ್ನು ಸಂಘಟನೆಯ ವರಿಷ್ಟರಿಗೆ ತಲುಪಿಸಬೇಕು. ಆಗ ಹೇಗೆ ಭಗವಂತ ಧರ್ಮದ ರಕ್ಷಣೆಗೆ ಬರುತ್ತಾನೊ ಹಾಗೆ ಸಂಘಟನೆಯ ಹಿರಿಯರೂ ರಕ್ಷಣೆಗೆ ಬಂದೇ ಬರುತ್ತಾರೆ. ಸಶಕ್ತ ಸಂಘಟನೆ ಕಟ್ಟುವಲ್ಲಿ ಇದು ಸಹಕಾರಿಯಾಗುತ್ತದೆ. ನಮ್ಮ ಪ್ರಯತ್ನವನ್ನು ಮರೆಯಬಾರದು, ಬಿಡಬಾರದು, ನಮ್ಮ ವಿಶ್ವಾಸವನ್ನು ಕಳೆದುಕೊಳ್ಳಬಾರದು. ಹೇಗೂ ಭಗವಂತನಿದ್ದಾನೆ ಎಂದು ನಮ್ಮ ಕರ್ತವ್ಯವನ್ನೂ ಮರೆಯಬಾರದು.

ಕಳೆದ ಎರಡು ದಶಕದ ಹಿಂದೆ ಅಧರ್ಮಕ್ಕೆ ಸೋಲಾಗಿ ಸಿಂಹಾಸನದಲ್ಲಿ ಧರ್ಮದ ಆಳ್ವಿಕೆ ಆರಂಭವಾಗಿ ಮುನ್ನಡೆಯುತ್ತಿದೆ. ಹೇಗೂ ಈ ಆಳ್ವಿಕೆ ಮುಂದುವರೆಯುತ್ತದೆ ಎಂದು ಮೈ ಮರೆಯಬಾರದು. ಮೈ ಮರೆತರೆ ಮತ್ತೆ ದುಷ್ಟ ದುಶ್ಯಾಸನನಂತವರು ದ್ರೌಪದಿಯ ವಸ್ತ್ರಾಪಹರಣಕ್ಕೆ ಕಾಯುತ್ತಿರುತ್ತಾರೆ. ನಾವು ನಮ್ಮ ಸಾಮರ್ಥ್ಯದ ಮೂಲಕ ಧರ್ಮದ ಪರ ನಿಲ್ಲಬೇಕಿದೆ ಧರ್ಮಾಧಾರಿತ ಆಳ್ವಿಕೆಯನ್ನು ಮುಂದುವರೆಸಬೇಕಿದೆ.

ಸತ್ಯ ಸನಾತನದ ಗುರುತೊಂದನ್ನು ಪ್ರಭುತ್ವದ ಸಿಂಹಾಸನದಲ್ಲಿ ಮತ್ತೊಮ್ಮೆ ಸ್ಥಾಪಿಸುವತ್ತ ನಮ್ಮೆಲ್ಲಾ ಪ್ರಯತ್ನಗಳು ನಿರಂತರವಾಗಿರಲೇಬೇಕಿದೆ.

– ಸ್ವಯಂಭೂ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KKRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**